ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 24 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 276 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಯ್ಯೋ... ಅವ'ಮಾನ' ಆಯ್ತು... ಹೋಯ್ತು...

ವಿಧಾನಸಭೆಯಲ್ಲಿ ವಾಗ್ದಾಳಿ-ಪ್ರತಿ ದಾಳಿ; ಪರಿಷತ್‌ನಲ್ಲಂತೂ ಕೋಲಾಹಲ, ಮಾತಿನ ಚಕಮಕಿ

ರಾಜ್ಯಪಾಲರಿಂದ ಸದನಕ್ಕೆ ಅವಮಾನ

ಬೆಂಗಳೂರು, ಜ.23(ಕೆಎಂಶಿ)– **ಸಂಪುಟದಲ್ಲಿ ಒಪ್ಪಿಗೆ ನೀಡಿದ ಭಾಷಣವನ್ನು ರಾಜ್ಯ ಪಾಲರು ಪೂರ್ತಿಯಾಗಿ ಓದದೆ ಸದನಕ್ಕೆ ಅಪಮಾನ ಮಾಡಿದ್ದು, ಜನತೆಯಲ್ಲಿ ಕ್ಷಮೆ ಕೇಳಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ವಿಧಾನಸಭೆಯಲ್ಲಿಂದು ಆಗ್ರಹಿಸಿದರು.**

ಬಿಜೆಪಿಯವರ ವರ್ತನೆ ಸರಿಯಲ್ಲ: ರಾಜ್ಯಪಾಲರ ಭಾಷಣದ ಗದ್ದಲದ ಬಗ್ಗೆ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಗದ್ದಲ ಮಾಡಿ ಕಾಗದಪತ್ರಗಳನ್ನು ಹರಿದು ಸ್ಪೀಕರ್ ಮುಖಕ್ಕೆ ತೂರಿ ಪೀಠದ ಬಳಿಗೆ ಹೋಗಿ ಭುಜಕ್ಕೆ ಭುಜಕೊಟ್ಟು ನಿಂತಿದ್ದರು. ಅದಕ್ಕೆ 18 ಸದಸ್ಯರನ್ನು ಅಮಾನತುಗೊಳಿಸಲಾಗಿತ್ತು. ಅಂದಿನ ಘಟನೆಯನ್ನು ನಿನ್ನೆಯ ಜಂಟಿ ಅಧಿವೇಶನದ ಬಳಿಕ ನಡೆದ ಬೆಳವಣಿಗೆಗಳಿಗೆ ಹೋಲಿಕೆ ಮಾಡಿ ಸಮರ್ಥಿಸಿಕೊಳ್ಳುವ ಪ್ರಯತ್ನ ಪ್ರತಿಪಕ್ಷ ಬಿಜೆಪಿ ಮಾಡುತ್ತಿದೆ, ಇದು ಸರಿಯಲ್ಲ ಎಂದರು.

ಅಂದು ಅಪರಾಧವಾಗಿದ್ದರೆ ನಿನ್ನೆಯ ಘಟನೆ ಸಂವಿಧಾನ ರಕ್ಷಣೆಗಾಗಿ ನಡೆದಿರುವುದು. ಬಿಜೆಪಿ ಹಿಂದಿನ ಘಟನೆಗೆ ಹೋಲಿಕೆ ಮಾಡಿಕೊಂಡು ಜನರ ಮನಸ್ಸಿನಿಂದ ತಮ್ಮ ಅಪರಾಧ ಅಳಿಸುವ ತೇಪೆ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಸಂವಿಧಾನ ಕಲಂ 176(1) ಪ್ರಕಾರ ರಾಜ್ಯಪಾಲರು ವಿಧಾನಸಭೆಯ ವರ್ಷದ ಮೊದಲ ಅಧಿವೇಶನದಲ್ಲಿ ಭಾಷಣ ಮಾಡುವುದು ಕಡ್ಡಾಯ. ರಾಜ್ಯಪಾಲರು ಸಂವಿಧಾನದ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವರಿಗೆ ಯಾವ ಒತ್ತಡ ಇತ್ತು ಎಂಬುದು ಗೊತ್ತಿಲ್ಲ. ರಾಜಭವನಕ್ಕೆ ಕೇಂದ್ರ ಸರ್ಕಾರದಿಂದ ಯಾವ ರೀತಿಯ ಕರೆ ಬರುತ್ತವೆ ಎಂಬ ಕುರಿತು ನಾನು ವಿವರಣೆ ನೀಡಲು ಬಯಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯ ಸುರೇಶ್ ಕುಮಾರ್ ಮಾತನಾಡಿ, ಈ ಹಿಂದೆ ರಾಜ್ಯಪಾಲ



ರಾಗಿದ್ದ ಹಂಸರಾಜ್ ಭಾರದ್ವಾಜ್ ಅವರಿಗೆ ಆಗಿನ ಕೇಂದ್ರ ಸರ್ಕಾರ ಯಾವ ರೀತಿ ಕರೆ ಮಾಡುತ್ತಿತ್ತು ಎಂಬುದನ್ನು ಹೇಳ ಬೇಕಾಗುತ್ತದೆ ಎಂದು ಛೇಡಿಸಿದರು.

ರಾಜ್ಯಪಾಲರಿಂದ ಸಂವಿಧಾನ ಉಲ್ಲಂಘನೆ: ಇದಕ್ಕುತ್ತರಿಸಿದ ಪಾಟೀಲ್, ಸತ್ಯ ಹೇಳಿದರೆ ನೋವುಂಟಾಗುವುದು ಸಹಜ, ಆದರೆ ರಾಜ್ಯಪಾಲರ ಜವಾಬ್ದಾರಿಯ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟ ಉಲ್ಲೇಖವಿದೆ. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನಲ್ಲೂ ಸಾಕಷ್ಟು ನಿರ್ಣಯಗಳಿವೆ. ಲೋಕಸಭೆಯಲ್ಲಿ ಕೇಂದ್ರ ಗೃಹಸಚಿವರು ನೀಡಿರುವ ಹೇಳಿಕೆ ಹಾಗೂ ಸಂಸತ್‌ನಲ್ಲಿ ರಾಷ್ಟ್ರಪತಿಯವರ ಭಾಷಣದ ಸಂಪ್ರದಾಯ ಎಲ್ಲವನ್ನೂ ಪರಿಗಣಿಸಿ ಹೇಳುವುದಾದರೆ, ನಿನ್ನೆಯ ಘಟನೆಯಲ್ಲಿ ರಾಜ್ಯಪಾಲರು ಸಂವಿಧಾನ ಉಲ್ಲಂಘಿಸಿದ್ದಾರೆ ಎಂದರು. ರಾಜ್ಯ ಸರ್ಕಾರ ತನ್ನ ನೀತಿ–ನಿಲುವುಗಳನ್ನು ರಾಜ್ಯಪಾಲರ ಮೂಲಕ ಭಾಷಣ ಮಾಡಿಸಿ ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವುದು ಪ್ರಜಾಪ್ರಭುತ್ವದ ಹಾದಿಯಾಗಿದೆ. ರಾಜ್ಯಪಾಲರು ಖುಷಿಯಾಗಲಿ ಎಂದು ಭಾಷಣ ಸಿದ್ಧಪಡಿಸುವುದಿಲ್ಲ.

■6ನೇ ಪುಟಕ್ಕೆ



ಹರಿಪ್ರಸಾದ್ ಬಟ್ಟೆ ನಾವ್ ಹರಿದಿಲ್ಲ... ಅವರೇ ಹರಿ....ಪ್ರಸಾದ ಅಲ್ವೇ!

ಬೆಂಗಳೂರು, ಜ.23(ಕೆಎಂಶಿ)– ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಭಾಷಣ ಮತ್ತು ಆನಂತರ ನಡೆದ ಬೆಳವಣಿಗೆಗಳ ಬಗ್ಗೆ ವಿಧಾನಸಭೆಯಲ್ಲಿಂದು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ರಚನಾತ್ಮಕ ಚರ್ಚೆ ನಡೆಯಿತು.



ಕಲಾಪ ಆರಂಭದಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ನಿನ್ನೆ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಭಾಷಣ ಮಾಡಿ ತೆರಳುವ ವೇಳೆ ಆಡಳಿತ ಪಕ್ಷದ ಕೆಲವು ಸದಸ್ಯರು ಅವರನ್ನು ಅಡ್ಡಗಟ್ಟಿ ಅಗೌರವ ತೋರಿಸಿದ್ದಾರೆ. ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ತಮ್ಮ ಬಟ್ಟೆಯನ್ನು ಬಿಜೆಪಿಯವರು ಹರಿದು ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.

ಅವರ ಹೆಸರೇ ಹರಿ.. ಪ್ರಸಾದ್ ಹೀಗಾಗಿ ಅವರು ಹರಿದುಹೋಗಿದ್ದಾರೆ. ಘಟನೆ ವೇಳೆ ಅವರ ಹಿಂದೆ–ಮುಂದೆ ಇದ್ದವರು ಯಾರು ಎಂಬುದನ್ನು ವಿಡಿಯೋದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಿ, ಮಾರ್ಷಲ್‌ಗಳನ್ನು ಹೊರತುಪಡಿಸಿದರೆ ಬಿಜೆಪಿಯ ಯಾವ ಸದಸ್ಯರೂ ಹರಿಪ್ರಸಾದ್ ಹಿಂದೆ–ಮುಂದೆ ಇರಲಿಲ್ಲ ಎಂದರು.

ರಾಜ್ಯಪಾಲರಿಗೆ ಅಗೌರವ ತೋರಿಸಲಾಗಿದೆ. ತಳ್ಳಾಟ, ನೂಕಾಟವಾಗಿದೆ, ಒಂದು ವೇಳೆ ಹಲ್ಲೆಯಾಗಿದ್ದರೆ ಅದಕ್ಕೆ ಹೊಣೆ ಯಾರು ಎಂದು ಪ್ರಶ್ನಿಸಿದರು. ರಾಜ್ಯಪಾಲರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆಂದು ದೂರಲಾಗುತ್ತಿದೆ. ರಾಷ್ಟ್ರಗೀತೆ ಹಾಡುವ ಸ್ವಿಚ್ ಬಟನ್ ರಾಜ್ಯಪಾಲರ ಕೈಯ್ಯಲ್ಲಿ ಇರಲಿಲ್ಲ, ಭಾಷಣ ಮುಗಿಸಿ ರಾಜ್ಯಪಾಲರು ಜೈಹಿಂದ್ ಹೇಳಿದಾಗಲೇ ರಾಷ್ಟ್ರಗೀತೆ ನುಡಿಸಬೇಕಿತ್ತು. ನಿನ್ನೆ ಪರಿಸ್ಥಿತಿಯಲ್ಲಿ ರಾಜ್ಯಪಾಲರನ್ನು ಅಬಲೆಯಂತೆ

■6ನೇ ಪುಟಕ್ಕೆ

ರಾಜ್ಯಪಾಲರ ತಡೆದು ರೌಡಿಯಂತೆ ವರ್ತಿಸಿದ ಹರಿಪ್ರಸಾದ್ ಅಮಾನತು ಮಾಡಿ

ಬೆಂಗಳೂರು, ಜ.23(ಕೆಎಂಶಿ)– ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿ ನಿರ್ಗಮಿಸಿದ ವೇಳೆ ರಾಜ್ಯಪಾಲರನ್ನು ಅಡ್ಡಗಟ್ಟಿ ರೌಡಿಯಂತೆ ವರ್ತಿಸಿದ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಸದನದಿಂದ ಅಮಾನತು ಮಾಡಬೇಕೆಂದು ಪ್ರತಿಪಕ್ಷ ಬಿಜೆಪಿ ಪಟ್ಟು ಹಿಡಿದಿದ್ದರಿಂದ ವಿಧಾನಪರಿಷತ್‌ನಲ್ಲಿ ಭಾರೀ ಗದ್ದಲ, ಕೋಲಾಹಲ ಉಂಟಾಗಿ ಕಲಾಪವನ್ನು ಮುಂದೂಡಲಾಯಿತು.



ದಿನದ ಕಲಾಪ ಪ್ರಾರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪ ಪ್ರಾರಂಭಿಸಲು ಮುಂದಾಗುತ್ತಿದ್ದಂತೆ, ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ತಮಗೆ ನೀಡಿರುವ ಪತ್ರದ ಮೇಲೆ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಿ ಎಂದು ಮನವಿ ಮಾಡಿದರು. ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಗದ್ದಲ, ಮಾತಿನ ಚಕಮಕಿ ನಡೆಯಿತು.



ನಾರಾಯಣಸ್ವಾಮಿ

ವಿಷಯ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಿ ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಒತ್ತಾಯ ಮಾಡಿದಾಗ, ಆಡಳಿತ ಪಕ್ಷದ ಸದಸ್ಯ ಬಿ.ಕೆ. ಹರಿಪ್ರಸಾದ್ ಕ್ರಿಯಾಲೋಪ ಎತ್ತಲು ಮುಂದಾದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ, ಗದ್ದಲ ಉಂಟಾಯಿತು. ಸಭಾನಾಯಕ ಎನ್.ಎಸ್. ಭೋಸ್‌ರಾಜ್ ಮಾತನಾಡಿ, ಪ್ರತಿಪಕ್ಷ ಸದಸ್ಯರು ಸದನದ ಕಲಾಪ ಹಾಳು ಮಾಡಲು ಬಂದಿದ್ದಾರೆ, ಅವರಿಗೆ ಕಲಾಪ ನಡೆಯಬಾರದೆಂಬ ದುರುದ್ದೇಶವಿದೆ. ಬೇಡದ ವಿಷಯಗಳನ್ನು ಪ್ರಸ್ತಾಪಿಸಲು ಮುಂದಾಗುತ್ತಿದ್ದಾರೆ. ಸಂವಿಧಾನ ವಿರೋಧಿ ಯಾರು, ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದು ಯಾರು ಎಂಬುದು ಎಲ್ಲರಿಗೂ ಗೊತ್ತಿದೆ ಎಂದರು.

ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮಾತನಾಡಿ, ಪ್ರತಿಪಕ್ಷ ನಾಯಕರು ಇನ್ನೂ ವಿಷಯವನ್ನೇ ಪ್ರಸ್ತಾಪಿಸಿಲ್ಲ, ಅವರು ಏನು ಹೇಳುತ್ತಾರೆ ಎಂಬುದೂ ಗೊತ್ತಿಲ್ಲ. ಅದಕ್ಕೂ ಮುನ್ನವೇ ಕ್ರಿಯಾಲೋಪ ಎತ್ತಲು ಅವಕಾಶ ನೀಡಿದರೆ ಹೇಗೆ ಎಂದು ಸಭಾಪತಿ ಅವರನ್ನು ಪ್ರಶ್ನಿಸಿದರು. ಇದಕ್ಕೆ ದನಿಗೂಡಿಸಿದ ಭೋಜೇಗೌಡ, ಸಭಾನಾಯಕರಿಗೆ ಎಷ್ಟು ಸ್ಥಾನಮಾನ ಇರುತ್ತದೆಯೋ ಪ್ರತಿಪಕ್ಷದ ನಾಯಕರಿಗೂ ಸರಿಸಮಾನವಾದ ಸ್ಥಾನಮಾನ ಇರುತ್ತದೆ. ನೀವು ವಿಷಯ ಪ್ರಸ್ತಾಪಿಸಲು ಅವಕಾಶ ಕೊಡದಿದ್ದರೆ ಸದಸ್ಯರ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ ಎಂದರು. ಪ್ರತಿಪಕ್ಷದ

■6ನೇ ಪುಟಕ್ಕೆ

ಬೈಕ್ ಟ್ಯಾಕ್ಸಿಗೆ ಹೈಕೋರ್ಟ್ ಗ್ರೀನ್ ಸಿಗ್ನಲ್

ಬೆಂಗಳೂರು, ಜ.23– ರಾಜ್ಯದಲ್ಲಿ ಬೈಕ್‌ಗಳನ್ನು ಟ್ಯಾಕ್ಸಿಗಳನ್ನಾಗಿ ಬಳಸಲು ಹೈಕೋರ್ಟ್ ಅನುಮತಿ ನೀಡಿದ್ದು, ಈ ಮೂಲಕ ಬೈಕ್ ಟ್ಯಾಕ್ಸಿಗಳಿಗೆ ನಿಷೇಧ ಹೇರಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ.



ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ನಿಷೇಧಿಸಿದ್ದನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಆದರೆ ಇದೀಗ ವಿಭಾಗೀಯ ಪೀಠ ಆದೇಶ ರದ್ದುಗೊಳಿಸಿ, ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ. ಒಲಾ, ಊಬರ್ ಮತ್ತಿತರ ಅಗ್ರಿಗೇಟರ್‌ಗಳು ಸಲ್ಲಿಸಿದ ಮೇಲ್ಮನವಿಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠ ಮಾನ್ಯ ಮಾಡಿದೆ. ಇದೇ ವೇಳೆ ಸಾರಿಗೆ ವಾಹನಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಬೈಕ್ ಟ್ಯಾಕ್ಸಿಗಳಿಗೆ ಅನುಮತಿಯನ್ನು ನಿರಾಕರಿಸಲಾಗುವುದಿಲ್ಲ ಎಂದು ಹೇಳಿದೆ. ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರ ವಿಭಾಗೀಯ ಪೀಠವು ಈ ಆದೇಶವನ್ನು ನೀಡಿದೆ. ಬೈಕ್ ಮಾಲೀಕರು ಅಥವಾ ಅಗ್ರಿಗೇಟರ್‌ಗಳು ಸಾರಿಗೆ ವಾಹನಗಳನ್ನಾಗಿ ಬಳಸಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ಅರ್ಹ ಮನವಿಗಳನ್ನು ಸರ್ಕಾರ ಪುರಸ್ಕರಿಸಿ ಅನುಮತಿ ನೀಡಬೇಕು.

■6ನೇ ಪುಟಕ್ಕೆ

ರಾಜ್ಯ ರಾಜಕೀಯಕ್ಕೆ ಹೆಚ್‌ಡಿಕೆ ಎಂಟ್ರಿ ಗ್ಯಾರಂಟಿ; ಜನ ಬಯಸಿದ್ದಲ್ಲಿ ಸ್ಪರ್ಧೆ ಮಾಡ್ತೇನೆ!

ಮಂಡ್ಯ, ಜ.23– ಕರ್ನಾಟಕ ರಾಜ್ಯವೇ ನನ್ನ ಪರಿಮಿತಿ. ರಾಜ್ಯದ ಜನತೆ ನಾನು ಎಲ್ಲಿ ಸ್ಪರ್ಧಿಸಲು ಅಪೇಕ್ಷಿಪಡುತ್ತಾರೋ ಅಲ್ಲಿ ಚುನಾವಣೆಗೆ ಸ್ಪರ್ಧಿಸುತ್ತೇನೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.



ಶುಕ್ರವಾರ ತಾಲೂಕಿನ ವಿ.ಸಿ. ಫಾರಂನ ಕೃಷಿ ವಿವಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯ ರಾಜಕಾರಣಕ್ಕೆ ವಾಪಸ್ ಬರುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದ ಜನರ ಅಪೇಕ್ಷೆಯಂತೆ ನಾನು ರಾಜ್ಯದ ಯಾವುದೇ ಕ್ಷೇತ್ರದಲ್ಲಾದರೂ ಸ್ಪರ್ಧಿಸುತ್ತೇನೆ. ಮಂಡ್ಯದಿಂದ ಲೋಕಸಭೆ ಚುನಾವಣೆಗೆ ನಿಲ್ಲುವ ಯಾವುದೇ ಉದ್ದೇಶ ಇರಲಿಲ್ಲ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ನಿಲ್ಲಿಸಬೇಕು ಎಂದುಕೊಂಡಿದ್ದೆ. ಆದರೆ ಅಂದು ಜಿಲ್ಲಾ ಮುಖಂಡರ ಒತ್ತಾಯದ ಮೇರೆಗೆ ಅನಿವಾರ್ಯವಾಗಿ ನಾನು ಎಲೆಕ್ಷನ್‌ಗೆ ನಿಂತೆ. ಆದರೆ ನಾನು ಸಂಸದನಾಗುತ್ತೇನೆ. ಪ್ರಧಾನಿ ಮೋದಿ ಅವರ ಸಂಪುಟದಲ್ಲಿ ಕೇಂದ್ರ ಸಚಿವನಾಗುತ್ತೇನೆ ಅಂದು ಕೊಂಡಿರಲಿಲ್ಲ. ನಮ್ಮ ಪಕ್ಷದಿಂದ ಬೇರೆ ಪಕ್ಷಕ್ಕೆ ಹೋದವರು ಇನ್ನು ಜೆಡಿಎಸ್ ಕಥೆ ಮುಗಿಯಿತು ಎಂದರು. ಆದರೆ ನಮ್ಮ ಪಕ್ಷ ಯಾವ ರೀತಿ ಗಟ್ಟಿಯಾಗುತ್ತಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಅವರಿಗೆ ಜೆಡಿಎಸ್ ಪಕ್ಷದ್ದೇ ಯೋಚನೆ. ನಮ್ಮ ಪಕ್ಷವನ್ನು ಹೇಗೆ ಮುಗಿಸಬೇಕು ಎನ್ನುವುದೇ ಸದಾ ಅವರ ಚಿಂತೆ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ವಿರುದ್ಧ ಒಗ್ಗಟ್ಟಿನ ಹೋರಾಟ: ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಇಲ್ಲ ಎಂಬ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೇಳಿಕೆ ಸಂಬಂಧ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಾಂಗ್ರೆಸ್‌ನ ಕೆಟ್ಟ ಆಡಳಿತವನ್ನು ಕಿತ್ತೊಗೆಯಲು ರಾಜ್ಯದಲ್ಲಿ ಜೆಡಿಎಸ್– ಬಿಜೆಪಿ ಒಟ್ಟಾಗಿ ಹೋರಾಟ ನಡೆಸುತ್ತವೆ. ಈ ಹಿನ್ನೆಲೆಯಲ್ಲಿ ಜನರ ನಿರೀಕ್ಷೆಗೆ ತಕ್ಕಂತೆ ನಾವು ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯ ಮೈತ್ರಿ ಬಗ್ಗೆ ತೀರ್ಮಾನ ಮಾಡುತ್ತೇವೆ. ಸ್ಥಳೀಯ ಮಟ್ಟದಲ್ಲಿ ಪೈಪೋಟಿ ಇರುವುದು ಸಹಜ. ಎಲ್ಲಾ ಪಕ್ಷಗಳಲ್ಲಿ ಇರುತ್ತದೆ. ಕಾರ್ಯಕರ್ತರು ಸ್ಥಾನಮಾನಕ್ಕಾಗಿ ಚರ್ಚೆ ಮಾಡುತ್ತಾರೆ. ಆ ಕುರಿತು ಅಂತಿಮವಾಗಿ ನಾವು ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ಇದು ಬ್ರೋಕರ್ ಸರ್ಕಾರ: ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ರೈತ ಪರವಾಗಿಲ್ಲ. ದಲ್ಲಾಳಿಗಳಿಗೆ ಲಾಭ ಮಾಡಿಕೊಡುವ ಬ್ರೋಕರ್

■6ನೇ ಪುಟಕ್ಕೆ

ಲಂಚಾವತಾರ ಆರೋಪ; ಅಬಕಾರಿ ಸಚಿವರ ರಾಜೀನಾಮೆಗೆ ವಿಪಕ್ಷ ಸದಸ್ಯರ ಆಗ್ರಹ

ಬೆಂಗಳೂರು, ಜ.23(ಕೆಎಂಶಿ)– ಅಬಕಾರಿ ಇಲಾಖೆಯ ಎಲ್ಲ ಹಂತಗಳಲ್ಲೂ ಲಂಚಕ್ಕೆ ಬೇಡಿಕೆ ಇಟ್ಟಿರುವ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಆಗ್ರಹಿಸಿದರು.



ಆರ್.ಬಿ.ತಿಮ್ಮಾಪುರ

ಅಧಿಕಾರಿಗಳನ್ನು ತಮ್ಮ ಗಾಳಕ್ಕೆ ತಕ್ಕಂತೆ ಆಡಿಸಿಕೊಂಡು ಪ್ರತಿಯೊಂದೂ ಅನುಮತಿಗೂ ಇಂತಿಷ್ಟು ಹಣ ನೀಡಲೇಬೇಕೆಂದು ಸಚಿವರು ಮತ್ತು ಅವರ ಪುತ್ರ ನಿಗದಿಪಡಿಸಿರುವ ಮಾಹಿತಿ ಆಡಿಯೊ ಮೂಲಕ ಹೊರಬೀಳುತ್ತಿದೆ. ಇಂತಹವರನ್ನು ಸಂಪುಟದಲ್ಲಿ ಹೇಗೆ ಮುಂದುವರಿಸುತ್ತೀರಿ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು. ನಿಲುವಳಿ ಸೂಚನೆಯಡಿ ಪೂರ್ವಭಾವಿ ಪ್ರಸ್ತಾಪ ಮಾಡಿದ ಆರ್.ಅಶೋಕ್, ಲಂಚಕ್ಕೆ ಬೇಡಿಕೆ ಇಟ್ಟಿರುವ ಆರೋಪ ಪ್ರಕರಣದಲ್ಲಿ

■6ನೇ ಪುಟಕ್ಕೆ

ಈಗ 10 ರೂ.ಗೆ ಲಭ್ಯವಿದೆ ನಂದಿನಿ ಹಾಲು, ಮೊಸರು

ಹತ್ತು ಹಲವು ಉತ್ಪನ್ನಗಳ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಜ.23– ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್)ವು ಗ್ರಾಹಕರ ಬೇಡಿಕೆಯಂತೆ 10 ರೂ. ಬೆಲೆಯ ನಂದಿನಿ ಹಾಲು ಮತ್ತು ಮೊಸರು ಪೊಟ್ಟಣ ಸೇರಿದಂತೆ ಹಲವು ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದ್ದು, ಇವುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆ ಕಚೇರಿಯಲ್ಲಿ ಶುಕ್ರವಾರ ವಿದ್ಯುಕ್ತವಾಗಿ ಬಿಡುಗಡೆ ಮಾಡಿದರು.



ನಂದಿನಿ ಬ್ರ್ಯಾಂಡ್‌ನ ಹೊಸ ಉತ್ಪನ್ನಗಳನ್ನು ವಿಧಾನಸಭೆ ಕಚೇರಿಯಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

ನಂದಿನಿ ಬ್ರ್ಯಾಂಡ್ ಹೊಸ ಉತ್ಪನ್ನಗಳು: ಸಾಮಾನ್ಯ ಟೋನ್ಡ್ ಹಾಲಿಗಿಂತ ಶೇ.18ರಷ್ಟು ಪ್ರೋಟೀನ್ ಹೊಂದಿದ ಎನ್–ಪ್ರೋ ಮಿಲ್ಕ್ (ಹೈ ಪ್ರೋಟೀನ್ ಮಿಲ್ಕ್) ಅರ್ಧ ಲೀಟರ್ ಪೊಟ್ಟಣ(27 ರೂ.), ಕಡಿಮೆ ಜಿಡ್ಡಿನಾಂಶ ಹಾಗೂ 50 ಗ್ರಾಂ ಪ್ರೋಟೀನ್ ಹೊಂದಿರುವ 200 ಗ್ರಾಂ ಪೊಟ್ಟಣದ ಮೀಡಿಯಂ ಫ್ಯಾಟ್ ಪನ್ನೀರ್ ಪೊಟ್ಟಣ(90 ರೂ/ ಆರಂಭಿಕ 5 ರೂ. ರಿಯಾಯಿತಿ), ಕ್ಯೂಆರ್ ಕೋಡ್ ಇರುವ ಗುಡ್‌ಲೈಫ್ ಶುದ್ಧ ತುಪ್ಪ ಅರ್ಧ(380 ರೂ.) ಹಾಗೂ ಒಂದು ಲೀಟರ್ ಪೊಟ್ಟಣ(760 ರೂ.), ನಂದಿನಿ ಶುದ್ಧ ತುಪ್ಪ 200 ಮಿ.ಲೀ. (165 ರೂ.), 500 ಮಿ.ಲೀ.(360 ರೂ.) ಹಾಗೂ ಒಂದು ಲೀಟರ್ ಜಾರ್(720 ರೂ.), ಪ್ರೋಬಯಾಟಿಕ್ ಮೊಸರು 200 ಗ್ರಾಂ ಪ್ಯಾಕ್ (35 ರೂ./ಪ್ರಾರಂಭಿಕ 5 ರೂ. ರಿಯಾಯಿತಿ), ಪ್ರೋಬಯಾಟಿಕ್ ಮಾವಿನ ಲಸ್ಸಿ 160 ಮಿ.ಲೀ. ಪೊಟ್ಟಣ(15 ರೂ.), ಪ್ರೋಬಯಾಟಿಕ್ ಸ್ಟ್ರಾಬೆರಿ ಲಸ್ಸಿ 160 ಮಿ.ಲೀ. ಪೊಟ್ಟಣ(15 ರೂ.), ತಾಜಾ ಹಾಲಿಗೆ ಪರ್ಯಾಯವಾದ ಸಕ್ಕರೆ ಸೇರಿಸಿದ ಹಾಲಿನ ಪುಡಿ 'ಡೇರಿ ವೈಟ್ನರ್' 14 ಗ್ರಾಂ(5 ರೂ.), 28 ಗ್ರಾಂ,(10 ರೂ.), 200 ಗ್ರಾಂ(90 ರೂ.), 500 ಗ್ರಾಂ(180 ರೂ.), 1 ಕೆಜಿ (335 ರೂ.) ಹಾಗೂ 10 ಕೆಜಿ (3400 ರೂ.) ಪೊಟ್ಟಣ, ಮುಖ್ಯವಾಗಿ ಎಲ್ಲಾ ವರ್ಗದ ಗ್ರಾಹಕರಿಗೆ ಲಭ್ಯವಾಗುವಂತೆ 160 ಮಿ.ಲೀ ನಂದಿನಿ ಹಸುವಿನ ಹಾಲು ಪೊಟ್ಟಣ ಹಾಗೂ 140 ಮಿ.ಲೀ. ಮೊಸರು ಪೊಟ್ಟಣವನ್ನು 10 ರೂ. ಬೆಲೆಗೆ ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಗಿದೆ.

ಈ ಹೊಸ ಉತ್ಪನ್ನಗಳ ಬಿಡುಗಡೆ ವೇಳೆ ಶಾಸಕರಾದ ಕೆ.ವೈ.ನಂಜೇಗೌಡ, ಅಶೋಕ್ ಕುಮಾರ್ ರೈ, ಕೆಎಂಎಫ್ ಆಡಳಿತಾಧಿಕಾರಿ ಟಿಹೆಚ್‌ಎಂ ಕುಮಾರ್, ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶನಿವಾರ 24 ಜನವರಿ 2026

ನೇತಾಜಿ ಜನ್ಮ ದಿನದ ಅಂಗವಾಗಿ ರಕ್ತದಾನ



ಯುವಕರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಮೈಸೂರು, ಜ.23–ನೇತಾಜಿ ಸುಭಾಷ್ ಚಂದ್ರಬೋಸ್ ಅವರ 129ನೇ ಜನ್ಮದಿನದ ಅಂಗವಾಗಿ ಮೈಸೂರಿನ ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಸೈನಿಕ ಅಕಾಡೆಮಿ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ 30ಕ್ಕೂ ಹೆಚ್ಚು ಯುವಕರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಈ ವೇಳೆ ಮಾತನಾಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನ ಆಚರಿಸಿದರಷ್ಟೇ ಸಾಲದು, ಅವರ ಆದರ್ಶ ವಿಚಾರಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ಹೆಚ್ಚು ರಾಷ್ಟ್ರೀಯ ಮನೋಭಾವ ಬೆಳೆಸಿಕೊಳ್ಳಬೇಕು. ನೇತಾಜಿ ಅವರು ಹೇಳಿದಂತೆಯೇ ಪ್ರತಿಯೊಂದು ವಿಭಾಗದಲ್ಲೂ ನಡೆಯುವ ಅನ್ಯಾಯವನ್ನು ಪ್ರಶ್ನಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಬೋಸ್ ಅವರ ವಿಚಾರಗಳು ಯುವ ಜನತೆಗೆ ಪ್ರೇರಣೆಯ ಕಥನಗಳಾಗಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ರಾಜೀರಹಿತ ಹೋರಾಟ ಮಾಡಿದ್ದರು. ತಮ್ಮ ಬಾಲ್ಯದಿಂದಲೂ ದೇಶದ ಜನರ ವಿಮುಕ್ತಿಗಾಗಿ ನಿರಂತರವಾಗಿ ಹೋರಾಡಿದ್ದರು ಎಂದು ಸ್ಮರಿಸಿದರು. ಎನ್‌ಎಸ್‌ಜಿ ಕಮಾಂಡೋ ಹಾಗೂ ಸೈನಿಕ ಅಕಾಡೆಮಿಯ ಸಂಸ್ಥಾಪಕ ಸಿ.ಎಂ. ಶ್ರೀಧರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಮುತ್ತಣ್ಣ, ಬಿಜೆಪಿ ಮುಖಂಡ ಜೋಗಿ ಮಂಜು, ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್, ದೂರ ರಾಜಣ್ಣ, ಸದಾಶಿವ್, ಆನಂದ್, ಪ್ರಭು, ಮಮತಾ, ಶಿವು ಹಾಗೂ ಇನ್ನಿತರರು ಹಾಜರಿದ್ದರು.

ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ನೂತನ ಪದಾಧಿಕಾರಿಗಳು ಅವಿರೋಧ ಆಯ್ಕೆ



ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್‌ನ ನೂತನ ಪದಾಧಿಕಾರಿಗಳಿಗೆ ಚುನಾವಣಾಧಿಕಾರಿ ಲಾಗೈಡ್ ಮಾಸ ಪತ್ರಿಕೆಯ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಪ್ರಮಾಣ ಪತ್ರ ವಿತರಿಸಿದರು.

ಮೈಸೂರು, ಜ.23–ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್‌ಗೆ 2026–29ರ ಅವಧಿಯ ಆಡಳಿತ ಮಂಡಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೈಸೂರಿನ ಏರ್‌ಲೈನ್ಸ್ ಹೋಟೆಲ್ ಸಭಾಂಗಣದಲ್ಲಿ ಜ.22ರಂದು ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಚುನಾವಣಾಧಿಕಾರಿಯಾಗಿ ಲಾಗೈಡ್ ಮಾಸ ಪತ್ರಿಕೆಯ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರು ಕಾರ್ಯನಿರ್ವಹಿಸಿದ್ದು, ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಸೇರಿದಂತೆ ಎಲ್ಲಾ ಸ್ಥಾನಗಳಿಗೆ ಸಲ್ಲಿಸಿದ್ದ ನಾಮಪತ್ರಗಳನ್ನು ಪರಿಶೀಲಿಸಿ, ಎಲ್ಲಾ ಸ್ಥಾನಗಳಿಗೂ ತಲಾ ಒಂದೊಂದು ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಘೋಷಿಸಿದರು.

ಅಧ್ಯಕ್ಷರಾಗಿ ಪ್ರಗತಿಗೋಪಾಲಕೃಷ್ಣ, ಉಪಾಧ್ಯಕ್ಷರಾಗಿ ಕೆ.ಹೆಚ್.ಚಂದ್ರು, ಪ್ರಧಾನ ಕಾರ್ಯದರ್ಶಿಯಾಗಿ ಲಕ್ಷ್ಮೀನಾರಾಯಣ್ ಯಾದವ್ ಹಾಗೂ ಖಜಾಂಚಿಯಾಗಿ ಉದಯಶಂಕರ್ ಅವರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿ, ಪ್ರಮಾಣ ಪತ್ರ ವಿತರಿಸಿದರು. ಸದಸ್ಯರಾದ ಅನುರಾಗ ಬಸವರಾಜು, ಗವಿಮಠ ರವಿ, ಎಸ್.ಆರ್.ಮಧುಸೂಧನ್, ನಾಗೇಶ್ ಪಾಣಪತ್ತಲೆ, ಎ.ನಂದನ್ ಉಪಸ್ಥಿತರಿದ್ದರು.

ಹಾಲು ಕರೆಯುವ ಸ್ಪರ್ಧೆ



ಮೈಸೂರು ನಗರ ಗೋಪಾಲಕರ ಸಂಘ ಮತ್ತು ಪಶುಸಂಗೋಪನೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಶಾಸಕ ಕೆ.ಹರೀಶ್ ಗೌಡ ಅವರ ನೇತೃತ್ವದಲ್ಲಿ ನಡೆಯುತ್ತಿರುವ 20ನೇ ವಾರ್ಷಿಕೋತ್ಸವದ ಪ್ರಯುಕ್ತ ಕರ್ನಾಟಕ ರಾಜ್ಯ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಪ್ರಾರಂಭವಾದ ಶ್ರೀ ಕೃಷ್ಣ ಪರಮಾತ್ಮನ ರಥದ ಮೆರವಣಿಗೆ, ಗೋಪೂಜೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಅಧ್ಯಕ್ಷ ಡಿ.ನಾಗಭೂಷಣ್, ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಕಾರ್ಯದರ್ಶಿ ಶಿವಣ್ಣ , ವಿನಯ್ ಕುಮಾರ್.ಜೆ, ಗುಣಶೇಖರ್ ಮತ್ತಿತರರು ಭಾಗವಹಿಸಿದ್ದರು.

ನಿಧನ



ಎಂ.ಆರ್. ಇಂದಿರಾ

ಮೈಸೂರು, ಜ.23– ಮೈಸೂರಿನ ನಿವೇದಿತಾನಗರದ ನಿವಾಸಿ ದಿವಂಗತ ಎಸ್. ನಾರಾಯಣಗೌಡರ ಪತ್ನಿ ಎಂ.ಆರ್. ಇಂದಿರಾ (93) ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂತೋಣಿ ಸಲ್ಡಾನಾ



ಮೈಸೂರು: ಪಾಲಹಳ್ಳಿ ನಿವಾಸಿ ಶತಾಯುಷಿ ಅಂತೋಣಿ ಸಲ್ಡಾನಾ(100) ಗುರುವಾರ ನಿಧನರಾದರು. ಶ್ರೀಯುತರು ಮೈಸೂರು ಡಯೋಸೇಷನ್ ಎಜುಕೇಷನಲ್ ಸೊಸೈಟಿ ಕಾರ್ಯದರ್ಶಿ ರೆ. ಫಾ.ಎಡ್ವರ್ಡ್ ವಿಲಿಯಂ ಸಲ್ಡಾನಾ ಸೇರಿದಂತೆ ಮೂವರು ಪುತ್ರರು, ಐವರು ಪುತ್ರಿಯರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಪಾಲಹಳ್ಳಿಯ ಬಾಪ್ಟಿಸ್ಟ್ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ಬಳಿಕ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವನಜಾಕ್ಷಿ



ಮೈಸೂರು, ಜ.23– ಬನ್ನೂರು ಪಟ್ಟಣದ ನಿವಾಸಿ ವಿಷಕಂಠೇಗೌಡರ ಪತ್ನಿ ವನಜಾಕ್ಷಿ(47) ಅವರು ಶುಕ್ರವಾರ ನಿಧನರಾದರು.

ಇವರು ಪತಿ, ಪುತ್ರಿಯರಾದ ಬಿ.ವಿ.ಅಮೂಲ್ಯ, ಬಿ.ವಿ.ಅಪೂರ್ವ, ಪುತ್ರ ನಂಜೇಶ್ ಗೌಡ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬನ್ನೂರಿನ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಕೆ.ಶ್ರೀನಿವಾಸ್



ಮೈಸೂರು, ಜ.23– ಹುಣಸೂರು ತಾಲೂಕು ತೆಂಕಲಕೊಪ್ಪಲು ಗ್ರಾಮದ ಟಿ.ಸಿ.ಕೇಶವೇಗೌಡರ ಪುತ್ರ, ರೈಸ್‌ಮಿಲ್ ಮಾಲೀಕ ಟಿ.ಕೆ.ಶ್ರೀನಿವಾಸ್(58) ಇಂದು ಸಂಜೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ 12 ಗಂಟೆ ನಂತರ ಸ್ವಗ್ರಾಮ ತೆಂಕಲಕೊಪ್ಪಲಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೂರಜ್



ಮೈಸೂರು, ಜ.23– ಮೈಸೂರು ಕುವೆಂಪುನಗರ ನಿವಾಸಿ ಜೆ.ಸೂರಜ್(30) ಶುಕ್ರವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಅಜ್ಜಿ, ತಾತಾ ಹಾಗೂ ಬಂದು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಖಾಸಗಿ ಯೂಟ್ಯೂಬ್ ಚಾನಲ್‌ನಲ್ಲಿ ವೀಡಿಯೋ ಎಡಿಟಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು.

ಆಡಳಿತಾಧಿಕಾರಿ ನೇಮಕ ಕೈಬಿಡಿ, ಈಗಿರುವ ಆಡಳಿತ ಮಂಡಳಿ ಮುಂದುವರೆಸಿ

ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದಿಂದ ಪ್ರತಿಭಟನೆ

ಮೈಸೂರು, ಜ.23(ಜಿಎ)–ಗ್ರಾಮ ಪಂಚಾಯಿತಿಗಳ ಆಡಳಿತಾಧಿಕಾರಿ ನೇಮಕ ಹಿಂಪಡೆದು ಹಾಲಿ ಇರುವ ಆಡಳಿತ ಮಂಡಳಿಯನ್ನೇ ಮುಂದುವರೆಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಗ್ರಾಮ ಪಂಚಾಯಿತಿಗಳು ತಳ ಹಂತದ ಗ್ರಾಮಗಳ ಆಡಳಿತ ಕೇಂದ್ರವಾಗಿವೆ. ಸಂವಿಧಾನದ ಆಶಯ ಜಾರಿಗೊಳಿಸುವಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಹಿಂದುಳಿದ ವರ್ಗ, ಶೋಷಿತ ಸಮುದಾಯಗಳು ಹಾಗೂ ಮಹಿಳೆಯರು ರಾಜಕೀಯ ಅಧಿಕಾರ ಬಳಸುವ ಅವಕಾಶ ನೀಡಿದೆ. ಈಗಾಗಲೇ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಸಕಾಲಕ್ಕೆ ಚುನಾವಣೆ ನಡೆಯದೆ 5,000ಕ್ಕೂ ಹೆಚ್ಚು ಗ್ರಾಮೀಣ ನಾಯಕತ್ವದ ಅವಕಾಶವನ್ನು ಕಸಿದು ಅಧಿಕಾರಶಾಹಿಗಳ ಮುಖಾಂತರ ಆಡಳಿತ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ಕೋವಿಡ್ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಎರಡು ವರ್ಷಗಳ ಕಾಲ ನಿರಂತರವಾಗಿ ಜೀವ ಭಯವಿದ್ದರೂ ಜನರ ಕಷ್ಟಗಳಿಗೆ ಸ್ಪಂದಿಸಿದ ಇತಿಹಾಸ ಇರುವುದರಿಂದ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ 1 ಲಕ್ಷಕ್ಕೂ ಹೆಚ್ಚು ಗ್ರಾಮೀಣ ನಾಯಕತ್ವದ ಪ್ರತಿಭೆಗಳನ್ನು ಉಳಿಸುವ ಅತ್ಯಮೂಲ್ಯ ಜವಾಬ್ದಾರಿ ರಾಜ್ಯ ವಿಧಾನ ಸಭೆಯ ಮೇಲಿದೆ. ಕ್ಷೇತ್ರ ವಿಂಗಡಣೆ ಹೊಸ ಹೊಸ ಆಲೋಚನೆಗಳು ಚುನಾವಣೆಯನ್ನು ಮುಂದಕ್ಕೆ ಹಾಕುವ ಅನಿವಾರ್ಯತೆಯನ್ನು ಸರ್ಕಾರದಲ್ಲಿ ತಂದೊಡ್ಡುಬಹುದು. ಹಾಗಾಗಿ ಆಡಳಿತಾಧಿಕಾರಿ ನೇಮಕ ಮಾಡುವ ಪ್ರಸ್ತಾವ ಕೈ ಬಿಟ್ಟು, ಗ್ರಾಮ ಪಂಚಾಯಿತಿ ಸದಸ್ಯರ ಆಡಳಿತಾವಧಿ ಮುಗಿದ ನಂತರ ರಾಜ್ಯ ಚುನಾವಣಾ ಆಯೋಗ ಗ್ರಾಮ ಪಂಚಾಯಿತಿ ಚುನಾವಣೆಯ ಅಧಿಸೂಚನೆ ಹೊರಡಿಸುವವರೆಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ಸದಸ್ಯರ ಆಡಳಿತ ಮಂಡಳಿಯನ್ನು ಯಥಾವತ್ ಮುಂದುವರಿಸಬೇಕು. ಈ ಸಂಬಂಧ ತಿದ್ದುಪಡಿ ಮಾಡುವ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆ ಉಳಿಸಬೇಕು ಎಂದು ಒತ್ತಾಯಿಸಿದರು.



ಗ್ರಾಮ ಪಂಚಾಯಿತಿಗಳ ಆಡಳಿತಾಧಿಕಾರಿ ನೇಮಕ ಹಿಂಪಡೆಯುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಜೆ.ಹೆಚ್.ಪಟೇಲ್ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಆಡಳಿತಾವಧಿ ಮುಕ್ತಾಯವಾಗಿದ್ದರೂ 15 ತಿಂಗಳುಗಳ ಕಾಲ ಹಾಲಿ ಸಮಿತಿಯನ್ನೇ ಮುಂದುವರಿಸಿದ ಉದಾಹರಣೆ ಇದೆ. ಹೀಗಾಗಿ ಈ ಅಂಶವನ್ನು ಪರಿಗಣಿಸಿ ನಮ್ಮ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಎನ್.ಯದುನಾಡು ನಾಗರಾಜು, ಪ್ರಧಾನ ಕಾರ್ಯದರ್ಶಿ ಎಡತೊರೆ ಮಹೇಶ್, ರಾಜು ಹುಣಸೂರು, ನಿಶಾಂತ್, ನಂದಕುಮಾರ್, ರಾಮೇಗೌಡ, ರವಿಚಂದ್ರ, ನಟರಾಜು, ಚಂದ್ರಶೇಖರ್, ದ್ರಾಕ್ಷಾಯಿಣಿ, ಬೃಂದಾ ಕೃಷ್ಣೇಗೌಡ, ಸೌಮ್ಯ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕಕ್ಷಿದಾರರಿಗೆ ನ್ಯಾಯ ದೊರಕಿಸಿಕೊಡುವ ಆತ್ಮವಿಶ್ವಾಸವಿರಲಿ

ವಕೀಲರಿಗೆ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಕಿವಿಮಾತು

ಮೈಸೂರು, ಜ.23(ಎಂಕೆ)– ಕಾನೂನು ಪದವಿ ಮುಗಿಸಿ ವಕೀಲ ರಾಗುವವರು ಮಾನವೀಯ ಮೌಲ್ಯಗಳ ಜೊತೆಗೆ ತಮ್ಮ ಕಕ್ಷಿದಾರರಿಗೆ ನ್ಯಾಯ ದೊರಕಿಸಿಕೊಡುವ ಆತ್ಮವಿಶ್ವಾಸವನ್ನು ಮೈಗೂಡಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಸ್ಕೂಲ್ ಆಫ್ ಲಾ ವಿಭಾಗದಲ್ಲಿ ವಾಯು ಮತ್ತು ಬಾಹ್ಯಾಕಾಶ ಕಾನೂನು ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ನೆಲೆಗೊಳ್ಳಲು ವಕೀಲರ ಪಾತ್ರವೂ ಮುಖ್ಯವಾಗಿದ್ದು, ನೊಂದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಶ್ರಮಿಸಬೇಕಿದೆ ಎಂದರು.

ಪ್ರಸ್ತುತ ಕಾಲಘಟ್ಟದಲ್ಲಿ ಪದವಿ ಗಳಿಕೆಗಿಂತ ಕೌಶಲ್ಯಯುತ ಜ್ಞಾನದ ಸಂಪಾದನೆ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಬಾಹ್ಯಾಕಾಶ ಮತ್ತು ವಾಯು ಪ್ರದೇಶಗಳ ಕುರಿತು ಕಾನೂನಿನ ಬಗ್ಗೆ ಜ್ಞಾನ ಪಡೆಯುವ ನಿಟ್ಟಿನಲ್ಲಿ ಕಾರ್ಯಾಗಾರ ಆಯೋಜನೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ವಾಯು–ಬಾಹ್ಯಾಕಾಶ ಕಾನೂನು ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿದರು.

ಕಾನೂನು ಪದವಿಗಳಿಸಿ ಉತ್ತಮ ವಕೀಲರಾದವರು ಮಾನವೀಯ ಮೌಲ್ಯಗಳನ್ನು ಬಿಡಬಾರದು. ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸಮಾನತೆಯಿಂದ ಬದುಕಲು ಕಲಿಯಬೇಕು. ಕೌಶಲ್ಯತೆ ಗಳಿಂದ ಕಷ್ಟಕರ ಕಾರ್ಯವನ್ನು ಜಾಣ್ಮೆಯಿಂದ ಯಶಸ್ವಿಯಾಗಿ ಪೂರ್ಣಗೊಳಿಸುವ ಚಾಕಚಕ್ಯತೆ ಪಡೆದುಕೊಳ್ಳ ಬೇಕು ಎಂದು ಕಿವಿಮಾತು ಹೇಳಿದರು.


ಮಲ್ಟಿ ನ್ಯಾಷನಲ್ ಕಂಪನಿಗಳು ತಮ್ಮ ಸಂಸ್ಥೆಗಳಿಗೆ ಕಾನೂನು ಪರಿಣಿತರನ್ನು ಮತ್ತು ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳುತ್ತಾರೆ. ಕಾನೂನು ಎಲ್ಲ ಕ್ಷೇತ್ರಕ್ಕೂ ಅನಿವಾರ್ಯವಾಗಿರುವುದರಿಂದ, ವಕೀಲರಿಗೆ ತುಂಬ ಬೆಲೆ ಇದೆ. ಆದರೆ, ವಕೀಲರಾಗುವ ವಿದ್ಯಾರ್ಥಿಗಳು, ಹಿರಿಯ ವಕೀಲರು ಪ್ರಕರಣ ಗೆಲ್ಲುವ ಮತ್ತು ತಮ್ಮ ಕಕ್ಷಿದಾರರಿಗೆ ನ್ಯಾಯ ದೊರಕಿಸಿಕೊಡುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ನಕರಾತ್ಮಕ ವಿಚಾರಕ್ಕಿಂತ, ಸಕರಾತ್ಮಕತೆಗೆ ಹೆಚ್ಚಿನ ಆದ್ಯತೆ ನೀಡಿ ಎಂದು ತಿಳಿಸಿದರು.

ಇಸ್ರೋ ಮಾಜಿ ವಿಜ್ಞಾನಿ ಡಾ.ಸುದರ್ಶನ ರಾಮರಾಜು, ಸ್ಕೂಲ್ ಆಫ್ ಲಾ ವಿಭಾಗದ ನಿರ್ದೇಶಕ ಡಾ.ಟಿ.ಆರ್. ಮಾರುತಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕೆ.ಜಿ.ಕೊಪ್ಪಲು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 36ನೇ ಕುಂಭಾಭಿಷೇಕ

ಮೈಸೂರು: ಕೆ.ಜಿ. ಕೊಪ್ಪಲು ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ 36ನೇ ವರ್ಷದ ಕುಂಭಾಭಿಷೇಕ ಜ.25ರಂದು ನೆರವೇರಲಿದೆ. ಅಂದು ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದ್ದು, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಶಾಸಕರಾದ ಕೆ.ಹರೀಶ್‌ಗೌಡ, ಜಿ.ಟಿ.ದೇವೇಗೌಡ, ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್ ಆರ್.ಲಿಂಗಪ್ಪ, ಹಿರಿಯ ವಕೀಲ ಸಿ.ಬಸವರಾಜು, ಗ್ರಾಮದ ಯಜಮಾನರು ಸೇರಿದಂತೆ ಹಲವು ಗಣ್ಯರು, ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.1.2026 ಶನಿವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಪಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಸ್ಪತ್ರೆ :** ನರ–ಸ್ನಾಯು ಕ್ಷೀಣತೆ ಜಾಗೃತಿ ಕಾರ್ಯಕ್ರಮ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಅತಿಥಿಗಳು : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ. ಸಿ.ಪಿ. ಮಧು, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10ಕ್ಕೆ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಉದ್ಘಾಟನೆ : ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.
- **ಅದಮ್ಯ ರಂಗಶಾಲೆ :** ಮಧ್ಯಾಹ್ನ 2.30ಕ್ಕೆ ಮಕ್ಕಳ ಸಾಂಸ್ಕೃತಿಕ ಉತ್ಸವ, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಲೇಖಕಿ ಪ್ರೊ. ಷಹಸೀನಾ ಬೇಗಂ, ಚನ್ನಪಟ್ಟಣದ ಪೊಲೀಸ್ ತರಬೇತಿ ಶಾಲೆಯ ಪೊಲೀಸ್ ಉಪಅಧೀಕ್ಷಕ ಸಿ.ಕಿರಣ್‌ಕುಮಾರ್ ಹಾಗೂ ಹುಣಸೂರಿನ ಶಾಸ್ತ್ರೀ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಂ.ಎಲ್. ರವಿಶಂಕರ್ ಅವರಿಗೆ ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಉದ್ಘಾಟನೆ : ಕರಾಮುವಿವಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷೆ ಡಾ.ಕವಿತಾ ರೈ, ಅಧ್ಯಕ್ಷತೆ : ಕರ್ನಾಟಕ ಮಾಹಿತಿ ಆಯೋಗದ ನಿಕಟಪೂರ್ವ ಆಯುಕ್ತ ಕೆ.ಎಂ. ಚಂದ್ರೇಗೌಡ, ಆಶಯ ನುಡಿ : ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಿರಿಯ ಸಾಹಿತಿ ಮತ್ತು ಅಂಕಣಕಾರ ಮಿರ್ಲೆ ಚಂದ್ರಶೇಖರ, ಎನ್.ಎಲ್. ಗಿರೀಶ್; ಸಂಜೆ 4.30ಕ್ಕೆ ಅದಮ್ಯ ಚಿಗುರು– ಪ್ರತಿಭಾ ಚೇತನ ಪ್ರಶಸ್ತಿ' ಹಾಗೂ 'ಸ್ವಾಮಿ ವಿವೇಕಾನಂದ ಸಮಾಜಸೇವಾ ಪ್ರಶಸ್ತಿ' ಪ್ರದಾನ ಸಮಾರಂಭ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ಹಿರಿಯ ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಚಾಮರಾಜನಗರ ಜಿಲ್ಲೆಯ ಲೋಕಾಯುಕ್ತ ಉಪ ಅಧೀಕ್ಷಕ ಜಿ.ಎಸ್. ಗಜೇಂದ್ರ ಪ್ರಸಾದ್, ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಪಿ. ಪ್ರಶಾಂತ್ ಗೌಡ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ನಾಗರಾಜು ವಿ.ಬೈರಿ, ಗುಬ್ಬಿವಾಣಿ ಟ್ರಸ್ಟಿನ ಅಧ್ಯಕ್ಷೆ ಮಾಲವಿಕ ಗುಬ್ಬಿವಾಣಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಎಸ್ .ಬಿ.ಸತೀಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ.
- **ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** 'ಚೇತನೋತ್ಸವ–2026' ಶಾಸ್ತ್ರೀಯ ನೃತ್ಯ ಪ್ರದರ್ಶನ, ಉದ್ಘಾಟನೆ : ಉದ್ಯಮಿ ಎಂ.ಜಗನ್ನಾಥ ಶೆಣೈ, ಮುಖ್ಯ ಅತಿಥಿಗಳು : ಯೋಗನರಸಿಂಹಸ್ವಾಮಿ ದೇವಸ್ಥಾನ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ತಿ.ನರಸೀಪುರ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ, ವಕೀಲ ವಿಶ್ವನಾಥ ದೇವಸ್ಯ, ಸಮಾಜ ಸೇವಕ ಅಚ್ಯುತ ರಾಮ ಪ್ರಸಾದ ಕಾಮತ್, ಸ್ಥಳ: ಜಗನ್ಮೋಹನ ಅರಮನೆ, ಮಧ್ಯಾಹ್ನ 3.30 ರಿಂದ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಉತ್ತರಾಯಣ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.
- **ಇಸ್ಕಾನ್, ಮೈಸೂರು :** ಶ್ರೀ ಶ್ರೀ ಕೃಷ್ಣ ಬಲರಾಮ ರಥಯಾತ್ರೆ, ಸಂಜೆ 4.30ಕ್ಕೆ ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಉದ್ಘಾಟನೆ, ರಾತ್ರಿ 8.30ಕ್ಕೆ ಸಂಕೀರ್ತನೆಯೊಂದಿಗೆ ಆರತಿ, ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಪತ್ರಿಕಾಧ್ವನಿ–ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ.ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿ ಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ –ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ–ವ್ಯವಹಾರ ಅಧ್ಯಯನ ಭಾಗವಹಿಸುವವರು–ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಚಿನಕುರಳಿಯ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ನಿಶಾಂತ್ ಎ. ನಾಯ್ಡು, ಪ್ರಸ್ತುತಿ–ದಿಗ್ವಿಜಯ್ .ಬಿ., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಹರಿಣಿ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, ಮೈಸೂರಿನ ಅಜ್ಜನ ಮನೆ ಕಲಾಪ್ರಪಂಚದ ಮಕ್ಕಳಿಂದ ವಿವಿಧ ವಾದ್ಯಗಳ ಗೋಷ್ಠಿಯನ್ನು ಕೇಳುವಿರಿ, 4.00 ನಾಟಕ–ಗೋವಿನ ಹಾಡು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಚಿಕ್ಕಹುಂಡಿ ಗ್ರಾಮದ ಕೃಷಿಕ ದಂಪತಿ ಪುಟ್ಟರಾಜು ಹಾಗೂ ಸಿ. ಮಾಲತಿ. ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 916, ಕಥೆ ಹೇಳುವವರು: ಶ್ರೀಮತಿ ಅಶ್ವಿನಿ ಎಂ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಉತ್ತರ ವಲಯ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಡಿವಿಜಿ ಬಳಗ ಪ್ರತಿಷ್ಠಾನ, ಬ್ರಹ್ಮ ವಿದ್ಯಾ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ :** ಸಂಗೀತ ದರ್ಶನ: ಸಪ್ತಮರಿ, ರಾ.ಸ. 100 ಅಬ್ದಿಪೂರ್ವ ಉತ್ಸವ, ವಿಶೇಷ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ: ವಿದ್ವಾನ್ ಡಾ. ರಾ.ಸ. ನಂದಕುಮಾರ್, ವಿದುಷಿ ಡಾ. ರಾಧಿಕಾ ನಂದಕುಮಾರ್, ವಿಶೇಷ ಅತಿಥಿಗಳು : ನ್ಯಾಯಶಾಸ್ತ್ರ ವಿದ್ವಾಂಸ ವಿದ್ವಾನ್ ಡಾ. ಎಂ.ಎ. ಆಳ್ವಾರ್, ಸ್ಥಳ: 3ನೇ ಮಹಡಿ, ಬಿಎಸ್‌ಎಸ್ ವಿದ್ಯೋದಯ, ಸಂಜೆ 5.30ಕ್ಕೆ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ :** ರಾಮಾಯಣ ಪ್ರವಚನ ಮಾಲಿಕೆ ಆರಂಭೋತ್ಸವ ಮತ್ತು ಉದ್ಘಾಟನೆ, ಉದ್ಘಾಟನೆ : ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಮುಖ್ಯ ಅತಿಥಿಗಳು : ಹಿರಿಯ ನ್ಯಾಯವಾದಿ ಓ. ಶ್ಯಾಮ ಭಟ್, ವೇದಿಕೆ ಅಧ್ಯಕ್ಷ ವಿದ್ವಾನ್ ಗ.ನಾ. ಭಟ್ಟ, ಅವರಿಂದ ಕಿಷ್ಕಿಂದಕಾಂಡ ಪ್ರವಚನ ಎಂಟನೇ ಸರಣಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ವ್ಯವಸ್ಥಾಪಕರು :** ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದ್ವಾನ್ ಕುನ್ನಕುಡಿ ಬಾಲಮುರಳಿಕೃಷ್ಣ ಅವರಿಂದ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ತುಮಕೂರು ರವಿಶಂಕರ್–ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ–ಘಟಂ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 6 ರಿಂದ.
- **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಥಿಯೇಟರ್ :** ಸೃಜನಾತ್ಮಕ ಬೆಸುಗೆ ಸಂಗೀತ–ನಾಟಕ–ವಿಜ್ಞಾನ, ವಿಜ್ಞಾನ ಮತ್ತು ಸಂಗೀತದ ಮೇಳ, ಗಾಯಕ, ನಾಟಕಕಾರ ಎಂ.ಕೆ. ಶಂಕರ್ ಅವರೊಂದಿಗೆ ಸಂವಾದ ಸಂಜೆ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಸಂಜೆ 6ಕ್ಕೆ
- **ಗಾನಭಾರತೀ :** ಶ್ರೀಮತಿ ಪದ್ಮಾವತಿ ಡೋಂಗ್ರೆ ಸಂಸ್ಮರಣಾ ಕಾರ್ಯಕ್ರಮ, ಹರಿದಾಸೋತ್ಸವ, ವಿದ್ವಾನ್ ಎನ್. ಶ್ರೀನಾಥ್ ಅವರಿಂದ ಗಾಯನ, ವಿದ್ವಾನ್ ಎಂ.ಡಿ. ಅರ್ಜುನ್–ಪಿಟೀಲು, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ : ವೀಣೆ ಶೇಷಣ್ಣ ಭವನ, ಕುವೆಂಪುನಗರ, ಆದಿಚುಂಚನಗಿರಿ ರಸ್ತೆ, ಸಂಜೆ 6ಕ್ಕೆ.
- **ಮೈಸೂರು ನಗರ ಗೋಪಾಲಕರ ಸಂಘ :** ಕರ್ನಾಟಕ ರಾಜ್ಯ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಲಕ್ಷ್ಮಣ್, ಆರ್. ಮೂರ್ತಿ, ಡಾ.ಬಿ.ಜೆ. ವಿಜಯಕುಮಾರ್, ಅನಂತು, ಆಯೂಬ್ ಖಾನ್, ಎಂ.ಕೆ. ಸೋಮಶೇಖರ್, ಕವೀಶ್‌ಗೌಡ, ಡಾ.ನಾಗರಾಜು, ಡಾ. ಎಂ.ಪಿ. ಪೂರ್ಣಾನಂದ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಜೆ.ಕೆ. ಮೈದಾನ, ಸಂಜೆ 6.30ಕ್ಕೆ.
- **ಶ್ರೀ ಗ್ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಕಲಾಂಬಿಕಾ ಸಹೋದರಿಯರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ದ್ವಂದ್ವ ಗಾಯನ, ವಿದ್ವಾನ್ ವಿ. ವಿಶ್ವಜಿತ್–ಪಿಟೀಲು, ವಿದ್ವಾನ್ ಡಾ. ಡಿ.ವಿ. ಪ್ರಹ್ಲಾದರಾವ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30 ರಿಂದ.
- **ಬಿದಿರು ಥಿಯೇಟರ್ :** ನಗೆ ನಾಟಕ ರಂಗಣ್ಣನ ರಾದ್ಧಾಂತ, ನಿರ್ದೇಶನ : ಮಂಜುನಾಥ್ ಬ್ಯಾಟೆ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಅಪ್ರಾಪ್ತರಿಂದ ಕಾರು ಚಾಲನೆ ಚೆಲ್ಲಾಟ!

● ನಾಲ್ವರಿಗೆ ಗಾಯ ● ಹಿಡಿದು ಪೊಲೀಸರಿಗೆ ಒಪ್ಪಿಸಿದ ಸಾರ್ವಜನಿಕರು

ಮೈಸೂರು, ಜ.23(ವಿವಿಹೆಚ್)– ಅಪ್ರಾಪ್ತ ಬಾಲಕ ಅಡ್ಡಾದಿಡ್ಡಿ ಕಾರು ಚಲಾಯಿಸಿ, ವಾಹನಗಳು ಹಾಗೂ ಪಾದ ಚಾರಿಗಳಿಗೆ ಡಿಕ್ಕಿ ಹೊಡೆದು ಪರಾರಿಯಾಗಲು ಯತ್ನಿಸಿದಾಗ ಸಾರ್ವಜನಿಕರು ಹಿಂಬಾಲಿಸಿ ಅವರನ್ನು ಹಿಡಿದು ಪೊಲೀಸರಿಗೊಪ್ಪಿಸಿರುವ ಘಟನೆ ಮೈಸೂರಿನಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ವಿಜಯನಗರ ಮೊದಲನೇ ಹಂತದ ವಾಟರ್ ಟ್ಯಾಂಕ್ ಬಳಿ ಈ ಘಟನೆ ಸಂಭವಿಸಿದ್ದು, ನಾಲ್ಕೈದು ಮಂದಿ ಗಾಯಗೊಂಡು ಎರಡು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ. ಅಪ್ರಾಪ್ತ ಚಲಾಯಿಸುತ್ತಿದ್ದ ಕಾರಿನಲ್ಲಿ ಆತನ ಮೂರ್‍ನಾಲ್ಕು ಸ್ನೇಹಿತರಿದ್ದು, ಅವರು ಮದ್ಯಪಾನ ಮಾಡಿರುವಂತೆ ಕಂಡುಬಂದಿದ್ದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ವಾಟರ್ ಟ್ಯಾಂಕ್ ಕಡೆಯಿಂದ ಕೃಷ್ಣದೇವರಾಯ ವೃತ್ತದ ಕಡೆಗೆ ವೇಗವಾಗಿ ಸಂಚರಿಸುತ್ತಿದ್ದ ಕಾರು, ರಸ್ತೆ ಬದಿ ನಡೆದು ಹೋಗುತ್ತಿದ್ದ ಇಬ್ಬರು ಯುವತಿಯರಿಗೆ ಡಿಕ್ಕಿ ಹೊಡೆದಿದೆ. ಇದನ್ನು ಗಮನಿಸಿದ ಜನ, ಯುವತಿಯರ ರಕ್ಷಣೆಗೆ ದೌಡಾಯಿಸಿದ್ದಾರೆ. ಈ ವೇಳೆ ಅಪ್ರಾಪ್ತ ಕಾರು ಚಾಲನೆ ಮಾಡುತ್ತಿರುವುದನ್ನು ಗಮನಿಸಿದ್ದಾರೆ. ಆಗ ಗಾಬರಿಗೊಂಡ ಆತ, ತಪ್ಪಿಸಿಕೊಳ್ಳಲು ಸುಮಾರು 500 ಮೀಟರ್ ಹಿಮ್ಮುಖವಾಗಿ ಕಾರು ಚಾಲಿಸಿ ಮತ್ತಿಬ್ಬರಿಗೆ ಡಿಕ್ಕಿ ಹೊಡೆದಿದ್ದಾನೆ. ಅಲ್ಲದೆ ಎರಡು ದ್ವಿಚಕ್ರ ವಾಹನಗಳಿಗೂ ಗುದ್ದಿಸಿ, ಸ್ಥಳದಿಂದ ಪರಾರಿಯಾಗಿದ್ದಾನೆ.

ಇದರಿಂದ ಆತಂಕಗೊಂಡ ಸಾರ್ವಜನಿಕರು, ಹೀಗೆ ಬಿಟ್ಟರೆ ಮತ್ತೇನು ಅನಾಹುತ ಮಾಡುತ್ತಾರೋ ಎಂದು ದ್ವಿಚಕ್ರ ವಾಹನಗಳಲ್ಲಿ ಕಾರನ್ನು ಹಿಂಬಾಲಿಸಿದ್ದಾರೆ. ಯೋಗ ನರಸಿಂಹಸ್ವಾಮಿ ದೇವಸ್ಥಾನದ ಸಮೀಪವಿರುವ ಖಾಸಗಿ ಅಪಾರ್ಟ್‌ಮೆಂಟ್ ಬಳಿ ಕಾರು ನಿಲ್ಲಿಸಿದಾಗ ಹುಡುಗರನ್ನು ಹಿಡಿದು ಪೊಲೀಸರಿಗೊಪ್ಪಿಸಿದ್ದಾರೆ.

ಸದ್ಯ ಕಾರಿನಲ್ಲಿದ್ದವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿರುವ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದ ಆಂಬುಲೆನ್ಸ್‌ನಲ್ಲಿ ಬೆಂಕಿ!



ಮೈಸೂರು, ಜ.23 (ಎಸ್‌ಪಿಎನ್)– ಮೈಸೂರು ಶೇಷಾದ್ರಿ ಐಯ್ಯರ್ ರಸ್ತೆಯ ಅಂಬೇಡ್ಕರ್ ಭವನದ ಬಳಿ ಶಾರ್ಟ್ ಸರ್ಕ್ಯೂಟ್‌ನಿಂದ ಆಂಬುಲೆನ್ಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕೆಲಕಾಲ ಆತಂಕದ ಪರಿಸ್ಥಿತಿ ನಿರ್ಮಾಣವಾಯಿತು. ಈ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಾರ್ವಜನಿಕ ಆಸ್ಪತ್ರೆಗೆ ಸೇರಿದ ಆಂಬುಲೆನ್ಸ್(ಕೆಎ 51 ಜಿ.5426)ನಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರೋಗಿಯೊಬ್ಬರನ್ನು ಶಿಫ್ಟ್ ಮಾಡಿ, ಪುನಃ ಗುಂಡ್ಲುಪೇಟೆಗೆ ಹೋಗುವಾಗ ಡೀಸೆಲ್ ಸೋರಿಕೆ ಜೊತೆಗೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ, ವಿಷಯ ತಿಳಿಸಿದ್ದಾರೆ.

ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ, ಬೆಂಕಿಯನ್ನು ನಂದಿಸಿದ್ದಾರೆ. ಇದರಿಂದ ಹೆಚ್ಚಿನ ಹಾನಿಯಾಗಿಲ್ಲ ಎಂದು ಸರಸ್ವತಿಪುರಂ ಅಗ್ನಿಶಾಮಕ ದಳದ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪೌರಕಾರ್ಮಿಕರಿಗೆ ಗೈರು ಹಾಜರಿಗೂ ವೇತನ ಪಾವತಿ: ಪಾಲಿಕೆ ಮೂವರು ಸಿಬ್ಬಂದಿ ಅಮಾನತು

ಮೈಸೂರು, ಜ.23(ಎಸ್‌ಪಿಎನ್)– ಪೌರಕಾರ್ಮಿಕರು ಕರ್ತವ್ಯಕ್ಕೆ ಗೈರಾದ ದಿನಗಳಿಗೂ ವೇತನ ಪಾವತಿಸಿ ಕರ್ತವ್ಯ ಲೋಪವೆಸಗಿರುವ ಆರೋಪದಡಿ ಮೈಸೂರು ಮಹಾನಗರ ಪಾಲಿಕೆ ಆರೋಗ್ಯ ಶಾಖೆಯ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಆದೇಶ ಹೊರಡಿಸಿದ್ದಾರೆ.

ಆರೋಗ್ಯ ಶಾಖೆಯ ಪ್ರಥಮ ದರ್ಜೆ ಸಹಾಯಕರಾದ ಎಂ.ಪುಷ್ಪಾವತಿ, ಕೆ.ಎಲ್.ಸಿ.ಪಾಪ ಹಾಗೂ ದ್ವಿತೀಯ ದರ್ಜೆ ಸಹಾಯಕಿ ಸಿ.ಹೆಚ್.ಅನಿತ ಅವರನ್ನು ಅಮಾನತುಗೊಳಿಸಲಾಗಿದೆ. ಇವರು ಕಳೆದ 2025ರ ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಪೌರಕಾರ್ಮಿಕರಿಗೆ ಹೆಚ್ಚುವರಿಯಾಗಿ ವೇತನ ಪಾವತಿಸಿರುವುದು ಪರಿಶೀಲನೆ ವೇಳೆ ತಿಳಿದುಬಂದ ಹಿನ್ನೆಲೆಯಲ್ಲಿ ಈ ಕ್ರಮ ಜರುಗಿಸಲಾಗಿದೆ.

ಮೂರು ತಿಂಗಳಲ್ಲಿ ಪುಷ್ಪಾವತಿ 1,17,081 ರೂ., ಕೆ.ಎಲ್.ಸಿ.ಪಾಪ 13,58,525 ರೂ. ಹಾಗೂ ಅನಿತ 1,54,705 ರೂ. ಹೆಚ್ಚುವರಿಯಾಗಿ ವೇತನದ ಬಿಲ್ಲನ್ನು ತಯಾರಿಸಿ, ಲೆಕ್ಕ ಶಾಖೆಗೆ ಸಲ್ಲಿಸಿ, ಗೈರು ಹಾಜರಿ ದಿನಗಳಿಗೂ ವೇತನ ಪಾವತಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಪಾಲಿಕೆ ಮುಖ್ಯಲೆಕ್ಕಾಧಿಕಾರಿ ವರದಿ ಸಲ್ಲಿಸಿದ್ದರು. ಇದರನ್ವಯ ಮೂವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತುಗೊಳಿಸಿದ್ದಾರೆ.

ಕರ್ತವ್ಯಲೋಪದಡಿ ಮೂವರನ್ನು ಅಮಾನತುಗೊಳಿಸಿರುವುದು ಸ್ವಾಗತಾರ್ಹ. ಈ ಸಂಬಂಧ ತನಿಖೆ ನಡೆಸಿ, ಇದರ ಹಿಂದಿರುವ ಅವ್ಯವಹಾರವನ್ನು ಬಯಲಿಗೆಳೆಯಬೇಕು ಎಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಸದಸ್ಯ ನಾಗರಾಜು ಆಗ್ರಹಿಸಿದ್ದಾರೆ.

ನಾಳೆ ಮುಖ್ಯಮಂತ್ರಿ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು, ಜ.23– ಮುಖ್ಯಮಂತ್ರಿ ಸಿದ್ದರಾಮಯ್ಯರವರು ಜ.25 ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಿಗ್ಗೆ 11.25 ಗಂಟೆಗೆ ವಿಶೇಷ ವಿಮಾನದ ಮೂಲಕ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ನಂತರ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ವಿಶೇಷ ವಿಮಾನದ ಮೂಲಕ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ನಗರಗಳ ಜನರಲ್ಲಿ ಸಂಸ್ಕೃತಿಯ ಕೊಂಡಿ ಕಳಚಿದೆ

● ಹಿರಿಯ ರಂಗಕರ್ಮಿ ಪ್ರಸನ್ನ ವಿಷಾದ ● 'ಉತ್ತರಾಯಣ' ಕಲಾ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ

ಮೈಸೂರು, ಜ.23(ವಿವಿಹೆಚ್)– ನಗರಗಳ ಜನರಲ್ಲಿ ಸಂಸ್ಕೃತಿಯ ಕೊಂಡಿ ಕಳಚಿದ್ದು, ಇದು ಸಂಸ್ಕೃತಿಯ ವಿನಾಶಕ್ಕೆ ಕಾರಣವಾಗುತ್ತಿದೆ. ಈ ಕೊಂಡಿಯನ್ನು ಬೆಸೆಯುವ ಕೆಲಸ ಯುವ ಮನಸ್ಸುಗಳಿಂದ ಆಗಬೇಕಿದೆ ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಅಭಿಪ್ರಾಯಪಟ್ಟರು.



ಉತ್ತರಾಯಣ ಕಲಾ ಮತ್ತು ಸಾಂಸ್ಕೃತಿಕ ಹಬ್ಬಕ್ಕೆ ಹಿರಿಯ ರಂಗಕರ್ಮಿ ಪ್ರಸನ್ನ ಚಾಲನೆ ನೀಡಿದರು.

ಮೈಸೂರಿನ ವಿಜಯನಗರದ ಮೊದಲ ಹಂತದ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್‌ನಲ್ಲಿ (ಜೆಸಿಎಸಿ) ಶುಕ್ರವಾರ ನಡೆದ 'ಉತ್ತರಾಯಣ' ಕಲಾ ಮತ್ತು ಸಾಂಸ್ಕೃತಿಕ ಹಬ್ಬ ಉದ್ಘಾಟಿಸಿ ಅವರು ಮಾತನಾಡಿದರು.

ನಗರವು ಸಂಸ್ಕೃತಿಯಿಂದ ವಿಮುಖವಾಗಿ, ಮಾರುಕಟ್ಟೆಗೆ ಮುಖಮಾಡಿ ನಿಂತಿದೆ. ಆದರೆ ಗ್ರಾಮೀಣ ಭಾಗದಲ್ಲಿ ಕನ್ನಡ, ಕೈಕಸುಬು ಸಂಸ್ಕೃತಿ ಉಳಿದಿದೆ. ಕಾರಣ ಇಷ್ಟೆ ನಮ್ಮ ನಾಡನ್ನು ಕಟ್ಟಿದವರು, ಸಂಸ್ಕೃತಿಯನ್ನು ಕಟ್ಟಿದವರು ಎಲ್ಲರೂ ಗ್ರಾಮೀಣರೆ. ದಾಸಶ್ರೇಷ್ಠರಿಂದ ಕಬೀರ, ದಾರ್ಶನಿಕರವರೆಗೂ ಕನ್ನಡವನ್ನು ಕಟ್ಟುವ ಮೂಲಕ ಶ್ರಮ ಸಂಸ್ಕೃತಿಯ ಭಾಗವಾಗಿ ಹೋದವರು ಎಂದು ತಿಳಿಸಿದರು.

ಆದರೆ, ಇತ್ತೀಚಿನ ದಿನಗಳಲ್ಲಿ ನಗರೀಕರಣ ಹಾಗೂ ಆಧುನೀಕರಣದಿಂದಾಗಿ ನಮ್ಮ ಸಂಸ್ಕೃತಿ ಮರೆಮಾಚಿ ಹೋಗುತ್ತಿದೆ. ಅದರೊಂದಿಗೆ ಸಾಹಿತ್ಯ ಹಾಗೂ ಕಲೆಗೆ ಸಂಬಂಧಿಸಿದ ಕೆಲಸಗಳನ್ನು ಮರೆಯುತ್ತಿದ್ದಾರೆ. ಇತ್ತ ಮೈಸೂರು ನಗರೀಕರಣದತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ ಕಲೆ ಹಾಗೂ ಸಂಸ್ಕೃತಿ ಎರಡನ್ನೂ ಉಳಿಸಲು ಜೆಸಿಎಸಿ ಕೇಂದ್ರ ಸ್ಥಾಪನೆಯಾಗಿರುವುದು ಶ್ಲಾಘನೀಯ. ಈ ಕೇಂದ್ರದಲ್ಲಿ ನಮ್ಮ ಮೂಲ ಸಂಸ್ಕೃತಿಯನ್ನು ಮೇಲೆತ್ತಿ, ಅದನ್ನು ದೇಶ–ವಿದೇಶಗಳಲ್ಲಿ ತಲುಪಿಸುವ ಕೆಲಸ ಆಗಬೇಕು ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, ಪರಿಸರದ ನಾಶ ಮತ್ತು ಭಾಷೆಯ ಕುಸಿತ ಸಮಾಜದ ದೊಡ್ಡ ಸಮಸ್ಯೆಯಾಗಿದೆ. ಇದು ಮೂಲ ಅಸ್ತಿತ್ವದ ಮೇಲಿನ ದಾಳಿಯಾಗಿದ್ದು, ಈ ಬಗ್ಗೆ ಯಾರೂ ಗಂಭೀರತೆ ತೋರುತ್ತಿಲ್ಲ ಎಂದು ಬೇಸರಿಸಿದರು.

ಜಾಗತಿಕ ಬೆಳವಣಿಗೆ ನಂತರ ಜಗತ್ತಿನ ಅನೇಕ ಭಾಷೆ ಮರೆಗೆ ಸಂದಿವೆ. 2011ರ ಜನಗಣತಿಯ ಪ್ರಕಾರ ಭಾರತದಲ್ಲಿ 19,568 ಮಾತೃ ಭಾಷೆಗಳಿವೆ. ಕೇಂದ್ರ ಸರ್ಕಾರದ ವರದಿಯ ಪ್ರಕಾರ 1947 ರಿಂದ 2011ರವರೆಗೆ ದೇಶದಲ್ಲಿ 254 ಭಾಷೆಗಳು ಕಣ್ಮರೆಯಾಗಿವೆ. ರಾಜ್ಯದೊಳಗೆ ಕನ್ನಡದೊಂದಿಗೆ 230 ಭಾಷೆಗಳು ಬದುಕುತ್ತಿವೆ. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯವು 2024ರಲ್ಲಿ ಬಿಡುಗಡೆ ಮಾಡಿದ ವರದಿಯ ಪ್ರಕಾರ ಮುಂದಿನ 70 ವರ್ಷದಲ್ಲಿ ಜಗತ್ತಿನ ಶೇ.92 ಜನರ ಭಾಷೆಗಳು ಹಿನ್ನೆಲೆಗೆ ಸರಿದು, ಶೇ.8 ಜನರ ಭಾಷೆ ಮುನ್ನೆಲೆಗೆ ಬರುತ್ತದೆಂದು ಪ್ರಸ್ತಾಪಿಸಿದ್ದಾರೆ ಎಂದರು.

ಜಗತ್ತಿನ ಶೇ.92 ಜನರ ಸಂಪತ್ತು ಕೇವಲ ಶೇ.8 ಜನರ ಮೇಲಿರುತ್ತದೆ. ಹೀಗೆ ಸಂಪತ್ತು ಕ್ರೋಢೀಕರಣವಾಗುತ್ತಿದ್ದಂತೆ, ಪ್ರಭಾವಿ ಭಾಷೆಗಳು ಸೃಜನಶೀಲತೆ ಕಳೆದುಕೊಂಡು, ಜಾಹೀರಾತಿನ ಭಾಷೆಗಳಾಗುತ್ತವೆ. ಪ್ರಸ್ತುತ ಅನೇಕ ಭಾಷೆಗಳು ಆ ಹಾದಿಯಲ್ಲಿದ್ದು, ನಾವು ಭಾಷೆಗಳ ಸಾವಿಗೆ ಸಾಕ್ಷಿಯಾಗುತ್ತಿದ್ದೇವೆ ಎಂದು ಹೇಳಿದರು.

> ಮುಂದಿನ ಬಾರಿಯ ಉತ್ತರಾಯಣ ಕಾರ್ಯಕ್ರಮ ಆಯೋಜನೆಯಾದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತಮ್ಮ ಜೊತೆಯಲ್ಲಿ ನಿಲ್ಲುತ್ತದೆ. ಭಾಷೆ ಬೆಳವಣಿಗೆ ಕಾರ್ಯಕ್ರಮಗಳಿಗೆ ಹೆಚ್ಚಿನ ಬೆಂಬಲ ಸೂಚಿಸುತ್ತದೆ. ನಮ್ಮ ಪ್ರಾಧಿಕಾರ ಇರುವುದೇ ಕನ್ನಡಕ್ಕಾಗಿ.
> -ಪುರುಷೋತ್ತಮ್ ಬಿಳಿಮಲೆ,
> ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

ಭಾಷೆ ಹಾಗೂ ಸಂಸ್ಕೃತಿ ನಮ್ಮ ಹೆಮ್ಮೆ. ದೇಶದ ಹಾಗೂ ವಿಶ್ವದ ವಿವಿಧೆಡೆಗಳಿಂದ ಕರ್ನಾಟಕಕ್ಕೆ ವಿವಿಧ ಧರ್ಮಗಳು, ಭಾಷೆಗಳು, ಸಂಸ್ಕೃತಿಗಳು ಬಂದಿವೆ. ಇಲ್ಲಿನ ನೆಲದ ಸಂಸ್ಕೃತಿಯೊಂದಿಗೆ ಅದೂ ಬೆರೆತಿರುವುದೇ ನಮ್ಮ ವೈಶಿಷ್ಟ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ವೇಗ ಬಹಳ ಕಡಿಮೆಯಾಗಿದೆ. ಹಿಂದಿ ಭಾಷೆ ಶೇ.66 ರಷ್ಟು ವೇಗದಲ್ಲಿ ಬೆಳೆಯುತ್ತಿದೆ. ತಮಿಳು, ಮಲಯಾಳಂ, ಗುಜರಾತಿ ಭಾಷೆಗಳು ಶೇ.13ರ ವೇಗದಲ್ಲಿ ಬೆಳೆಯುತ್ತಿದೆ. ಆದರೆ ಕನ್ನಡದ ಭಾಷೆಯು ಶೇ 3.67% ವೇಗದಲ್ಲಿ ಬೆಳೆಯುತ್ತಿದೆ. ಇದು ನಮ್ಮ ಭಾಷೆಯ ವಿನಾಶಕ್ಕೆ ದಾರಿಯಾಗುತ್ತದೆ ಎಂದು ತಿಳಿಸಿದರು.

> ವಿದ್ವಾನ್ ಅನೂರ್ ಅನಂತಕೃಷ್ಣಶರ್ಮ ಮತ್ತು ತಂಡದವರಿಂದ ಲಯ ಲಾಸ್ಯ ಸಂಗೀತ ಕಾರ್ಯಕ್ರಮ ನಡೆಯಿತು. ಶನಿವಾರ ಉತ್ತರಾಯಣದಲ್ಲಿ ಬೆಳಿಗ್ಗೆ 'ಆರ್ಟ್ – ವೇ ಆಫ್ ಲೈಫ್', 'ಚೇಂಜಿಂಗ್ ಪರ್‌ಸ್ಪೆಕ್ಟಿವ್ ಆಫ್ ಇಂಡಿಯನ್ ಸಿನಿಮಾ' ವಿಷಯಗಳ ಬಗ್ಗೆ ಸಂಗೀತ ದಿಗ್ಗಜರು ಹಾಗೂ ಸಿನಿಮಾ ದಿಗ್ಗಜರಿಂದ ಚರ್ಚೆ, ಕರ್ನಾಟಿಕ ಮ್ಯೂಸಿಕ್ ಹಾಗೂ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ, 'ಕುಹೂ' ನಾಟಕ ಪ್ರದರ್ಶನ ಇರಲಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ರಪಂಚದಾದ್ಯಂತ ಪ್ರಸಿದ್ಧಿ ಪಡೆದಿರುವ ಯೋಗ ಮೈಸೂರಿನದ್ದೇ ಕೊಡುಗೆ. ಜೊತೆಗೆ ಆಗಿನ ಕಾಲದಲ್ಲಿ ರಾಮಾನುಜಾಚಾರ್ಯರಿಗೆ ಆಶ್ರಯ ಕೊಟ್ಟ ಊರು ನಮ್ಮ ಮೈಸೂರು. ಇಂತಹ ಜಾಗದಲ್ಲಿ ಕಲೆ ಹಾಗೂ ಸಂಸ್ಕೃತಿಯ ಪೋಷಣೆ ಹೆಚ್ಚಾಗಬೇಕು ಎಂದು ಆಶಿಸಿದರು.

ಮಾಜಿ ಆರ್ ಅಂಡ್ ಎಡಬ್ಲ್ಯೂ ಆಫೀಸರ್ ರವಿ ಜೋಷಿ, ಹಿರಿಯ ತಾಳವಾದಕರಾದ ವಿದ್ವಾನ್ ಅನೂರ್ ಅನಂತಕೃಷ್ಣಶರ್ಮ, ಜೆಸಿಎಸಿಯ ಅಧ್ಯಕ್ಷ ಜಗನ್ನಾಥ ಶೆಣೈ, ಕಾರ್ಯಕ್ರಮದ ಸಂಯೋಜಕರಾದ ವಿ.ಮಾನಸ ನಯನ, ಡಾ.ಕೃಪಾ ಫಡ್ಕೆ, ವಿ.ಸಾಯಿ ಶಿವ್, ಡಾ.ರಮಾ ವಿ.ಬೆಣ್ಣೂರ್ ಉಪಸ್ಥಿತರಿದ್ದರು.

ಟಿ20 ಸರಣಿ; ನ್ಯೂಜಿಲೆಂಡ್ ವಿರುದ್ಧ ಭಾರತಕ್ಕೆ ದಾಖಲೆ ಜಯ

ರಾಯ್‌ಪುರ್, ಜ.23(ವಿವಿಹೆಚ್)– ಪಾಕೇಟ್ ಡೈನಾಮೋ ಇಶಾನ್ ಕಿಶನ್ ಮತ್ತು ಮಿ.360 ಸೂರ್ಯಕುಮಾರ್ ಯಾದವ್ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಅತಿಥೇಯ ಭಾರತ 2ನೇ ಟಿ20 ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 7 ವಿಕೆಟ್‌ಗಳಿಂದ ಗೆದ್ದು ಬೀಗಿದೆ.

208ರನ್‌ಗಳ ಬೃಹತ್ ಗುರಿಯನ್ನು ಕೇವಲ 15.2 ಓವರ್‌ಗಳಲ್ಲಿ ಬೆನ್ನತ್ತಿದ ಭಾರತ ತಂಡ ಟಿ20ಯಲ್ಲಿ 200+ ಮೊತ್ತವನ್ನು ಅತೀ ಕಡಿಮೆ ಓವರ್‌ನಲ್ಲಿ ಚೇಸ್ ಮಾಡಿ, ವಿಶಿಷ್ಟ ದಾಖಲೆ ಬರೆಯಿತು.



ಇಶಾನ್ ಕಿಶನ್ ಬ್ಯಾಟಿಂಗ್ ವೈಖರಿ

ಇಲ್ಲಿನ ಶಾಹಿದ್ ವೀರ್ ನಾರಾಯಣ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಎರಡನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಕಿವೀಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಿತು. ಈ ಸವಾಲಿನ ಮೊತ್ತ ಬೆನ್ನತ್ತಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಯಿತು. ಅಭಿಷೇಕ್ ಶರ್ಮಾ ಮೊದಲ ಬಾರಿಗೆ ಗೋಲ್ಡನ್ ಡಕ್ ಆಗಿ ಹೊರನಡೆದರೆ, ಸಂಜು 6 ರನ್‌ಗಳಿಗೆ ಆಟ ಮುಗಿಸಿದರು. ಆರಂಭಿಕ ಸಂಕಷ್ಟ ಎದುರಿಸಿದ ಟೀಂ ಇಂಡಿಯಾಗೆ ಇಶಾನ್ ಕಿಶನ್ ಹಾಗೂ ನಾಯಕ ಸೂರ್ಯಕುಮಾರ್ ಯಾದವ್ ಆಸರೆಯಾದರು.

ತಾವೆದುರಿಸಿದ ಮೊದಲ ಎಸೆತದಿಂದಲೇ ಕಿವೀಸ್ ಬೌಲರ್‌ಗಳನ್ನು ಕಾಡಿದ ಇಶಾನ್ ಕೇವಲ 32 ಎಸೆತಗಳಲ್ಲಿ 11 ಬೌಂಡರಿ, 4 ಸಿಕ್ಸರ್ ಸಹಿತ 76 ರನ್ ಚಚ್ಚಿದರು.

ಮತ್ತೊಂದೆಡೆ ಸಮಯೋಚಿತ ಆಟವಾಡಿದ ಸೂರ್ಯ, ಅರ್ಧಶತಕ ದಾಖಲಿಸಿದರು. ಆ ಮೂಲಕ 468 ದಿನಗಳ ಬಳಿಕ ಟೀಂ ಇಂಡಿಯಾ ಪರ ಅರ್ಧಶತಕ ಬಾರಿಸುವ ಮೂಲಕ ತಮ್ಮ ಬ್ಯಾಟಿಂಗ್ ಬರ ನೀಗಿಸಿಕೊಂಡರು. ಅಜೇಯರಾಗಿ ಉಳಿದ ಸೂರ್ಯ ಮತ್ತು ಶಿವಂ ಭಾರತದ ಗೆಲುವನ್ನು ಸುಲಭಗೊಳಿಸಿದರು. ಸೂರ್ಯ 37 ಎಸೆತಗಳಲ್ಲಿ 9 ಬೌಂಡರಿ ಹಾಗೂ 4 ಭರ್ಜರಿ ಸಿಕ್ಸರ್ ಸಹಿತ 82 ರನ್ ಬಾರಿಸಿದರೆ, ಶಿವಂ ದುಬೆ 17 ಎಸೆತಗಳಲ್ಲಿ 35 ರನ್ ಹೊಡೆದು ತಂಡಕ್ಕೆ ಗೆಲುವು ತಂದುಕೊಟ್ಟರು.

ಕಿವೀಸ್ ಪರ ಮ್ಯಾಟ್ ಹೆನ್ರಿ, ಜಾಕೋಬ್ ಡೆಫಿ ಹಾಗೂ ಇಶ್ ಸೋಧಿ ತಲಾ ತಲಾ ಒಂದೊಂದು ವಿಕೆಟ್ ಪಡೆದರು.

ಇತ್ತ ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್‌ಗೆ ನಾಯಕ ಸ್ಯಾಂಟ್ನರ್ ಹಾಗೂ ರಚಿನ್ ರವೀಂದ್ರ ಆಸರೆಯಾದರು. ರಚಿನ್ 26 ಎಸೆತಗಳಲ್ಲಿ 44 ರನ್ ಬಾರಿಸಿದರೆ, ನಾಯಕ ಸ್ಯಾಂಟ್ನರ್ 27 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 47 ರನ್ ಗಳಿಸಿ ಅಜೇಯರಾಗಿ ಉಳಿದರು.

ಉಳಿದಂತೆ ಡೆವೋನ್ ಕಾನ್ವೆ 19, ಟಿಮ್ ಸೈಫರ್ಟ್ 24, ಗ್ಲೇನ್ ಫಿಲಿಪ್ಸ್ 19, ಡ್ಯಾರೆಲ್ ಮಿಚೆಲ್ 18, ಮಾರ್ಕ್ ಚಾಪ್‌ಮನ್ 10 ಹಾಗೂ ಝಾಕ್ರಿ ಫೋಕ್ಸ್ ಅಜೇಯ 15 ರನ್ ಗಳಿಸಿದರು.

ಟೀಂ ಇಂಡಿಯಾ ಪರ ಕುಲ್ದೀಪ್ ಯಾದವ್ 2 ವಿಕೆಟ್, ಹಾರ್ದಿಕ್ ಪಾಂಡ್ಯ, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ ಹಾಗೂ ಶಿವಂ ದುಬೆ ತಲಾ ಒಂದೊಂದು ವಿಕೆಟ್ ಕಿತ್ತರು.

ಭರ್ಜರಿ ಬ್ಯಾಟಿಂಗ್ ಮೂಲಕ ಟೀಂ ಇಂಡಿಯಾ ಗೆಲುವಿಗೆ ಪ್ರಮುಖ ಪಾತ್ರವಹಿಸಿದ ಇಶಾನ್ ಕಿಶನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು 'ಮೈಸೂರಿನ ಅಸಾಮಾನ್ಯರು' ಕೃತಿ ಬಿಡುಗಡೆ



ಗೌರಿ ಸತ್ಯ

ಮೈಸೂರು, ಜ.23–'ಮೈಸೂರು ಮಿತ್ರ'ದಲ್ಲಿ ಅಂಕಣ ರೂಪದಲ್ಲಿ ಪ್ರಕಟವಾಗಿದ್ದ ಗೌರಿ ಸತ್ಯ ಅವರ 'ನಮ್ಮ ಮೈಸೂರಿನ ಅಸಾಮಾನ್ಯರು' ಈಗ ಪುಸ್ತಕವಾಗಿ ಹೊರ ಬರಲಿದೆ. 'ಮೈಸೂರಿನ ಅಸಾಮಾನ್ಯರು' ಹೆಸರಿನಲ್ಲಿ ಪ್ರಕಟವಾಗಿರುವ ಈ ಕೃತಿ ಜನವರಿ 24ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಒಡೆಯರ ಅವಧಿಯಲ್ಲಿ ಅನೇಕ ಗಣ್ಯರು ಹಲವಾರು ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಆದರೆ ಅವರ ನೆನಪು ಇಂದು ಮರೆಯಾಗಿ ಹೋಗಿದೆ. ಹಾಗೆ ನೆನಪಿನಲ್ಲಿ ಅಳಿಸಿಹೋಗಿರುವ 50 ಮಹನೀಯರನ್ನು ಕುರಿತ ಈ ಕೃತಿ ಹೆಚ್ಚಿನ ವಿಷಯ ಹಾಗೂ ಛಾಯಾಚಿತ್ರಗಳೊಂದಿಗೆ ಪ್ರಕಟವಾಗಿದೆ. ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಸ್ಥೆಯ ಕನ್ನಡ ಓದುಗರ ಒಕ್ಕೂಟ ಆಶ್ರಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಬಿಡುಗಡೆ ಮಾಡಲಿದ್ದಾರೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕಿ ಹಾಗೂ ಖ್ಯಾತ ಗಮಕಿ ಡಾ. ಜ್ಯೋತಿ ಶಂಕರ್ ಕೃತಿಯ ಪರಿಚಯ ಮಾಡಿಕೊಡಲಿದ್ದಾರೆ. ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಭಾಗವಹಿಸಲಿದ್ದಾರೆ. ಪುಸ್ತಕವನ್ನು ಮೈಸೂರಿನ ಮಹಿಮಾ ಪ್ರಕಾಶನದ ಶ್ರೀನಿವಾಸ್ ಪ್ರಕಟಿಸಿದ್ದಾರೆ.

ಫೆ.1ರಿಂದ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ಜಾತ್ರೆ

ಮೈಸೂರು, ಜ.23– ಫೆ.1ರಿಂದ 3ರವರೆಗೆ ಉತ್ತನಹಳ್ಳಿ ಗ್ರಾಮದಲ್ಲಿರುವ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವವು ಜರುಗಲಿದೆ.



ಪ್ರತೀ ದಿವಸ ಬೆಳಗ್ಗೆ ಅಮ್ಮನವರಿಗೆ ವಿಶೇಷ ಅಭಿಷೇಕ, ಹೂವಿನ ಅಲಂಕಾರ ಜರುಗುತ್ತದೆ. ಫೆ.1 ರಂದು ಏಕದಶವಾರ, ರುದ್ರಾಭಿಷೇಕ, ಸುವರ್ಣಾಲಂಕಾರ ಸಹಸ್ರ ನಾಮಾರ್ಚನೆ ನಿವೇದನೆ, ಮಹಾಮಂಗಳಾರತಿ ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ. ಮಧ್ಯಾಹ್ನ 12.30 ಗಂಟೆಗೆ ಪ್ರಸಾದ ವಿನಿಯೋಗ, ಪ್ರದೋಷಕಾಲದ ಪೂಜೆ, ತ್ರಿಶತಿ ನಾಮಾರ್ಚನೆ ಮಹಾಮಂಗಳಾರತಿ ನಂತರ ರಾತ್ರಿ 8.30 ಗಂಟೆಗೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ ಜರುಗಲಿದೆ.

ಫೆ.2ರಂದು ಪ್ರಥಮ ಅಶ್ಲೇಷ ನಕ್ಷತ್ರ, ಶ್ರೀಯವರಿಗೆ ಏಕಾದಶವಾರ, ರುದ್ರಾಭಿಷೇಕ, ಸಹಸ್ರ ನಾಮಾರ್ಚನೆ ವಿಶೇಷ ಪೂಜೆಗಳು ಕದಲಿ ಅಲಂಕಾರಗಳು ನಡೆಯಲಿದೆ. ಫೆ.3ರಂದು ದ್ವಿತೀಯಾ ಮಖ ನಕ್ಷತ್ರ ಶ್ರೀಯವರಿಗೆ ಏಕಾದಶವಾರ ರುದ್ರಾಭಿಷೇಕ, ಪಂಚೋಪಚಾರ ಪೂಜೆ ಮಹಾಮಂಗಳಾರತಿ, ಮಧ್ಯಾಹ್ನ 12–30 ಗಂಟೆಗೆ ಪ್ರಸಾದ ವಿನಿಯೋಗವನ್ನು ಮಾಡಲಾಗುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಜ.23– ಕಡಕೊಳ ವಿದ್ಯುತ್ ವಿತರಣಾ ಕೇಂದ್ರ(66/11)ದಿಂದ ಹೊರಹೊಮ್ಮುವ ಕಡಕೊಳ ಐಪಿ, ಸಿಂಧುವಳ್ಳಿ ಎನ್‌ಜೆವೈ ಹಾಗೂ ಟಾಟಾ ಮೈನ್ಸ್ ಫೀಡರ್‌ನಲ್ಲಿನ ವಿದ್ಯುತ್ ಮಾರ್ಗಗಳ ಮುಕ್ತತೆ ಹಿನ್ನೆಲೆಯಲ್ಲಿ ಕಡಕೊಳ ಗ್ರಾಮ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮಂಡಕಳ್ಳಿ ಸ್ಲಬ್‌ ಬೋರ್ಡ್, ಕೆ.ಎಂ.ಹುಂಡಿ, ಹೊಸಮಾಳ, ಕಡಕೊಳ ರೈಲ್ವೆ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜ.25ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಎನ್.ಆರ್.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರಲ್ಲಿ ಒಳಚರಂಡಿ ವ್ಯವಸ್ಥೆ ವೈಫಲ್ಯ; ಮಳೆ ನೀರು ಚರಂಡಿಗೆ ಸೇರುತ್ತಿದೆ ಒಳಚರಂಡಿ ನೀರು

ಎಷ್ಟೇ ದೂರಿದರೂ ತಲೆ ಕೆಡಿಸಿಕೊಳ್ಳದ ಬೇಜವಬ್ದಾರಿ ಅಧಿಕಾರಿಗಳು

ಮೈಸೂರು, ಜ.23– ಮೈಸೂರು ನಗರದೆಲ್ಲೆಡೆ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಎಲ್ಲೆಂದರಲ್ಲಿ ಮ್ಯಾನ್ ಹೋಲ್‌ಗಳು ಉಕ್ಕಿ ಹರಿಯುತ್ತಿವೆ.

ಒಂದೆಡೆ, ಸ್ವಚ್ಛ ಸರ್ವೇಕ್ಷಣೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ವಿವಿಧ ಸ್ಪರ್ಧೆಗಳ ಮೂಲಕ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಆದರೆ ಒಳಚರಂಡಿ ದುಸ್ಥಿತಿಯ ಬಗ್ಗೆ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸ್ಪರ್ಧೆ ಆಯೋಜಿಸುವ ಮೂಲಕ ಗಮನ ಸೆಳೆಯುವ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮಹಾರಾಜರು ನಿರ್ಮಿಸಿದ್ದ ವ್ಯವಸ್ಥಿತ ಸುಂದರ ನಗರವನ್ನು ಅಭಿವೃದ್ಧಿ ನೆಪದಲ್ಲಿ ಹಾಳು ಮಾಡಲಾಗುತ್ತಿದೆ. ಅವೈಜ್ಞಾನಿಕ ಕಾಮಗಾರಿಗಳಿಗೆ ಕೋಟ್ಯಾಂತರ ರೂ. ಸಾರ್ವಜನಿಕರ ಹಣವನ್ನು ಮಣ್ಣುಪಾಲು ಮಾಡುವುದರ ಜೊತೆಗೆ ಸಾರ್ವಜನಿಕರಿಗೆ ಸಂಕಷ್ಟ ತಂದೊಡ್ಡಲಾಗುತ್ತಿದೆ. ಒಳಚರಂಡಿ ವ್ಯವಸ್ಥೆ ಅದ್ವಾನಗೊಂಡಿರುವುದರಿಂದ ಎಲ್ಲೆಡೆ ಮ್ಯಾನ್‌ಹೋಲ್‌ಗಳು ಉಕ್ಕಿ, ಕಲುಷಿತ ನೀರು ರಸ್ತೆಗೆ ಹರಿಯುತ್ತಿದೆ. ದುರ್ವಾಸನೆ ಬೀರುವುದಲ್ಲದೆ ವಾಹನಗಳ ಸಂಚಾರದಿಂದ ಕೊಳಚೆ ನೀರು ಚಿಮ್ಮಿ ಜನ ಓಡಾಡದಂತಹ ದುಸ್ಥಿತಿ ನಿರ್ಮಾಣವಾಗಿದೆ. ತಗ್ಗು ಪ್ರದೇಶದ ಮನೆಗಳಿಗೆ ಶೌಚಾಲಯಗಳಲ್ಲಿ ಒಳಚರಂಡಿ ನೀರು ಹಿಮ್ಮುಖವಾಗಿ ಆವರಿಸುವುದು ಸಾಮಾನ್ಯವಾಗಿಬಿಟ್ಟಿದೆ.



ಸಾಂದರ್ಭಿಕ ಚಿತ್ರ

ನಗರ ಪಾಲಿಕೆ ಒಳಚರಂಡಿ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಒಳಚರಂಡಿ ಸಮಸ್ಯೆ ಬಗ್ಗೆ ಐದಾರು ಬಾರಿ ದೂರು ನೀಡಿದ ಬಳಿಕ ಕಾಟಾಚಾರಕ್ಕೆ ದುರಸ್ತಿ ಮಾಡುತ್ತಾರೆ. ಜೆಟ್ಟಿಂಗ್ ಮಿಷನ್‌ನಲ್ಲಿ ತಾತ್ಕಾಲಿಕವಾಗಿ ಸರಿಪಡಿಸಿ, ತೆರಳುತ್ತಾರೆ. ಒಂದೆರಡು ದಿನಗಳಲ್ಲಿ ಮತ್ತೆ ಸಮಸ್ಯೆ ಬಿಗಡಾಯಿಸುತ್ತದೆ. ವಿಜಯನಗರ ಎರಡನೇ ಹಂತದಿಂದ ಹೆಬ್ಬಾಳು ಕೆರೆಗೆ ಸಂಪರ್ಕಿಸುವ ಮಳೆ ನೀರು ಚರಂಡಿಯಲ್ಲಿ ಒಳಚರಂಡಿಯ ಮಲ–ಮೂತ್ರ ಮಿಶ್ರಿತ ನೀರು ಕಳೆದ ಮೂರು ತಿಂಗಳಿಂದ ಹರಿಯುತ್ತಿದೆ. ಬನ್ನಿಮಂಟಪ ಹೈವೇ ವೃತ್ತದ ಬಳಿ ಜೋಡಿ ತೆಂಗಿನ ಮರ ಸ್ಮಶಾನ ರಸ್ತೆಯಲ್ಲಿ ವರ್ಷವಿಡೀ ಒಳಚರಂಡಿ ನೀರು ಆವರಿಸಿರುತ್ತದೆ.

ಒಳಚರಂಡಿ ವಿಭಾಗದ ಅಧಿಕಾರಿಗಳ ಅವೈಜ್ಞಾನಿಕ ಕಾಮಗಾರಿಯಿಂದ ಒಳಚರಂಡಿಗಳಲ್ಲಿ ನೀರು ಸರಾಗವಾಗಿ ಸಾಗದೇ ಮ್ಯಾನ್‌ವೋಲ್‌ಗಳಲ್ಲಿ ಉಕ್ಕಿ ಹೊರಬರುತ್ತಿದೆ. ಹೀಗೆ ಬಂದ ನೀರನ್ನು ಮಳೆನೀರು ಚರಂಡಿಗೆ ಹರಿಸಲಾಗಿದೆ. ಇದರಿಂದ ಚರಂಡಿ ಆಜು–ಬಾಜಿನ ಜನ ದುರ್ವಾಸನೆ, ಸೊಳ್ಳೆ ಕಾಟದಿಂದ ನರಳುತ್ತಿದ್ದರೂ, ಬೇಜವಾಬ್ದಾರಿ ಅಧಿಕಾರಿಗಳು ಮಾತ್ರ ತಲೆ ಕೆಡಿಸಿಕೊಳ್ಳುತ್ತಿಲ್ಲ.

ನಿರಂತರ ನೀರು ಹರಿವು: ಮಳೆ ನೀರು ಚರಂಡಿಯಲ್ಲಿ ಸದಾ ನೀರು ಹರಿಯುವುದು ವ್ಯವಸ್ಥೆಯ ವೈಫಲ್ಯಕ್ಕೆ ಮತ್ತೊಂದು ಸಾಕ್ಷಿ. ಒಳಚರಂಡಿ ದುಸ್ಥಿತಿಯಿಂದ ಮ್ಯಾನ್ ಹೋಲ್‌ನಲ್ಲಿ ಉಕ್ಕುವ ನೀರನ್ನು ಚರಂಡಿಗೆ ಹರಿಬಿಟ್ಟು, ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಪರಿಣಾಮ ಸಾರ್ವಜನಿಕರು ದುರ್ವಾಸನೆ ಸಹಿಸಲಾಗದೆ ಪರಿತಪಿಸುವಂತಾಗಿದೆ. ಅಲ್ಲದೆ ಸೊಳ್ಳೆ ಕಾಟ ವಿಪರೀತವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಿಸುತ್ತಿದ್ದಾರೆ.

ಬಿಎಂಸಿಸಿ ಆದರೆ ಗತಿಯೇನು?: ಈಗಿರುವ 86.31 ಚದರ ಕಿ.ಮೀ. ವ್ಯಾಪ್ತಿಯಲ್ಲೇ ಸಮರ್ಪಕ ಒಳಚರಂಡಿ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಇನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆಯೊಂದಿಗೆ 341 ಚದರ ಕಿ.ಮೀ.ಗೆ ಹಿಗ್ಗಿದರೆ ಜನತೆಯ ಗತಿಯೇನು?. ಈಗಿರುವ ಪ್ರದೇಶದಲ್ಲೇ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯದಂತೆ ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡಲಾಗದ ಅಧಿಕಾರಿ ವರ್ಗ, ಬೃಹತ್ ಮಹಾನಗರ ಪಾಲಿಕೆ ರಚನೆಯಾದ ಬಳಿಕ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸಲಿದೆಯೋ ಎಂಬುದು ಸಾರ್ವಜನಿಕರ ಆತಂಕದ ನುಡಿಯಾಗಿದೆ.

ಕೇರಳದಲ್ಲಿ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು, ಸ್ವನಿಧಿ ಕ್ರೆಡಿಟ್ ಕಾರ್ಡ್ ಸೇರಿ ಹಲವು ಅಭಿವೃದ್ಧಿ ಯೋಜನೆ

ಪ್ರಧಾನಿ ಮೋದಿ ಚಾಲನೆ

ತಿರುವನಂತಪುರ: ಪ್ರಧಾನಿ ನರೇಂದ್ರ ಮೋದಿ ಇಂದು ಶುಕ್ರವಾರ ಕೇರಳದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಹೊಸ ರೈಲು ಸೇವೆಗಳಿಗೆ ಚಾಲನೆ ನೀಡಿದರು. ಇದು ಚುನಾವಣೆಗೆ ಸಜ್ಜಾಗಿರುವ ಕೇರಳ ರಾಜ್ಯದಲ್ಲಿ ಪ್ರಮುಖ ರಾಜಕೀಯ ಮತ್ತು ಮೂಲಸೌಕರ್ಯ ಅಭಿಯಾನವಾಗಿದೆ ಎನ್ನಬಹುದು.



ಪ್ರಧಾನಿ ಮೋದಿ ಬೆಳಗ್ಗೆ ಕೇರಳ ರಾಜಧಾನಿ ತಿರುವನಂತಪುರಕ್ಕೆ ಆಗಮಿಸಿದರು. ಅವರನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಇತರ ಗಣ್ಯರು ಬರಮಾಡಿಕೊಂಡರು. ನಂತರ ಮೆರವಣಿಗೆ ಸಾಗಿದರು.

ಇತ್ತೀಚಿನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಎಡ ಪ್ರಜಾಸತ್ತಾತ್ಮಕ ರಂಗ (ಐಆಈ)ದಿಂದ ತಿರುವನಂತಪುರಂ ಕಾರ್ಪೊರೇಷನ್‌ನ ನಿಯಂತ್ರಣವನ್ನು ವಶಪಡಿಸಿಕೊಂಡ ನಂತರ, ಸ್ಥಳೀಯ ಸಂಸ್ಥೆಯ ಮೇಲಿನ ಎಡಪಕ್ಷಗಳ 45 ವರ್ಷಗಳ ಹಿಡಿತವನ್ನು ಕೊನೆಗೊಳಿಸಿದೆ. ಇದಾದ ನಂತರ ಇದು ಪ್ರಧಾನಿಯವರ ಮೊದಲ ರಾಜ್ಯ ಭೇಟಿಯಾಗಿದೆ.

ವಿವಿಧ ಯೋಜನೆಗಳ ಉದ್ಘಾಟನೆ: ಬೀದಿ ವ್ಯಾಪಾರಿಗಳಿಗೆ ಆರ್ಥಿಕ ಸೇರ್ಪಡೆಯ ಮುಂದಿನ ಹಂತವನ್ನು ಗುರುತಿಸುವ ಪಿಎಂ ಎಸ್‌ವಿಎನಿಧಿ ಕ್ರೆಡಿಟ್ ಕಾರ್ಡ್ ಮತ್ತು ರಾಜ್ಯ ರಾಜಧಾನಿಯಲ್ಲಿ ಆಧುನಿಕ ಅಂಚೆ ಕಚೇರಿಯನ್ನು ಉದ್ಘಾಟಿಸಲಾಯಿತು. ಯುಪಿಐ–ಸಂಯೋಜಿತ, ಬಡ್ಡಿ ರಹಿತ ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯವಾದ ಪಿಎಂ ಎಸ್‌ವಿಎನಿಧಿ ಕ್ರೆಡಿಟ್ ಕಾರ್ಡ್, ತ್ವರಿತ ದ್ರವ್ಯತೆ ಒದಗಿಸುತ್ತದೆ. ಡಿಜಿಟಲ್ ವಹಿವಾಟುಗಳನ್ನು ಉತ್ತೇಜಿಸುತ್ತದೆ. ಕೇರಳದ ಬೀದಿ ವ್ಯಾಪಾರಿಗಳು ಸೇರಿದಂತೆ ಒಂದು ಲಕ್ಷ ಫಲಾನುಭವಿಗಳಿಗೆ ಪ್ರಧಾನಿ ಮೋದಿ ಪಿಎಂ ಎಸ್‌ವಿಎನಿಧಿ ಸಾಲಗಳನ್ನು ಸಹ ವಿತರಿಸಿದರು.

ನಾಲ್ಕು ಹೊಸ ರೈಲು ಸೇವೆಗಳಿಗೆ ಚಾಲನೆ: ರೈಲು ಸಂಪರ್ಕಕ್ಕೆ ಪ್ರಮುಖ ಉತ್ತೇಜನ ನೀಡುವ ನಿಟ್ಟಿನಲ್ಲಿ, ಪ್ರಧಾನ ಮಂತ್ರಿ ಅವರು ನಾಲ್ಕು ಹೊಸ ರೈಲು ಸೇವೆಗಳಿಗೆ ಚಾಲನೆ ನೀಡಿದರು. ಇದರಲ್ಲಿ ಮೂರು ಅಮೃತ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಸೇರಿವೆ. ಇವು ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ನಡುವೆ ಪ್ರಯಾಣ ಅವಧಿಯನ್ನು ಕಡಿಮೆ ಮಾಡಿ ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸುತ್ತವೆ.

ತಿರುವನಂತಪುರಂ–ತಾಂಬರಂ ಅಮೃತ್ ಭಾರತ್ ಎಕ್ಸ್‌ಪ್ರೆಸ್ (ತಿರುವನಂತಪುರ ಸೆಂಟ್ರಲ್ ನಿಲ್ದಾಣದಿಂದ), ನಾಗರಕೋಯಿಲ್–ಮಂಗಳೂರು ಅಮೃತ್ ಭಾರತ್ ಎಕ್ಸ್‌ಪ್ರೆಸ್ (ತಿರುವನಂತಪುರ ಸೆಂಟ್ರಲ್ ನಿಲ್ದಾಣದಿಂದ), ತಿರುವನಂತಪುರಂ–ಚಾರ್ಲಪ್ಪಳ್ಳಿ ಅಮೃತ್ ಭಾರತ್ ಎಕ್ಸ್‌ಪ್ರೆಸ್ (ತಿರುವನಂತಪುರ ಉತ್ತರ ನಿಲ್ದಾಣದಿಂದ) ಮತ್ತು ತ್ರಿಶೂರ್–ಗುರುವಾಯೂರ್ ಪ್ಯಾಸೆಂಜರ್ ರೈಲು (ತ್ರಿಶೂರ್ ನಿಲ್ದಾಣದಿಂದ)ಗಳಿಗೆ ಚಾಲನೆ ನೀಡಿದ್ದಾರೆ.

ವಿಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರದಲ್ಲಿ, ಪ್ರಧಾನಿ ಮೋದಿ, ತಿರುವನಂತಪುರದಲ್ಲಿ CSIR-NIIST ನಾವೀನ್ಯತೆ, ತಂತ್ರಜ್ಞಾನ ಮತ್ತು ಉದ್ಯಮಶೀಲತಾ ಕೇಂದ್ರಕ್ಕೆ ಅಡಿಪಾಯ ಹಾಕಿದರು. ಈ ಕೇಂದ್ರವು ಜೀವ ವಿಜ್ಞಾನ ಮತ್ತು ಜೈವಿಕ ಆರ್ಥಿಕತೆಯ ಮೇಲೆ ಕೇಂದ್ರೀಕರಿಸುತ್ತದೆ. ಆಯುರ್ವೇದದಂತಹ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳನ್ನು ಆಧುನಿಕ ಜೈವಿಕ ತಂತ್ರಜ್ಞಾನ, ಸುಸ್ಥಿರ ಪ್ಯಾಕೇಜಿಂಗ್ ಮತ್ತು ಹಸಿರು ಹೈಡ್ರೋಜನ್‌ನೊಂದಿಗೆ ಸಂಯೋಜಿಸುತ್ತದೆ. ನವೋದ್ಯಮಗಳು, ತಂತ್ರಜ್ಞಾನ ವರ್ಗಾವಣೆ ಮತ್ತು ಜಾಗತಿಕ ಸಹಯೋಗವನ್ನು ಉತ್ತೇಜಿಸುತ್ತದೆ. ಸಂಶೋಧನೆಯನ್ನು ಮಾರುಕಟ್ಟೆ–ಸಿದ್ಧ ಪರಿಹಾರಗಳು ಮತ್ತು ಉದ್ಯಮಗಳಾಗಿ ಪರಿವರ್ತಿಸಲು ಇದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಶ್ರೀ ಚಿತ್ರ ತಿರುನಾಳ್ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಅತ್ಯಾಧುನಿಕ ರೇಡಿಯೊ ಸರ್ಜರಿ ಕೇಂದ್ರಕ್ಕೂ ಮೋದಿ ಅಡಿಪಾಯ ಹಾಕಿದರು. ಈ ಸೌಲಭ್ಯವು ಸಂಕೀರ್ಣ ಮೆದುಳಿನ ಅಸ್ವಸ್ಥತೆಗಳಿಗೆ ಹೆಚ್ಚು ನಿಖರವಾದ ಪರಿಣಾಮಕಾರಿ ಚಿಕಿತ್ಸೆಯನ್ನು ಒದಗಿಸುತ್ತದೆ. ಈ ಪ್ರದೇಶದಲ್ಲಿ ತೃತೀಯ ಹಂತದ ಆರೋಗ್ಯ ರಕ್ಷಣೆಯನ್ನು ಬಲಪಡಿಸುತ್ತದೆ.

ತಿರುವನಂತಪುರದಲ್ಲಿ ಹೊಸ ಪೂಜಾಪುರ ಮುಖ್ಯ ಅಂಚೆ ಕಚೇರಿಯನ್ನು ಪ್ರಧಾನಿ ಉದ್ಘಾಟಿಸಿದರು. ತಂತ್ರಜ್ಞಾನ ಚಾಲಿತ ಸೌಲಭ್ಯವು ವ್ಯಾಪಕ ಶ್ರೇಣಿಯ ಅಂಚೆ, ಬ್ಯಾಂಕಿಂಗ್, ವಿಮೆ ಮತ್ತು ಡಿಜಿಟಲ್ ಸೇವೆಗಳನ್ನು ಒದಗಿಸಲಿದ್ದು, ನಾಗರಿಕ ಕೇಂದ್ರಿತ ಸೇವಾ ವಿತರಣೆಯನ್ನು ಬಲಪಡಿಸಲಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ನಿನ್ನ ಕಾರಿನ ಹೆಸರೇನು?
ತಿಮ್ಮ : ಓ... ಅದು... ಅದು... ಅದರ ಹೆಸರು ಮರೆತು ಬಿಟ್ಟಿದ್ದೀನಿ. ಆದರೆ 'ಟಿ' ಯಿಂದ ಸ್ಟಾರ್ಟ್ ಆಗುತ್ತದೆ!
ಗುಂಡ : ಎಂಥ ಆಶ್ಚರ್ಯ! ಎಲ್ಲಾ ಕಾರುಗಳು ಪೆಟ್ರೋಲ್, ಡೀಸೆಲ್‌ನಿಂದ ಸ್ಟಾರ್ಟ್ ಆದರೆ ನಿನ್ನ ಕಾರು ಟೀ(Tea)ನಿಂದ ಸ್ಟಾರ್ಟ್ ಆಗುತ್ತದೆ!?

ಮೈಸೂರು ಮಿತ್ರ

ಶನಿವಾರ, ಜನವರಿ 24, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಯಾವ ವ್ಯಕ್ತಿ ಸ್ಪಷ್ಟವಾಗಿ, ಸ್ವಚ್ಛವಾಗಿ, ನೇರವಾಗಿ ಮಾತನಾಡುತ್ತಾನೋ ಆತನ ಮಾತುಗಳು ತೀವ್ರವಾಗಿ, ಹರಿತವಾಗಿ ಅಥವಾ ಕಠೋರವಾಗಿಯೂ ಇರಬಹುದು. ಆದರೆ, ಆತನ ಮನಸ್ಸಿನಲ್ಲಿ ಯಾವುದೇ ಮೋಸವಿರುವುದಿಲ್ಲ.

ವೇದ ಸುಳ್ಳಾದರೂ { ಉಗಮವಾಗದಿರಲಿ ಹಿಂಸೆ,
ಗಾದೆ ಸುಳ್ಳಾಗದು { ಹೆಚ್ಚಿಗೆಯಾಗದಿರಲಿ ಆಸೆ.

ನಿಮ್ಮ ಪತ್ರಗಳು

ರಾಜ್ಯಪಾಲರು ರಾಜ್ಯ ಸರ್ಕಾರದ ಕೈಗೊಂಬೆಯಲ್ಲ

ಮಾನ್ಯರೆ,

ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಸಿದ್ದಪಡಿಸಿದ್ದ ಭಾಷಣವನ್ನು ಬದಿಗೊತ್ತಿ ಕೇವಲ ಆಯ್ದ ಮೂರು ಸಾಲುಗಳನ್ನು ಮಾತ್ರ ಓದಿ ಸದನದಿಂದ ನಿರ್ಗಮಿಸುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯದ ಸಚಿವ ಸಂಪುಟ ಸಿದ್ದಪಡಿಸುವ ಭಾಷಣವನ್ನು ರಾಜ್ಯಪಾಲರು ಓದುತ್ತಾರೆ. ಇದು ಅವರ ಸಾಂವಿಧಾನಿಕ ಕರ್ತವ್ಯ ಕೂಡ ಹೌದು.

ಆದರೆ, ಒಂದು ವೇಳೆ ಅಂತಹ ಭಾಷಣ ಕೇಂದ್ರ ಸರ್ಕಾರದ ವಿರುದ್ಧವಾಗಿದ್ದರೆ ಅಥವಾ ಯಾವುದೇ ಕಾಯ್ದೆ ಕಾನೂನುಗಳಿಗೆ ವಿರುದ್ಧವಾಗಿದ್ದರೆ ಅಥವಾ ರಾಜ್ಯದಲ್ಲಿ ಕೋಮು ಸಂಘರ್ಷ ಉಂಟು ಮಾಡುವ ಸಂಭವವಿದ್ದರೆ ಅಂತಹ ಭಾಷಣವನ್ನು ಓದಲು ನಿರಾಕರಿಸುವುದು ರಾಜ್ಯಪಾಲರ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ರಾಜ್ಯಪಾಲರು, ಸಾಂವಿಧಾನಿಕ ಮುಖ್ಯಸ್ಥರಾದರೂ ಸಹ, ಅವರಿಗೆ ದೇಶದ ಸಂವಿಧಾನ ಕೆಲವು ವಿವೇಚನಾಧಿಕಾರಗಳನ್ನು ನೀಡಿದೆ. ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಲೋಕಾಯುಕ್ತ ತನಿಖೆಗೆ ತಮ್ಮ ಒಪ್ಪಿಗೆ ನೀಡುವ ಸಂದರ್ಭದಲ್ಲಿ ಕೂಡ ಮುಖ್ಯಮಂತ್ರಿಗಳ ಅಥವಾ ರಾಜ್ಯ ಸರ್ಕಾರದ ಸಲಹೆ ಅಥವಾ ಸೂಚನೆಗಳನ್ನು ಕೇಳಿರಲಿಲ್ಲ. ನೆರೆಯ ತಮಿಳುನಾಡು, ಕೇರಳ ಮುಂತಾದ ಪ್ರತಿಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳಲ್ಲಿ ಕೂಡ ರಾಜ್ಯಪಾಲ ಹಾಗೂ ರಾಜ್ಯ ಸರ್ಕಾರದ ನಡುವೆ ಉತ್ತಮ ಸಂಬಂಧವಿಲ್ಲ. ರಾಜ್ಯಪಾಲರು, ರಾಜ್ಯ ಸರ್ಕಾರ ಹೇಳುವಂತೆ ಕೇಳುವ ಕೀಲು ಗೊಂಬೆಯಲ್ಲ. ಸಮಯ ಮತ್ತು ಸಂದರ್ಭ ಒದಗಿ ಬಂದಾಗ ರಾಜ್ಯಪಾಲರು ತಮ್ಮ ನಿಜವಾದ ಶಕ್ತಿ ಅಥವಾ ಪ್ರಾಬಲ್ಯವನ್ನು ತೋರಿಸಬಹುದು. ಅದೇ ರೀತಿ ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ವರ್ತಿಸದೇ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವುದು ಅವಶ್ಯಕವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರಾಮಕೃಷ್ಣನಗರ 'ಐ' ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್ ಸಮಸ್ಯೆ ಸರಿಪಡಿಸಿ



ಮಾನ್ಯರೆ,

ನಾನು ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್‌ನಲ್ಲಿ 5ನೇ ಮೇನ್‌ನಲ್ಲಿ ವಾಸವಿರುತ್ತೇನೆ. ನಮ್ಮ ಮನೆ ಎದುರುಗಡೆ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ನಿಂದ ಕಳೆದ ನಾಲ್ಕು ದಿನಗಳಿಂದ ದುರ್ವಾಸನೆಯುಕ್ತ ನೀರು ಸೋರಿಕೆಯಾಗಿ ರಸ್ತೆಯ ಮೇಲೆ ಹರಿಯುತ್ತಿದೆ. ಸಂಬಂಧಪಟ್ಟವರಿಗೆ ತಿಳಿಸಿದರೂ ಸಮಸ್ಯೆಗೆ ಪರಿಹಾರ ಸಿಗುತ್ತಿಲ್ಲ. ಇದರಿಂದ ರಸ್ತೆಯಲ್ಲಿ ಓಡಾಡಲು ತುಂಬಾ ತೊಂದರೆಯಾಗಿರುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಹರಿಸಿ ಸಮಸ್ಯೆ ಬಗೆಹರಿಸಿ ಇಲ್ಲಿನ ನಿವಾಸಿಗಳು ನೆಮ್ಮದಿಯಿಂದ ವಾಸಿಸಲು ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಎನ್. ರಾಜೇಂದ್ರಪ್ರಸಾದ್, 5ನೇ ಮುಖ್ಯ ರಸ್ತೆ, ರಾಮಕೃಷ್ಣನಗರ 'ಐ' ಬ್ಲಾಕ್, ಮೈಸೂರು.

ತೇಲುವ ಸೌರಶಕ್ತಿ ಮರೆತ ಭರವಸೆ

ಮಾನ್ಯರೆ,

ಕರ್ನಾಟಕ ಸರ್ಕಾರವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ 'ತೇಲುವ ಸೌರ ಫಲಕ' (ಫ್ಲೋಟಿಂಗ್ ಸೋಲಾರ್ ಪ್ಯಾನೆಲ್) ಅಳವಡಿಕೆಯ ಭರವಸೆ ಕೇವಲ ಮತ ಸೆಳೆಯುವ ತಂತ್ರವಾಗಿರುವುದು ವಿಷಾದನೀಯ. ರಾಜ್ಯದ ಜಲಾಶಯ ಮತ್ತು ಕೆರೆಗಳಲ್ಲಿ ಇಂತಹ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಇಂಧನ ಸ್ವಾವಲಂಬನೆ ಸಾಧಿಸುವುದಾಗಿ ಹೇಳಿದ್ದ ಸರ್ಕಾರ, ಈಗ ಆ ಬಗ್ಗೆ ಮೌನ ವಹಿಸಿರುವುದು ಜನತೆಗೆ ಮಾಡಿದ ದ್ರೋಹವಾಗಿದೆ. ಇನ್ನೂ ಭೂಸ್ವಾಧೀನ ಪ್ರಕ್ರಿಯೆಯ ಅಡೆತಡೆಗಳಿಲ್ಲದ ಮತ್ತು ನೀರಿನ ಆವಿಯಾಗುವಿಕೆಯನ್ನು ತಡೆಯುವ ಈ ಪರಿಸರ ಸ್ನೇಹಿ ತಂತ್ರಜ್ಞಾನವನ್ನು ನಿರ್ಲಕ್ಷಿಸುತ್ತಿರುವುದು ಸರ್ಕಾರದ ದೂರದೃಷ್ಟಿಯ ಕೊರತೆಯನ್ನು ಎತ್ತಿ ತೋರಿಸುತ್ತದೆ. ಉಚಿತ ಯೋಜನೆಗಳ ಆರ್ಭಟದಲ್ಲಿ, ರಾಜ್ಯದ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಇಂತಹ ಮೂಲಸೌಕರ್ಯ ಯೋಜನೆಗಳು ಮೂಲೆಗುಂಪಾಗಿವೆ. ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ತನ್ನ ಪ್ರಣಾಳಿಕೆಯ ಭರವಸೆಯನ್ನು ಈಡೇರಿಸದಿದ್ದರೆ, ಅಭಿವೃದ್ಧಿಯ ವಿಷಯದಲ್ಲಿ ರಾಜ್ಯವು ದಶಕಗಳಷ್ಟು ಹಿಂದೆ ಸರಿಯುವುದರಲ್ಲಿ ಸಂಶಯವಿಲ್ಲ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಕುವೆಂಪುನಗರ ಗ್ರಂಥಾಲಯ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ಮೈಸೂರಿನಲ್ಲಿ ಹಿರಿಯ ನಾಗರಿಕರೇ ಹೆಚ್ಚಾಗಿ ವಾಸಿಸುವ ಕುವೆಂಪು ನಗರದಲ್ಲಿರುವ ಕೇಂದ್ರ ಗ್ರಂಥಾಲಯಕ್ಕೆ ಪ್ರತಿದಿನ ಸಾಕಷ್ಟು ಮಂದಿ ಹಿರಿಯ ನಾಗರಿಕರು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ ವಾರ್ಷಿಕ ಪರೀಕ್ಷೆಗಳಿಗೆ ಸಿದ್ದತೆ ನಡೆಸುವ ನೂರಾರು ಓದುಗರು ಇಲ್ಲಿಗೆ ಬಂದು ಅಭ್ಯಾಸ ನಡೆಸುತ್ತಾರೆ. ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯವನ್ನು ಹೊರತುಪಡಿಸಿದರೆ, ಅತೀ ಹೆಚ್ಚಿನ ಓದುಗರನ್ನು ಹೊಂದಿರುವ ಗ್ರಂಥಾಲಯವಾಗಿದೆ. ಆದರೆ ಇಲ್ಲಿ ಸ್ಥಳದ ಅಭಾವದಿಂದಾಗಿ ಹಿರಿಯ ನಾಗರಿಕರು ಇಕ್ಕಟ್ಟಿನಲ್ಲಿ ನಿಂತುಕೊಂಡೇ ದಿನ ಪತ್ರಿಕೆಗಳನ್ನು ಓದುವಂತಾಗಿದೆ. ಈ ಗ್ರಂಥಾಲಯದ ಅರ್ಧ ಭಾಗವು ವಿದ್ಯಾರ್ಥಿಗಳು ಓದಲು ಮೀಸಲಾಗಿದೆ. ಇಲ್ಲಿ ಸ್ಥಳದ ಅಭಾವಿರುವುದರಿಂದ ಈ ಗ್ರಂಥಾಲಯದ ಮೇಲೆ ಮೊದಲ ಮಹಡಿಯನ್ನು ನಿರ್ಮಾಣ ಮಾಡಿ, ಅಲ್ಲಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಅನುಕೂಲ ಮಾಡಿಕೊಡಬೇಕು ಹಾಗೂ ಈಗ ಗ್ರಂಥಾಲಯದ ಒಳ ಭಾಗದಲ್ಲಿರುವ ಶೌಚಾಲಯವನ್ನು, ಗ್ರಂಥಾಲಯದ ಹೊರಗೆ ಸಾಕಷ್ಟು ಜಾಗ ಇರುವುದರಿಂದ, ಗ್ರಂಥಾಲಯದ ಹೊರ ಭಾಗಕ್ಕೆ ಶೌಚಾಲಯವನ್ನು ಸ್ಥಳಾಂತರ ಮಾಡಬೇಕು. ಕೆಲವೊಮ್ಮೆ ಈ ಶೌಚಾಲಯದಿಂದ ಕೆಟ್ಟ ವಾಸನೆ ಬರುವುದು ತಪ್ಪುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ವೃದ್ಧಾಪ್ಯದಲ್ಲಿ ಬದುಕೇಕೆ ಬೇಡವೆನಿಸುತ್ತದೆ!



" ಹೆತ್ತವರಿಗೆ ಹತ್ತು ಮಕ್ಕಳಿದ್ದರೂ ಬಾರವಾಗುವುದಿಲ್ಲ, ಆದರೆ ಹತ್ತು ಮಕ್ಕಳು ಸೇರಿ ತಂದೆತಾಯಿ ಇಬ್ಬರನ್ನು ಸಾಕಲು ಹೆಣಗಾಡುತ್ತಾರೆ ಹಾಗೂ ಗೊಣಗಾಡುತ್ತಾರೆ, ಮಕ್ಕಳು ತಂದೆ–ತಾಯಂದಿರನ್ನು ಕಾಲ್ಚೆಂಡಿನಂತೆ ಮನೆಯಿಂದ ಮನೆಗೆ ಅಟ್ಟಾಡಿಸುತ್ತಾರೆ. ಪರಿಣಾಮವಾಗಿ ಅಂದಾಜು 20 ಲಕ್ಷದವರೆಗೆ ಹಿರಿಯ ನಾಗರಿಕರು ವೃದ್ಧಾಶ್ರಮಗಳಲ್ಲಿ ಅಂತಿಮ ದಿನಗಳನ್ನು ಎಣಿಸುತ್ತಿದ್ದಾರೆ.





ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಬದುಕಿನ ಪಯಣದಲ್ಲಿ ಬಾಲ್ಯ ಮತ್ತು ತಾರುಣ್ಯವನ್ನು ಆಯಾಯ ಕಾಲಕ್ಕೆ ಅನುಭವಿಸಿ ಕಳೆದುಹೋದ ನಂತರ ಬೇಡವೆಂದರೂ ಬರುವ ಮುಂದಿನ ನಿಲ್ದಾಣವೇ ವೃದ್ಧಾಪ್ಯ. ಭಗವಂತ ಅವಕಾಶ ಏನಾದರೂ ಕೊಟ್ಟಿದ್ದಿದ್ದರೆ ಮನುಷ್ಯ ತಾರುಣ್ಯದಿಂದ ಮುಂದಕ್ಕೆ ಹೋಗದೆ ಅಲ್ಲೇ ನಿಂತುಬಿಡುತ್ತಿದ್ದ. ಸೃಷ್ಟಿಕರ್ತನು ಅಳೆದು ತೂಗಿ ಎಲ್ಲವನ್ನು ಪರಿಗಣಿಸಿ ಹೀಗೆಯೇ ಇದ್ದರೆ ಸೂಕ್ತವೆಂದು ನಿರ್ಧರಿಸಿ ಸೃಷ್ಟಿಸಿದ್ದಾನೆ, ಅದರಂತೆ ಸಮಸ್ತ ಜೀವಿಗಳು ನಡೆಯುತ್ತಿರುವುದು ನೈಸರ್ಗಿಕ ನಿಯಮದಂತೆ, ಇದರಿಂದ ಯಾವೊಂದು ಜೀವಿಯು ತಪ್ಪಿಸಿಕೊಳ್ಳಲಾಗದು. ವಯಸ್ಸಾಗುವಿಕೆಯು ಕ್ರಮೇಣ ನೈಸರ್ಗಿಕ ಹಾಗೂ ಸ್ವಭಾವಿಕವಾಗಿ ದೇಹದಲ್ಲಿ ಕೆಲವು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಯೌವ್ವನದಲ್ಲಿರುವಾಗ ನಮ್ಮ ಮನೆಗಳಲ್ಲೇ ನಮ್ಮ ನಡುವೆ ಇರುವ ವೃದ್ಧರ ಸಮಸ್ಯೆಗಳನ್ನು ನೋಡಿಯೂ ಅವರ ಸಮಸ್ಯೆಗಳ ಅರಿವೇ ಇಲ್ಲದಂತೆ, ನಾಳೆ ನಾವು ವೃದ್ಧರಾಗುವುದಿಲ್ಲ ಎಂಬಂತೆ ಇರುತ್ತೇವೆ. ವೃದ್ಧಾಪ್ಯದಲ್ಲಿ ನಿತ್ಯದ ಜೀವನ ಬಲು ಕಠೋರವಾಗಿರುತ್ತದೆ, ತನ್ನ ದೈನಂದಿನ ಕೆಲಸಗಳನ್ನು ತಾನು ಮಾಡಿಕೊಳ್ಳಲಾಗದೆ ಬೇರೆಯವರನ್ನೇ ಆಶ್ರಯಿಸುತ್ತಿರುವ ವೃದ್ಧರು ನರಕ ಎಂಬುದನ್ನು ಇಲ್ಲೇ ಕಾಣುತ್ತಾರೆ. ಆ ಹಂತದಲ್ಲಿ ಭೂಮಿಯ ಮೇಲೆ ಇನ್ನು ಸಾಕು, ಭಗವಂತನೆ ಬೇಗ ಕರೆದುಕೊಳ್ಳಪ್ಪಾ ಎನ್ನುವುದನ್ನು ಕಂಡಿದ್ದೇವೆ. ಒಳಗುಟ್ಟು ಏನಿದೆಯೇ ಪಯಣವು ಆದಿಯಂತೆ ಅಂತ್ಯ ಇರುವುದಿಲ್ಲ ಎನ್ನುವುದು ಪಡೆದುಕೊಂಡು ಬಂದಿರುವ ಶಾಪ ಇರಬಹುದು.

ಮುಪ್ಪಿನ ತೊಂದರೆಗಳು ಏನೇ ಇರಲಿ ನಮ್ಮ ಭಾರತೀಯ ಕೌಟಂಬಿಕ ವ್ಯವಸ್ಥೆಯಲ್ಲಿ ಅಂತ್ಯ ಕಾಲದ ಬದುಕು ಕೂಡ ಸೊಗಸಾಗಿಯೇ ಇತ್ತು, ವಯಸ್ಸಾದವರನ್ನು ದೇವರಂತೆ ಕಾಣುತ್ತಿದ್ದರು, ಪೂಜ್ಯ ಭಾವನೆಯಿಂದ ಅವರುಗಳಿಗೆ ವಿಶೇಷ ಸ್ಥಾನ ಕೊಟ್ಟು ಗೌರವದಿಂದ ನಡೆಸಿಕೊಳ್ಳುತ್ತಿದ್ದರು, ಅವರುಗಳ ಪಾದ ಸ್ಪರ್ಶ ಮಾಡಿ ಆಶೀರ್ವಾದ ಪಡೆಯುವುದು ಸಂಸ್ಕೃತಿ ಆಗಿತ್ತು. ಕಾಲಾನುಕ್ರಮದಲ್ಲಿ ವಿದ್ಯಾವಂತರು ಹೆಚ್ಚಾಗಿ ಅಭಿವೃದ್ಧಿ ಎನ್ನುವುದನ್ನು ಸಮಾಜವು ಕಾಣಲಾರಂಭಿಸಿದ ದಿನದಿಂದ ಎಲ್ಲವೂ ವ್ಯವಹಾರಿಕವಾಗಿದೆ.

'ಹಳೆಯ ಮರಕ್ಕೆ ಆಳವಾದ ಬೇರು' ಎಂಬುದನ್ನು ಮರೆತವರು ಅದರ ಮೌಲ್ಯವನ್ನು ಅರಿಯದೆ, ಅಭಿವೃದ್ಧಿ ಕಾಮಗಾರಿಗೆ ಬುಡಸಮೇತ ಕತ್ತರಿಸುತ್ತಾರೆ, ಅದೇ ಪರಿಸ್ಥಿತಿ ಇವರದ್ದು. ಹಿರಿಯರು ಮನೆಗೆ ದೀಪ ಇದ್ದಂತೆ, ದಾರಿ ತೋರುವರು. ಕುಟುಂಬಗಳಲ್ಲಿ ಹಿರಿಯರು ಇಲ್ಲದಿರುವ ಸಂಸಾರಗಳಲ್ಲಿ ನೆಮ್ಮದಿ ಇಲ್ಲವಾಗಿದೆ ಹಾಗೂ ಮನೆಗಳಲ್ಲಿ ಬುದ್ಧಿ ಮಾತು ಹೇಳುವ ಯಜಮಾನರಿಲ್ಲದೆ ಛಿದ್ರವಾಗಿವೆ.

ಅಪ್ಪ ಮಾಡಿದ ಆಸ್ತಿಯನ್ನು ಭಾಗ ಮಾಡಿಕೊಳ್ಳುವಂತೆ ಹೆತ್ತವರನ್ನು ಭಾಗ ಮಾಡಿ ಹಂಚಿಕೊಂಡು ಸಾಕುವಂತಾಗಿದೆ, ಅದನ್ನೂ ಮೀರಿ ಜೊತೆಯಲ್ಲಿ ಇಟ್ಟುಕೊಳ್ಳದೆ ದೂರ ಇಟ್ಟವರೂ ಇದ್ದಾರೆ. ಇವತ್ತಿಗೆ ಇದು ಸಾರ್ವತ್ರಿಕ ಪಿಡುಗಾಗಿ ಪರಿಣಮಿಸಿದೆ. ದೇಹದಲ್ಲಿ ಶಕ್ತಿ ಇಲ್ಲವಾದಾಗ ಮಕ್ಕಳಿಗೆ ನೀಡುವ ಆರೈಕೆಯಷ್ಟೇ ಪ್ರಮಾಣದಲ್ಲಿ ಹಿರಿಯರನ್ನು ನೋಡಿಕೊಳ್ಳಬೇಕಾಗುತ್ತದೆ. ಅವರ ಮನಸ್ಸು ಹಾಗೂ ಬುದ್ದಿಯು ಮಕ್ಕಳಿಗೆ ಇರುವಷ್ಟು ಮಟ್ಟಕ್ಕೆ ಸಮನಾಗಿರುತ್ತದೆ, ಹಾಗಾಗಿ ನಾವು ನಡೆದುಕೊಳ್ಳುವ ಪ್ರತೀ ಹೆಜ್ಜೆಯಲ್ಲೂ ಎಚ್ಚರ ವಹಿಸಬೇಕು, ಇಲ್ಲವಾದಲ್ಲಿ ಇಳಿವಯಸ್ಸಿನ ಜೀವ ಒಳಗೊಳಗೆ ನೊಂದುಕೊಳ್ಳುವುದು.

ಜನರೇಷನ್ ಗ್ಯಾಪ್ ಎಂಬ ಪದವನ್ನು ಸುಲಭವಾಗಿ ಉಪಯೋಗಿಸುವ ಹೊಸ ಹಾಗೂ ಹಳೇ ಪೀಳಿಗೆಗಳೆರಡು, ಪರಂಪರೆಯ ಸುಸಂಸ್ಕೃತಿಯನ್ನು ಕೊಟ್ಟ ಹಳೇತಲೆಮಾರುಗಳ ಶ್ರಮವನ್ನು ಗಮನಿಸುವುದಿಲ್ಲ.

ಹಿರಿಯರಲ್ಲಿ ಮಧುಮೇಹ, ಹೃದಯ ಸಂಬಂಧಿತ ಕಾಯಿಲೆ, ಮರೆಗುಳಿತನ, ನರದೌರ್ಬಲ್ಯ, ಸಂಧಿವಾತ ಮತ್ತು ಅಧಿಕ ರಕ್ತದೊತ್ತಡದಂತಹ ದೀರ್ಘಕಾಯಿಲೆಗಳಲ್ಲಿ ಕನಿಷ್ಠ ಎರಡು ರೋಗಗಳಾದರೂ ಬಿಡದೆ ಬಾಧಿಸುತ್ತಿರುತ್ತವೆ. ನಿತ್ಯವೂ ಔಷಧೋಪಚಾರ ಇಲ್ಲದೆ ಇರಲಾಗದು. ಕಾಯಿಲೆಗಳು ಏನೂ ಇಲ್ಲವೆಂದರೂ ನಿಶಕ್ತಿಗೊಂಡ ಮುದಿದೇಹವೇ ಒಂದು ದೊಡ್ಡ ಕಾಯಿಲೆ, ಆಶ್ರಯ ಇಲ್ಲದೆ ದಿನ ಕಳೆಯಲಾಗದು. ಸ್ವಾತಂತ್ರ್ಯ ಬ್ರಿಟಿಷರಿಂದ ಪಡೆದಿದ್ದಲ್ಲ, ನಿಜವಾದ ಸ್ವಾತಂತ್ರ್ಯ ಎಂದರೇನು ಎಂಬುದು ಕೊನೆಗಾಲದಲ್ಲಿ ತಿಳಿಯುತ್ತದೆ. ಸ್ವತಂತ್ರವಾಗಿ ಏನನ್ನೂ ಮಾಡಲಾಗದೆ ಎಲ್ಲದಕ್ಕೂ ಬೇರೆಯವರನ್ನು ಆಶ್ರಯಿಸಿ ಗುಲಾಮಗಿರಿಯ ಬದುಕಾಗಿ ಬಿಡುತ್ತದೆ. ಅಲ್ಲಿಯವರೆಗೆ ಪ್ರತಿಯೊಂದಕ್ಕೂ ಮಕ್ಕಳು ಹಿರಿಯರನ್ನು ಕೇಳುತ್ತಿದ್ದವರು ಕ್ರಮೇಣ ಬದಲಾಗುತ್ತಾ ಮಕ್ಕಳು ದೊಡ್ಡವರಾಗಿ, ದೊಡ್ಡವರು ಮುಪ್ಪಿಗೆ ಬಂದಾಗ ಮಕ್ಕಳ ನೆರಳು ಅವಶ್ಯವಾಗಿ ಬೇಕಾಗುತ್ತದೆ.

ಹೆತ್ತವರಿಗೆ ಹತ್ತು ಮಕ್ಕಳಿದ್ದರೂ ಬಾರವಾಗುವುದಿಲ್ಲ, ಆದರೆ ಹತ್ತು ಮಕ್ಕಳು ಸೇರಿ ತಂದೆ–ತಾಯಿ ಇಬ್ಬರನ್ನು ಸಾಕಲು ಹೆಣಗಾಡುತ್ತಾರೆ ಹಾಗೂ ಗೊಣಗಾಡುತ್ತಾರೆ. ಮಕ್ಕಳು ತಂದೆ–ತಾಯಂದಿರನ್ನು ಕಾಲ್ಚೆಂಡಿನಂತೆ ಮನೆಯಿಂದ ಮನೆಗೆ ಅಟ್ಟಾಡಿಸುತ್ತಾರೆ. ಮನೆಗಳಲ್ಲಿ ಆರೈಕೆ ಸಿಗದ ಪರಿಣಾಮವಾಗಿ ಅಂದಾಜು 20 ಲಕ್ಷದವರೆಗೆ ಹಿರಿಯ ನಾಗರಿಕರು ವೃದ್ಧಾಶ್ರಮಗಳಲ್ಲಿ ದಿನಗಳನ್ನು ಎಣಿಸುತ್ತಿದ್ದಾರೆ. ದಿ ಯುನೈಟೆಡ್ ನೇಷನ್ಸ್ ಪಾಪ್ಯುಲೇಷನ್ ಫಂಡ್ ಪ್ರಕಾರ 2025ರಲ್ಲಿ 158 ಮಿಲಿಯನ್ 60 ವರ್ಷ ಮೀರಿದ ವೃದ್ಧರಿದ್ದರೆ, 2050 ಹೊತ್ತಿಗೆ 319 ಮಿಲಿಯನ್ ಸಂಖ್ಯೆಯ ಹಿರಿಯ ನಾಗರಿಕರು ಇರುತ್ತಾರೆ. ವೈದ್ಯಕೀಯ ಕ್ಷೇತ್ರದ ಚಮತ್ಕಾರಿಕೆಯಿಂದಾಗಿ ಸಾಯುವ ಸರಾಸರಿ ವಯಸ್ಸು 70.82, ಇದು 2050ರ ಹೊತ್ತಿಗೆ 75 ರಿಂದ 80ರವರೆಗೆ ಏರುವ ಸಂಭವ ಇದೆ, ಆಶ್ಚರ್ಯ ತರುವಂತಹ ಮಾಹಿತಿ ಎಂದರೆ ಇದು 1947 ರಲ್ಲಿ 33 ವರ್ಷಗಳು, 1950ರಲ್ಲಿ 35.21 ವರ್ಷಗಳಾಗಿತ್ತು. ಅಂಕಿಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದರೆ ಯುವಕರಿಗಿಂತ ಹಿರಿಯ ನಾಗರಿಕರ ಸಂಖ್ಯೆಯೇ ಜಾಸ್ತಿ ಇದೆ. ಮನುಷ್ಯನ ಜೀವಿತಾವಧಿಯು(Life Expectancy) ವರ್ಷದಿಂದ ವರ್ಷಕ್ಕೆ ಏರುಮುಖದಲ್ಲಿ ಇರುವುದನ್ನು ಕಾಣುತ್ತಿದ್ದೇವೆ.

ಸಮಾಜದ ವ್ಯವಸ್ಥೆಯಲ್ಲಿ ಹಿರಿಯ ನಾಗರಿಕರು ಪ್ರಮುಖ ಪಾತ್ರ ವಹಿಸುತ್ತಾರೆ, ಆದರೂ ವಯಸ್ಸು 60 ದಾಟಿತೆಂದರೆ ಅವನು ಎಲ್ಲಿಯೂ ಸಲ್ಲದವನೆಂದು ವಿಶ್ರಾಂತ ಜೀವನಕ್ಕೆ ತಳ್ಳಿಬಿಡುತ್ತದೆ. ಇಲ್ಲಿಯೂ ಒಂದು ಆಶ್ಚರ್ಯ ಇದೆ. ವಯಸ್ಸು 90 ದಾಟಿದ್ದರು ರಾಜಕೀಯದಲ್ಲಿ ಉನ್ನತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಲು ಅರ್ಹನಾಗಿರುತ್ತಾರೆ. ರಾಜ್ಯದಿಂದ ಕೇಂದ್ರ ಸರ್ಕಾರದವರೆಗೂ ಹಿರಿಯ ನಾಗರಿಕರದ್ದೆ ಕಾರುಬಾರು. ಆಡಳಿತ ಚುಕ್ಕಾಣಿಯನ್ನು ಹಿಡಿದವರಲ್ಲಿ ಹಿರಿಯ ನಾಗರಿಕರೇ ತುಂಬಿರುವಾಗ ಹಿರಿಯರಿಗೆ ಕೊಡುತ್ತಿರುವ ಸೌಲಭ್ಯಗಳು ಇನ್ನಷ್ಟು ಬೇಕಾಗಿದೆ.

ಸರ್ಕಾರಗಳು ಇಳಿವಯಸ್ಸಿನವರ ಬದುಕಿಗೆ ಸಹಕರಿಸುವುದು ಒಂದು ಕಡೆಯಾದರೆ ಅದಕ್ಕಿಂತ ಮುಖ್ಯವಾಗಿ ಅವರಿಗೆ ಬೇಕಾಗಿರುವುದು ಕುಟುಂಬದಿಂದ ರಕ್ಷಣೆ ಹಾಗೂ ಮಾನಸಿಕ ನೆಮ್ಮದಿ, ಅದು ಸಿಗುತ್ತಿದೆಯೇ, ಸಿಕ್ಕಿದೆ ಎಂದಾದರೆ ಬೆಳಿಗ್ಗೆ ಮತ್ತು ಸಂಜೆ ಎರಡೂ ಹೊತ್ತು ಪಾರ್ಕುಗಳಲ್ಲಿ ಕುಳಿತು ತಮ್ಮ ನೋವುಗಳನ್ನು ಗೆಳೆಯರಲ್ಲಿ ತೋಡಿಕೊಳ್ಳುತ್ತಿರುವುದು ಯಾಕಾಗಿ?. ಸಮಸ್ಯೆ ಪ್ರಾರಂಭ ಆಗುವುದು ಇಲ್ಲಿಂದ ಏಕೆಂದರೆ ಜೀವನಶೈಲಿ ಉಲ್ಟಾ–ಪಲ್ಟಾ ಆಯಿತಲ್ಲಾ, ಪ್ರತಿಯೊಂದಕ್ಕೂ ಮಕ್ಕಳನ್ನು ಕೇಳಬೇಕು, ನಿರ್ಧರಿಸುವ ಸ್ವಾತಂತ್ರ್ಯ ಕಳೆದುಕೊಂಡಿರುತ್ತಾರೆ, ಮನಸ್ಸು ಕಸಿವಿಸಿಗೊಳ್ಳುತ್ತದೆ. ಸರ್ಕಾರಿ ನೌಕರಿಯಲ್ಲಿದ್ದು ಪಿಂಚಣಿ ಬರುತ್ತಿದ್ದರೆ ತಕ್ಕಮಟ್ಟಿಗೆ ಜೀವನ ಓಕೆ, ಇಲ್ಲದಿದ್ದರೆ ಬದುಕು ಮೂರಾಬಟ್ಟೆ.

ಇವುಗಳ ಜೊತೆಗೆ ಇವರನ್ನು ಕಾಡುವ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳು ಹಲವು; ಕನಿಷ್ಠ ಎರಡಾದರೂ ದೀರ್ಘ ಕಾಲದ ರೋಗಗಳು ಇರುತ್ತವೆ, ಆಯತಪ್ಪಿ ಬೀಳುವಿಕೆ, ಕೀಲುಗಳಲ್ಲಿ ನೋವು, ನರ ಸಂಬಂಧಿತ ಕಾಯಿಲೆಗಳು, ಒಂಟಿತನ ಮತ್ತು ಖಿನ್ನತೆ, ಮಕ್ಕಳಿಂದ ದೂರ, ಪ್ರತೀ 4 ಹಿರಿಯರಲ್ಲಿ ಒಬ್ಬರಿಗೆ ಖಿನ್ನತೆ, ಬುದ್ದಿಮಾಂದ್ಯತೆ ಮತ್ತು ಸ್ಮರಣ ಶಕ್ತಿ ನಷ್ಟ, ಸಂಗಾತಿಯನ್ನು ಕಳೆದುಕೊಂಡ ನೋವು, ಆಕಸ್ಮಿಕ ಅನಾಹುತಗಳು, ನಿವೃತ್ತಿಯು ಬದುಕಿನ ಅನಿಶ್ಚಿತತೆಯ ಅವಧಿಯಾಗಿರುವುದು, ವಯೋನಿವೃತ್ತಿಯು ಹುದ್ದೆಯ ಸ್ಥಾನಮಾನವನ್ನು ಕಸಿದುಕೊಂಡಿದ್ದು, ಸಂಪಾದನೆಯು ಸ್ಥಗಿತಗೊಂಡಿದ್ದರಿಂದಾಗಿ ಆರ್ಥಿಕ ಬದ್ದತೆಯ ಚಿಂತೆ, ವೈದ್ಯಕೀಯ ಖರ್ಚು ಏರಿಕೆ ಆಗಿರುವುದು, ಖರ್ಚಿಗಾಗಿ ಪೂರ್ಣವಾಗಿ ಕುಟುಂಬದ ಮೇಲೆ ಅವಲಂಭಿತರಾಗುವುದು ಒತ್ತಡವನ್ನು ಮತ್ತಷ್ಟು ಹೆಚ್ಚಿಸುವುದಲ್ಲದೆ, ಮನೆಯವರಿಂದ ನಿರ್ಲಕ್ಷ್ಯಕ್ಕೆ ಒಳಗಾಗುವುದು. ಹೀಗೆ ಹಲವು ಸಮಸ್ಯೆಗಳು ಹಿರಿಯ ನಾಗರಿಕರನ್ನು ಕಾಡುತ್ತಿವೆ. ಸಮಸ್ಯೆಗಳಿಗೆ ಶಾಶ್ವತ ಪರಿಹಾರಗಳಿಲ್ಲದೆ ಜೀವನದುದ್ದಕ್ಕೂ ಕಾಡುತ್ತಿರುತ್ತವೆ.

ಭಾವನಾತ್ಮಕ, ದೈಹಿಕ ಕಿರುಕುಳ ಹಿರಿಯರನ್ನು ಮತ್ತಷ್ಟು ಕುಗ್ಗಿಸುತ್ತವೆ. ವರದಿಯೊಂದರ ಪ್ರಕಾರ ಸಮೀಕ್ಷೆಗೆ ಪ್ರತಿಕ್ರಿಯೆ ನೀಡಿದವರಲ್ಲಿ ಶೇ.50ಕ್ಕಿಂತ ಹೆಚ್ಚು ಹಿರಿಯರು ಕುಟುಂಬದ ಸದಸ್ಯರಿಂದ ಹೆಚ್ಚಾಗಿ ದೌರ್ಜನ್ಯವನ್ನು ಎದುರಿಸುತ್ತಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ಸ್ವತಃ ನಾನೇ ಕಣ್ಣಾರೆ ಕಂಡಂತೆ ಹಾಗೂ ಕಿವಿಯಾರೆ ಕೇಳಿದಂತೆ ನಿಕಟ ಸಂಪರ್ಕ ಇರುವ ಸಂಜೆ ಪಾರ್ಕಿನ ಗೆಳೆಯರಲ್ಲಿ ಶೇ.90ರಷ್ಟು ಮಿತ್ರರು ತಮ್ಮ ಮನೆಯೊಳಗಿನ ದೌರ್ಜನ್ಯವನ್ನು ಹೇಳಿಕೊಂಡು ದುಃಖಿಸುತ್ತಿರುತ್ತಾರೆ, ಬೇಜಾರಿನ ಸಂಗತಿ ಏನಂದರೆ ಬೇಗನೆ ಸಾವು ಬರುವಂತೆ ಬಯಸುತ್ತಾರೆ.

ಸಾರ್ವಜನಿಕ ವಾಹನಗಳಲ್ಲಿ ಹಿರಿಯರಿಗಾಗಿ ಆಸನಗಳನ್ನು ಮೀಸಲಿರಿಸುವುದು, ಪ್ರಯಾಣ ದರದಲ್ಲಿ ರಿಯಾಯಿತಿ, ಸುಲಭವಾಗಿ ಹತ್ತಲು ಇಳಿಜಾರು ನಿರ್ಮಿಸುವುದು, ವಿಶೇಷ ಕೌಂಟರ್‌ಗಳನ್ನು ತೆರೆಯುವುದು, ದೇವಸ್ಥಾನಗಳಲ್ಲಿ ಹಿರಿಯರಿಗಾಗಿಯೇ ವಿಶೇಷ ದರ್ಶನ ಇತ್ಯಾದಿಗಳೆಲ್ಲವೂ ವಿಕಲಚೇತನರಿಗೆ ಹಾಗೂ ವೃದ್ಧರಿಗೆ ಅವಶ್ಯವಾಗಿಬೇಕು, ಆದರೆ ಇವು ಹಿರಿಯರ ಸ್ವತಂತ್ರಕ್ಕೆ ಮತ್ತು ಗೌರವಾನ್ವಿತ ಬದುಕನ್ನು ನಡೆಸುವ ಸಾಮರ್ಥ್ಯವನ್ನು ಕಡಿಮೆ ಮಾಡುವುದಲ್ಲದೆ, ಹಿರಿಯರನ್ನು ಬೇರ್ಪಡಿಸುತ್ತದೆ. ಹಿರಿಯರಿಗೆ ಮುಖ್ಯವಾಗಿ ಬೇಕಿರುವುದು ಹೊರಗಿನ ಗೌರವಕ್ಕಿಂತ ಕುಟುಂಬದೊಳಗೆ ಮಾನ್ಯತೆ ಮತ್ತು ಗೌರವ.

ಭವಿಷ್ಯದಲ್ಲಿ ವಯಸ್ಸಾದವರ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಗುವುದರಿಂದ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸುವುದು, ಇವರ ಆರೋಗ್ಯ, ಸುರಕ್ಷೆ ಮತ್ತು ಭಾವನಾತ್ಮಕ ಅವಶ್ಯಕತೆಗಳಲ್ಲಿ ಭಾಗಿಯಾಗಿ ಗುಣಮಟ್ಟದ ಆರೈಕೆ ಮಾಡುವುದು ಬಹುದೊಡ್ಡ ಕಾರ್ಯವಾಗುತ್ತದೆ.

ಹಿರಿಯರಿಗೆ ಆರೋಗ್ಯದ ಸಂಪೂರ್ಣ ವೆಚ್ಚವನ್ನು ಸರ್ಕಾರ ಭರಿಸುವಂತಾಗಬೇಕು, ಭಾವನಾತ್ಮಕ ಬೆಂಬಲವನ್ನು ಕುಟುಂಬ ನೀಡಬೇಕು, ಎಂದಿಗೂ ಒಂಟಿಯಾಗಿ ಇರುವಂತೆ ಮಗು ಮನಸ್ಸಿನ ಹಿರಿಯರನ್ನು ಬಿಡಬಾರದು. ಮಕ್ಕಳಾದವರು ಹಿರಿಯರನ್ನು ಕುಟುಂಬದಿಂದ ದೂರ ಇಡುವ ದುಸ್ಸಾಹಸಕ್ಕೆ ಮನಸ್ಸು ಮಾಡಬಾರದು. ನಮ್ಮಲ್ಲಿ ಎಂದಿಗೆ ವೃದ್ಧಾಶ್ರಮಗಳು ಕಡಿಮೆ ಆಗುತ್ತವೆಯೋ ಅಂದು ಸಮಾಜ ನೆಮ್ಮದಿಯಿಂದ ಇದೆ, ಹಿರಿಯರಿಗೆ ಗೌರವ ಸಿಗುತ್ತಿದೆ ಎಂದರ್ಥ!.

ಹಣ್ಣಣ್ಣು ಮುದುಕನಾದರೂ ನಾನು ಇನ್ನೂ ಬದುಕಬೇಕು ಎನಿಸುವಷ್ಟು ಭರವಸೆ ಹಿರಿಯರಲ್ಲಿ ಮೂಡುವಂತೆ ಕುಟುಂಬಗಳು ಅವರನ್ನು ನೋಡಿಕೊಳ್ಳಬೇಕು, 'ವೃದ್ಧಾಪ್ಯದಲ್ಲಿ ಬದುಕು ಬೇಡ ಸಾಕು' ಎನ್ನದಂತೆ ಅವರಲ್ಲಿ ಉತ್ಸಾಹ ತುಂಬುವ ಮನಸು ಮುಂದೆ ಹಿರಿಯರಾಗುವ ಇಂದಿನ ಯುವ ಜನತೆಯಲ್ಲಿ ಪರಿವರ್ತನೆ ಆಗಲಿ.

ಫಲಿತಾಂಶ, ವಿದ್ಯಾರ್ಥಿ ವೇತನ ವಿಳಂಬ ಖಂಡಿಸಿ ಎಐಡಿಎಸ್‌ಓ ಪ್ರತಿಭಟನೆ

ಮೈಸೂರು, ಜ.23(ಎಂಟಿವೈ)– ರಾಷ್ಟ್ರೀಯ ಶೈಕ್ಷಣಿಕ ಠೇವಣಿ ಕೋಶ ಹಾಗೂ ಎಸ್‌ಎಸ್‌ಪಿ ತಾಂತ್ರಿಕ ದೋಷದಿಂದಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳ ಫಲಿತಾಂಶ ವಿಳಂಬ ಹಾಗೂ ವಿದ್ಯಾರ್ಥಿ ವೇತನ ಪಡೆಯಲು ಪರದಾಡುವಂತಾಗಿದೆ ಎಂದು ಆರೋಪಿಸಿ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಸ್ನಾತಕೋತ್ತರ ವಿದ್ಯಾರ್ಥಿಗಳ ಫಲಿತಾಂಶ ಹಾಗೂ ವಿದ್ಯಾರ್ಥಿ ವೇತನ ವಿಳಂಬ ಖಂಡಿಸಿ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ(ಕ್ರಾಫರ್ಡ್ ಭವನ)ದ ಮುಂದೆ ವಿವಿಧ ಕಾಲೇಜು ವಿದ್ಯಾರ್ಥಿಗಳೊಂದಿಗೆ ಎಐಡಿಎಸ್‌ಓ ಕಾರ್ಯಕರ್ತರು ಪ್ರತಿಭಟಿಸಿ, ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಪ್ರಸ್ತುತ ಸ್ನಾತಕೋತ್ತರ ವಿದ್ಯಾರ್ಥಿಗಳ ಹಿಂದಿನ ವರ್ಷದ ಅಂಕ ಪಟ್ಟಿಗಳನ್ನು ರಾಜ್ಯ ವಿದ್ಯಾರ್ಥಿಗಳ ವೇತನ ತಂತ್ರಾಂಶಕ್ಕೆ ಅಪ್‌ಡೇಟ್ ಮಾಡುವುದರಲ್ಲಿನ ಗೊಂದಲ ಬಗೆಹರಿಸುವಂತೆ ಒತ್ತಾಯಿಸಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಮೈಸೂರು ವಿವಿಯ ಎಂಬಿಎ, ಎಂಎಸ್‌ಸಿ, ಎಂಸಿಎ ಹಾಗೂ ಎಂಎ ಸ್ನಾತಕೋತ್ತರ ವಿದ್ಯಾರ್ಥಿಗಳ ಹಿಂದಿನ ವರ್ಷದ ಅಂಕಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶಕ್ಕೆ ಮಾಹಿತಿ ನೀಡದ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಠೇವಣಿ ಕೋಶದ ತಾಂತ್ರಿಕ ಗೊಂದಲದಿಂದ ಹಲವು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರೆತಿಲ್ಲ. ಈ ಕಾರಣದಿಂದ ವಿದ್ಯಾರ್ಥಿಗಳು ಕಳೆದ ಮೂರು ತಿಂಗಳಿಂದ ತೊಂದರೆಗೀಡಾಗಿದ್ದಾರೆ. ಕಾಲೇಜುಗಳಲ್ಲಿ ಕೇಳಿದರೆ ಇದು ವಿವಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಅತ್ತ, ಮೈಸೂರು ವಿವಿ ಆಡಳಿತ ವರ್ಗ ಇದು ಕಾಲೇಜಿನಲ್ಲಿ ಉಂಟಾಗಿರುವ ಸಮಸ್ಯೆ ಎಂದು ಹೇಳುತ್ತಾ ವಿದ್ಯಾರ್ಥಿಗಳನ್ನು ಅಲ್ಲಿಂದಿಲ್ಲಿಗೆ ಅಲೆಯುವಂತೆ ಮಾಡುತ್ತಿರುವುದು ಅಮಾನವೀಯ ಕೃತ್ಯ ಎಂದು ಕಿಡಿಕಾರಿದರು.

ಹಿಂದಿನ ವರ್ಷದ ಅಂಕಗಳು ಅಪ್ಡೇಟ್ ಆಗದಿರುವುದಕ್ಕೆ ಕಾರಣವನ್ನು ಮೈಸೂರು ವಿವಿ ಮತ್ತು ರಾಜ್ಯ ಸರಕಾರ ಪತ್ತೆಹಚ್ಚಿ, ಕೂಡಲೇ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಮೈಸೂರು ವಿವಿ ಮತ್ತು ಕಾಲೇಜುಗಳ ಎದುರು ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಅಭಿಷೇಕ್, ನಿತಿನ್, ವಿದ್ಯಾರ್ಥಿಗಳಾದ ಹೇಮಂತ್, ಮಹೇಶ್, ಭೂಮಿಕಾ, ಹರ್ಷಿತ, ವೀರೇಂದ್ರ, ಲೋಹಿತ, ಪಲ್ಲವಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

46ನೇ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಯೋಗೇಂದ್ರ



ಮೈಸೂರು, ಜ.23– ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ, ಅಂತರರಾಷ್ಟ್ರೀಯ ಕ್ರೀಡಾಪಟು ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಾದಪ್ಪ ಯೋಗೇಂದ್ರ ಅವರು ಕೇರಳದ ತಿರುವನಂತಪುರಂನ ಚಂದ್ರಶೇಖರನ್ ನಾಯರ್ ಮತ್ತು ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ಜ.28 ರಿಂದ ಫೆ.1 ರವರೆಗೆ ನಡೆಯಲಿರುವ 46ನೇ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ.

ಸರ್ಕಾರಿ ಶಾಲೆ, ಆಸ್ಪತ್ರೆ ಮುಚ್ಚುವ ಹುನ್ನಾರ ಕೈಬಿಡದಿದ್ದರೆ

ಒಂದು ಕೈಯಲ್ಲಿ ರಾಷ್ಟ್ರಧ್ವಜ, ಇನ್ನೊಂದು ಕೈಯಲ್ಲಿ ಕಪ್ಪು ಬಾವುಟ ಹಿಡಿದು ಪ್ರತಿಭಟನೆ

ಮೈಸೂರು, ಜ.23(ಜಿಎ)–ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆ ಮುಚ್ಚುವ, ಕೆಲವು ಆಸ್ಪತ್ರೆಗಳನ್ನು ಮುಚ್ಚುವ ಹುನ್ನಾರವನ್ನು ಜ.25ರೊಳಗೆ ಕೈಬಿಡದಿದ್ದರೆ ಜ.26 ರಂದು ಗಣರಾಜ್ಯೋತ್ಸವ ನಡೆಯುವ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದಲ್ಲಿ ರಾಷ್ಟ್ರಧ್ವಜದೊಡನೆ ಕಪ್ಪು ಬಾವುಟ ಹಿಡಿದು ಪ್ರತಿಭಟಿಸಲಾಗುವುದು ಎಂದು ರೈತ ಸಂಘ ಹಾಗೂ ಇನ್ನಿತರ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಈ ವಿಷಯ ತಿಳಿಸಿ, ರಾಜ್ಯದ ಗ್ರಾಮೀಣ ಭಾಗದ ರೈತರು, ಕೃಷಿ ಕಾರ್ಮಿಕರು, ಕೂಲಿ ಕಾರ್ಮಿಕರ ವಿರೋಧಿ ನೀತಿಯನ್ನು ರಾಜ್ಯ ಸರ್ಕಾರ ಜ.25 ರೊಳಗೆ ಕೈಬಿಡಬೇಕು. ಇಲ್ಲದಿದ್ದರೆ ಒಂದು ಕೈಯ್ಯಲ್ಲಿ ರಾಷ್ಟ್ರ ಧ್ವಜ, ಇನ್ನೊಂದು ಕೈಯ್ಯಲ್ಲಿ ಕಪ್ಪು ಬಾವುಟು ಹಿಡಿದು ಆಕ್ರೋಶ ವ್ಯಕ್ತಪಡಿಸಲಾಗುವುದು. ಈ ಹೋರಾಟಕ್ಕೆ ಎಸ್‌ಡಿಎಂಸಿ ಸಂಘ, ಎಐಡಿಎಸ್‌ಓ, ಗಂಧದ ಗುಡಿ ಫೌಂಡೇಷನ್ ಹಾಗೂ ನಗರದ ಇನ್ನಿತರ ಕನ್ನಡಪರ ಸಂಘಟನೆಗಳು ಬೆಂಬಲ ಸೂಚಿಸಿವೆ ಎಂದರು.

ಎಐಡಿಎಸ್‌ಓ ಸಂಘಟನಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಮುಂದಿನ ದಿನಗಳಲ್ಲಿ ಏಕರೂಪ ಶಿಕ್ಷಣ ಜಾರಿಗೊಳಿಸಬೇಕು. ಪ್ರತಿ ಗ್ರಾಮದಲ್ಲಿಯೂ ಎಲ್‌ಕೆಜಿ ಯಿಂದ 5ನೇ ತರಗತಿವರೆಗೆ ಮೂಲ ಸೌಕರ್ಯ ನೀಡಿ ಗುಣಮಟ್ಟದ ಶಿಕ್ಷಣ ಕೊಡಬೇಕು. ಪ್ರತಿ ಗ್ರಾಪಂನಲ್ಲಿಯೂ ನವೋದಯ ಮಾದರಿಯಲ್ಲಿ 6ನೇ ತರಗತಿಯಿಂದ ಪಿಯುಸಿವರೆಗೂ ವಸತಿ ಶಿಕ್ಷಣ ಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎನ್. ರೇವಣ್ಣ, ದಾರಿಪುರ ಚಂದ್ರಶೇಖರ್, ಆರ್ಯನ್ ಗಂಧದಗುಡಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 24 ಜನವರಿ 2026

ಮೈಸೂರಲ್ಲಿ ರ್‍ಯಾಪಿಡೋ ಬೈಕ್ ಏರಿದ ಸವಾರನಿಗೆ ಆಟೋ ಚಾಲಕರಿಂದ ಹಲ್ಲೆ

ಮೈಸೂರು: ಬೈಕ್ ಟ್ಯಾಕ್ಸಿ ಸೇವೆಗೆ ಕರ್ನಾಟಕ ಹೈಕೋರ್ಟ್ ಅನುಮತಿ ನೀಡಿದ ಸುದ್ದಿ ವ್ಯಾಪಕ ವೈರಲ್ ಆಗಿರುವಂತೆಯೇ ಅತ್ತ ರ್‍ಯಾಪಿಡೋ ಬೈಕ್ ಪ್ರಯಾಣಿಕರ ಮೇಲೆ ಆಟೋ ಚಾಲಕರು ದಾಳಿ ಮಾಡಿರುವ ವಿಡಿಯೋ ವೈರಲ್ ಆಗುತ್ತಿದೆ.

ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ಈ ಘಟನೆ ನಡೆದಿದ್ದು, ನಿಲ್ದಾಣದಿಂದ ತೆರಳಲು ರ್‍ಯಾಪಿಡೋ ಬೈಕ್ ಬುಕ್ ಮಾಡಿಕೊಂಡಿದ್ದ 19ರ ಯುವಕನ ಮೇಲೆ ಸ್ಥಳೀಯ ಆಟೋ ಚಾಲಕರು ಥಳಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಥಳಿತದ ವಿಡಿಯೋವನ್ನು ಸಂತ್ರಸ್ತ ಯುವಕ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು ಈ ವಿಡಿಯೋ ಇದೀಗ ವೈರಲ್ ಆಗುತ್ತಿದೆ.

ಯುವಕನ ಮೇಲಿನ ಹಲ್ಲೆಯನ್ನು ಆತನ ಸಹೋದರಿ ಎಕ್ಸ್‌ನಲ್ಲಿ ಟ್ವೀಟ್ ಮಾಡಿದ್ದು, ರ್‍ಯಾಪಿಡೋ ಬೈಕ್ ಬುಕ್ ಮಾಡಿದ್ದಕ್ಕಾಗಿ ತನ್ನ ಸಹೋದರನನ್ನು ಥಳಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಅಲ್ಲದೆ ತಮ್ಮ ಸಹೋದರನ ಮೇಲಿನ ಹಲ್ಲೆ ವಿಡಿಯೋವನ್ನು ಅಪ್ಲೋಡ್ ಮಾಡಿ, ಪುಂಡ ಆಟೋ ಚಾಲಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ಪೊಲೀಸರಿಗೆ ಆಗ್ರಹಿಸಿದ್ದಾರೆ.

ಮಹಿಳೆಯ ಪೋಸ್ಟ್‌ನಲ್ಲಿ, ನಿನ್ನೆ ರಾತ್ರಿ 11 ಗಂಟೆ ಸುಮಾರಿಗೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ, ನನ್ನ ಸಹೋದರ (19 ವರ್ಷ) ರ್‍ಯಾಪಿಡೋ ಬೈಕ್ ಬುಕ್ ಮಾಡಿದ್ದಕ್ಕೆ ಕೆಲ ಪುಂಡ ಆಟೋ ಚಾಲಕರು ಥಳಿಸಿದ್ದಾರೆ. ಬೈಕ್ ಟ್ಯಾಕ್ಸಿ ಅಗ್ಗದ ಆಯ್ಕೆಯಾಗಿದ್ದರಿಂದ ಅದನ್ನು ಬುಕ್ ಮಾಡಲಾಗಿತ್ತು. ಆದರೆ ಆಟೋದಲ್ಲೇ ಪಯಣಿಸಬೇಕು ಎಂದು ಒತ್ತಾಯಿಸಿದ್ದಾರೆ ಎಂದು ಹೇಳಿದ್ದಾರೆ.

ಈ ವೇಳೆ ಆಟೋ ಚಾಲಕರು ಬೈಕ್ ಟ್ಯಾಕ್ಸಿ ಸವಾರನ ಮೇಲೆ ಹಲ್ಲೆ ಮಾಡಿದ್ದು ಬೈಕ್ ಟ್ಯಾಕ್ಸಿ ಬುಕ್ ಮಾಡಿದ್ದ ಸವಾರನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇದನ್ನು ಸವಾರ ಪ್ರಶ್ನಿಸಿದಾಗ ಯುವಕನ ಮೇಲೆ ಆಟೋ ಚಾಲಕರು ಹಲ್ಲೆ ಮಾಡಿದ್ದಾರೆ. ಈ ವೇಳೆ ಸಂತ್ರಸ್ತ ಯುವಕ ಪೊಲೀಸರಿಗೆ ಮಾಹಿತಿ ನೀಡಿದ್ದು, ಮಧ್ಯಪ್ರವೇಶಿಸಿದ ಪೊಲೀಸರು ರಾಜೀ ಮಾಡಿಕೊಳ್ಳುವಂತೆ ಸಲಹೆ ನೀಡಿದ್ದಾರೆ ಎಂದು ಮಹಿಳೆ ಐಸಿರಿ ಭಟ್ Xನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಾಮಾನ್ಯವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಇಂತಹವುಗಳನ್ನು ಬರೆಯುವುದಿಲ್ಲ. ಆದರೆ ಇಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಎಷ್ಟು ಅಸಹಾಯಕನಾಗಿದ್ದಾನೆಂದು ನೋಡಿ ನನಗೆ ಆಘಾತವಾಗಿದೆ. ಅದರ ಬಗ್ಗೆ ನನಗೆ ಏನೂ ಮಾಡಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

ಮಹಿಳೆ ಈ ಪೋಸ್ಟ್ ಅನ್ನು ERSS (ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆ), ಕರ್ನಾಟಕ ಡಿಜಿ ಮತ್ತು ಐಜಿಪಿ ಮತ್ತು ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಅವರನ್ನು ಟ್ಯಾಗ್ ಮಾಡಿದ್ದಾರೆ.

ಮೈಸೂರು ನಗರ ಪಾಲಿಕೆ ಆರೋಗ್ಯಾಧಿಕಾರಿಗಳ ಹುದ್ದೆ ರದ್ದು

ರಾಜ್ಯ ಸರ್ಕಾರದಿಂದ ಆದೇಶ

- ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೆಚ್ಚಿನ ಹೊಣೆ
- ಬೆಂಗಳೂರು ಬಿಟ್ಟು ರಾಜ್ಯದ ಎಲ್ಲಾ ಪಾಲಿಕೆ ಪಾಲನೆ
- ಆರೋಗ್ಯ ಸುಧಾರಣೆ ಇವರಿಗೆ ಏನು ಗೊತ್ತಿರುತ್ತದೆ!

ಮೈಸೂರು, ಜ.23(ಬಿಎಲ್‌ಯು)– ಕಾಲರಾ, ಡೆಂಗ್ಯೂ ಸೇರಿದಂತೆ ಇತರೆ ಸಾಂಕ್ರಾಮಿಕ ರೋಗ ಹರಡಿದಾಗ ಅದರ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಮೈಸೂರು ನಗರ ಪಾಲಿಕೆಯ ಆರೋಗ್ಯಾಧಿಕಾರಿಗಳ ಹುದ್ದೆಯನ್ನು ರಾಜ್ಯ ಸರ್ಕಾರ ರದ್ದುಗೊಳಿಸಿದೆ.

ಆರೋಗ್ಯಾಧಿಕಾರಿಗಳ ಕರ್ತವ್ಯವನ್ನು ಇನ್ನು ಮುಂದೆ ನಗರ ಪಾಲಿಕೆಯ ಪರಿಸರ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್ಚುವರಿಯಾಗಿ ನಿರ್ವಹಿಸಬೇಕಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಐದು ನಗರ ಪಾಲಿಕೆಯಲ್ಲಿ ಮಾತ್ರ ಆರೋಗ್ಯಾಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ. ಆದರೆ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ನಗರ ಪಾಲಿಕೆಗಳಲ್ಲಿನ ಆರೋಗ್ಯಾಧಿಕಾರಿಗಳ ಹುದ್ದೆಯನ್ನು ಸರ್ಕಾರ ರದ್ದುಗೊಳಿಸಿದೆ. ಇನ್ನು ಮುಂದೆ ಪರಿಸರ ವಿಭಾಗದ ಎಗ್ಸಿಕ್ಯೂಟಿವ್ ಇಂಜಿನಿಯರ್ ಅವರೇ ಆರೋಗ್ಯಾಧಿಕಾರಿಗಳ ಹುದ್ದೆಯ ಜವಾಬ್ದಾರಿ ನಿರ್ವಹಣೆ ಮಾಡಲಿದ್ದಾರೆ.

ನಗರದಲ್ಲಿ ಕಾಲರಾ, ಡೆಂಗ್ಯೂ ಸೇರಿದಂತೆ ಇತರೆ ರೋಗಗಳು ಬಂದಾಗ ಅದರ ನಿಯಂತ್ರಣ ಮಾಡುತ್ತಿದ್ದ ಆರೋಗ್ಯಾಧಿಕಾರಿಗಳ ಕಾರ್ಯ ನಿರ್ವಹಣೆಯ ಹೊಣೆಯನ್ನ ಎಕ್ಸಿಕ್ಯೂಟಿವ್ ಇಂಜಿನಿಯರ್ ಇನ್ನು ಹೊರಬೇಕಿದೆ.

ಆರೋಗ್ಯದ ವಿಚಾರ ಎಗ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೇಗೆ ಗೊತ್ತಿರುತ್ತದೆ

ಕೆಲವು ವೈದ್ಯರು ಎಂಬಿಬಿಎಸ್ ಪದವಿ ಪಡೆದ ನಂತರ, ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಸಾರ್ವಜನಿಕ ಆರೋಗ್ಯದ ವಿಷಯವಾಗಿ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮಾ ಪಡೆಯುತ್ತಿದ್ದರು. ಇಂತಹ ವೈದ್ಯರನ್ನು ಮಾತ್ರ ನಗರ ಪಾಲಿಕೆಯಲ್ಲಿ ಆರೋಗ್ಯಾಧಿಕಾರಿಗಳಾಗಿ ನೇಮಕ ಮಾಡುತ್ತಿದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ವೈದ್ಯರನ್ನು ಎರವಲು ಸೇವೆ ಮೇಲೆ ನಗರ ಪಾಲಿಕೆಗೆ ನಿಯೋಜನೆ ಮಾಡಲಾಗುತ್ತಿತ್ತು.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯಾಧಿಕಾರಿ ನೇಮಕಗೊಳಿಸಿದಾಗ ಜನರ ಆರೋಗ್ಯ ಸುಧಾರಣೆ ಸೇರಿದಂತೆ ಇತರೆ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು.

ಆದರೆ ಈಗ ಸರ್ಕಾರ ವೈದ್ಯಕೀಯ ಪದವಿ, ಅದರಲ್ಲೂ ಸಾರ್ವಜನಿಕ ಆರೋಗ್ಯದ ಬಗ್ಗೆ ಸ್ನಾತಕೋತ್ತರ ಪದವಿ ಇಲ್ಲವೇ ಡಿಪ್ಲೋಮಾ ಪಡೆದು ಅನುಭವವಿರುವ ಆರೋಗ್ಯಾಧಿಕಾರಿಗಳ ಹುದ್ದೆಯನ್ನು ರದ್ದುಗೊಳಿಸಿದೆ.

ಇದರಿಂದ ಸಾರ್ವಜನಿಕರ ಆರೋಗ್ಯದ ಬಗ್ಗೆ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಅದರ ವಿಚಾರಗಳು ಆರೋಗ್ಯಾಧಿಕಾರಿಗಳಿಗೆ ಮಾತ್ರವೇ ತಿಳಿದಿರುತ್ತದೆ. ಆದರೆ, ಈಗ ಎಗ್ಸಿಕ್ಯೂಟಿವ್ ಇಂಜಿನಿಯರ್‌ಗೆ ಈ ಜವಾಬ್ದಾರಿ ನೀಡಿದಾಗ ಯಾವ ರೀತಿ ಅದನ್ನು ನಿರ್ವಹಿಸುತ್ತಾರೆ ಎಂಬ ಆತಂಕ ಎದುರಾಗಿದೆ.

ಆರೋಗ್ಯಾಧಿಕಾರಿಗಳ ಹುದ್ದೆ ರದ್ದಿನಿಂದ ಯಾವುದೇ ತೊಂದರೆ ಆಗದು



ಆರೋಗ್ಯಾಧಿಕಾರಿಗಳನ್ನು ಮಾತೃ ಇಲಾಖೆಗೆ ಕಳುಹಿಸಿ, ಆ ಹುದ್ದೆಯ ಹೊಣೆಯನ್ನು ಪರಿಸರ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ನೀಡಬೇಕೆಂದು ಸರ್ಕಾರದಿಂದ ಆದೇಶ ಬಂದಿದೆ.

ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುವುದು ಸೇರಿದಂತೆ ಕೆಲವು ಕೆಲಸಗಳನ್ನು ಆರೋಗ್ಯಾಧಿಕಾರಿಗಳು ನಿರ್ವಹಿಸುತ್ತಿದ್ದರು. ಆದರೆ ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಯಾರಿಸುವುದು, ಟೆಂಡರ್ ಕರೆಯುವುದು ಸೇರಿದಂತೆ ಇತರೆ ಕೆಲಸವನ್ನು ಎಗ್ಸಿಕ್ಯೂಟಿವ್ ಇಂಜಿನಿಯರ್ ಅವರೇ ನಿರ್ವಹಿಸುತ್ತಿದ್ದರು. ಈಗ ಆರೋಗ್ಯ ಶಾಖೆಯ ಎಲ್ಲಾ ಜವಾಬ್ದಾರಿಯನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರೇ ನಿರ್ವಹಣೆ ಮಾಡಲಿದ್ದಾರೆ. ಇದರಿಂದ ಆರೋಗ್ಯ ಶಾಖೆಯ ಕೆಲಸಗಳಲ್ಲಿ ಮತ್ತಷ್ಟು ಪ್ರಗತಿ ಕಂಡು ಬರುತ್ತದೆ. ಆರೋಗ್ಯಾಧಿಕಾರಿಗಳ ಹುದ್ದೆ ಇಲ್ಲದಿರುವುದರಿಂದ ನಗರ ಪಾಲಿಕೆಗೆ ಯಾವುದೇ ತೊಂದರೆ ಇಲ್ಲ.

- ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ನಗರ ಪಾಲಿಕೆ.

ಅನಾಹುತವಾದಾಗ ಸರ್ಕಾರಕ್ಕೆ ತಪ್ಪಿನ ಅರಿವಾಗುತ್ತದೆ

ಆರೋಗ್ಯಾಧಿಕಾರಿಗಳ ಹುದ್ದೆ ರದ್ದುಗೊಳಿಸಿದರೆ ನಗರದ ಆರೋಗ್ಯ ಸುಧಾರಣೆಯಲ್ಲಿ ಅನುಭವಸ್ಥರು ಇಲ್ಲದಿರುವ ಹಿನ್ನೆಲೆಯಲ್ಲಿ ಬಹಳಷ್ಟು ಸಮಸ್ಯೆ ಎದುರಾಗುತ್ತದೆ ಎಂಬ ಆತಂಕ ಎದುರಾಗಿದೆ.

ಮೈಸೂರು ನಗರ ಪಾಲಿಕೆಯಲ್ಲಿ ಆರೋಗ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಬೇರೆಡೆಗೆ ವರ್ಗವಾಗಿರುವ ವೈದ್ಯರೊಬ್ಬರು ಇದರ ದುಷ್ಪರಿಣಾಮಗಳನ್ನು 'ಮೈಸೂರು ಮಿತ್ರ'ನಿಗೆ ವಿವರಿಸಿದ್ದಾರೆ.

ಸಾಂಕ್ರಾಮಿಕ ರೋಗಗಳು ಬಂದಾಗ ಅದರ ನಿಯಂತ್ರಣ ಯಾವ ರೀತಿ ಮಾಡಬೇಕೆಂದು ಆರೋಗ್ಯಾಧಿಕಾರಿಗಳು ಬಲ್ಲವರಾಗಿದ್ದರು. ಶಾಲಾ ಮಕ್ಕಳಿಗೆ ಯಾವ ವ್ಯಾಕ್ಸಿನೇಷನ್ ನೀಡಬೇಕೆಂದು ತೀರ್ಮಾನ ಮಾಡುತ್ತಿದ್ದರು.

ಸಮಾವೇಶಗಳು ನಡೆದಾಗ ಆಹಾರ ವಿತರಣೆಯ ಮಾದರಿಯನ್ನು ಪರೀಕ್ಷಿಸಿ ದೃಢೀಕರಿಸುತ್ತಿದ್ದರು, ಕುಡಿಯುವ ನೀರು ಕಲುಷಿತಗೊಂಡಾಗ ನೀರಿನ ಮಾದರಿಯನ್ನು ತಕ್ಷಣ ಪ್ರಯೋಗಾಲಯಕ್ಕೆ ಕಳುಹಿಸಿ, ಸಾಂಕ್ರಾಮಿಕ ರೋಗ ಹರಡದಂತೆ ಕ್ರಮಕ್ಕೆ ಮುಂದಾಗುತ್ತಿದ್ದರು.

ನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿ ಲೋಪ ದೋಷಗಳನ್ನು ಸರಿಪಡಿಸುತ್ತಿದ್ದರು. ಇಂತಹ ಹತ್ತು ಹಲವು ಜವಾಬ್ದಾರಿಗಳನ್ನು ಅನುಭವಸ್ಥ ಆರೋಗ್ಯಾಧಿಕಾರಿಗಳು ಮಾಡುತ್ತಿದ್ದರು. ಈಗ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಇದರ ಹೊಣೆ ಹೊರಿಸಿದರೆ ಅವರಿಗೆ ಈ ವಿಚಾರಗಳು ಹೇಗೆ ಅರಿವಿಗೆ ಬರುತ್ತವೆ ಎಂಬ ಪ್ರಶ್ನೆ ಎದುರಾಗಿದೆ.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಮಕ್ಕಳಿಗೆ ಪೌರ ಪ್ರಜ್ಞೆ

ನಾನಾ ಸಮಸ್ಯೆಗಳಿಗೆ ಸಂಬಂಧಿಸಿದ ವಿವಿಧ ಇಲಾಖಾ ಕಚೇರಿಗಳಿಗೆ ದೂರು ಸಲ್ಲಿಸುವ ಮೂಲಕ ಅರಿವು





ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಮಕ್ಕಳು, ಶಿಕ್ಷಕರ ಮಾರ್ಗದರ್ಶನದಲ್ಲಿ ಪೊಲೀಸ್ ಠಾಣೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತೆರಳಿ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ದೂರು ಸಲ್ಲಿಸಿದರು.

ಮೈಸೂರು, ಜ.23– ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳಿಗೆ ಸಾಮಾಜಿಕ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ 'ಮೂಲ ಸೌಲಭ್ಯಗಳ ಕುಂದು–ಕೊರತೆ ಜಾಗೃತಿ ಅಭಿಯಾನ'ವನ್ನು ಅಳವಡಿಸಿಕೊಳ್ಳಲಾಗಿದೆ.

ಇದರ ಅಂಗವಾಗಿ ಸಂಸ್ಥೆಯ ಕನಕದಾಸನಗರ ಮತ್ತು ಆರ್‌ಟಿ ನಗರ ಕ್ಯಾಂಪಸ್‌ಗಳ ವಿದ್ಯಾರ್ಥಿಗಳು, ತಮ್ಮ ಪರಿಸರದಲ್ಲಿ ಕಂಡುಬಂದ ಹಲವು ಸಮಸ್ಯೆಗಳ ಬಗ್ಗೆ ಸ್ಥಳೀಯ ಸಂಸ್ಥೆಗಳು, ಪೊಲೀಸ್ ಠಾಣೆ ಹಾಗೂ ಇತರ ಸರ್ಕಾರಿ ಕಚೇರಿಗಳಿಗೆ ಖುದ್ದು ದೂರು ಸಲ್ಲಿಸಿದರು.

ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಮಕ್ಕಳಿಗೆ ಸಾಮಾಜಿಕ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಪಠ್ಯಕ್ರಮದೊಂದಿಗೆ ಜೋಡಿಸಿಕೊಂಡಿರುವುದು ವಿಶೇಷವಾಗಿದೆ. 'ಪ್ರಶ್ನಿಸುವುದು ನನ್ನ ಹಕ್ಕು–ಪೌರ ಪ್ರಜ್ಞೆ ನನ್ನ ಕರ್ತವ್ಯ' ಘೋಷವಾಕ್ಯದ ಮೂಲಕ ಪೌರಪ್ರಜ್ಞೆ ಮೂಡಿಸಲಾಗುತ್ತಿದೆ. ತಮ್ಮ ಸುತ್ತಲಿನ ಪರಿಸರದಲ್ಲಿನ ಸಮಸ್ಯೆಗಳ ಬಗ್ಗೆ ಪ್ರಜ್ಞಾವಂತ ನಾಗರಿಕರಾಗಿ ಹೇಗೆ ಪ್ರಶ್ನಿಸಬೇಕು, ಎಲ್ಲಿಗೆ ದೂರು ಸಲ್ಲಿಸಬೇಕು ಎಂಬ ತಿಳುವಳಿಕೆ ನೀಡಲಾಗುತ್ತಿದೆ.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಾವು ವಾಸಿಸುವ ಹಾಗೂ ಸಂಚರಿಸುವ ಪ್ರದೇಶದಲ್ಲಿ ಕಂಡುಬರುವ ನಾಗರಿಕ ಸಮಸ್ಯೆಗಳನ್ನು ಗುರುತಿಸಿ, ಸಂಬಂಧಿಸಿದ ಕಚೇರಿಗಳಿಗೆ ದೂರು ಸಲ್ಲಿಸುವ ವಿಧಾನವನ್ನು ಶಿಕ್ಷಕರ ಮಾರ್ಗ ದರ್ಶನದಲ್ಲಿ ತಿಳಿದುಕೊಂಡರು. ಬೋಗಾದಿ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ನಾಲ್ಕು ವಲಯ ಕಚೇರಿಗಳಿಗೆ ತೆರಳಿ, ರಸ್ತೆ, ಕುಡಿಯುವ ನೀರು, ಒಳಚರಂಡಿ, ಪರಿಸರ ಮಾಲಿನ್ಯ, ಶಬ್ದ ಮಾಲಿನ್ಯ, ಬೀದಿ ದೀಪ, ಉದ್ಯಾನವನಗಳ ಕಳಪೆ ನಿರ್ವಹಣೆ, ಪಾದಚಾರಿ ಮಾರ್ಗ ಅತಿಕ್ರಮಣ, ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಹಲವು ದೂರುಗಳನ್ನು ಸಲ್ಲಿಸಿ, ಸ್ವೀಕೃತಿ ಪಡೆದರು. ಶಿಕ್ಷಕರಾದ ಶ್ರೀಮತಿ ದೇಚಮ್ಮ, ಶ್ರೀಮತಿ ತಾರಾಮಣಿ, ಡಾ.ಮೊಹಮ್ಮದ್ ಹುಮಾಯೂನ್ ಮತ್ತಿತರರು ಸೂಕ್ತ ಮಾರ್ಗದರ್ಶನ ನೀಡಿದರು.

ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲೇ ನಾಗರಿಕ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವುದು ಉತ್ತಮ. ಮಕ್ಕಳಿಗೆ ಪ್ರಶ್ನಿಸುವ ಪ್ರವೃತ್ತಿ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ತಮ್ಮ ಜವಾಬ್ದಾರಿಯನ್ನು ತಿಳಿಸಿಕೊಡಬೇಕು. ಇದು ಶಿಕ್ಷಣದ ಭಾಗವಾಗಬೇಕು ಎಂಬುದು ನೈಪುಣ್ಯ ವಿದ್ಯಾಸಂಸ್ಥೆ ಉದ್ದೇಶ. ಈ ನಿಟ್ಟಿನಲ್ಲಿ ಪ್ರತೀ ತಿಂಗಳು ಒಂದು ದಿನ ವಿದ್ಯಾರ್ಥಿಗಳು ತಮ್ಮ ಪರಿಸರದ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟವರಿಗೆ ತಾವೇ ಖುದ್ದು ದೂರು ಸಲ್ಲಿಸುವ ವಿಧಾನವನ್ನು ತಿಳಿಸಿಕೊಡುವ ಕಾರ್ಯಕ್ರಮ ಅಳವಡಿಸಿಕೊಳ್ಳಲಾಗಿದೆ.

- ಆರ್.ರಘು, ಅಧ್ಯಕ್ಷರು, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್

ಕುಸಿದು ಬಿದ್ದ ಸ್ಮಶಾನದ ಕಾಂಪೌಂಡ್; ಪುಂಡ–ಪೋಕರಿಗಳ ಹಾವಳಿ

ನಿವಾಸಿಗಳಲ್ಲಿ ಭಯ–ಭೀತಿ



ಗಣೇಶನಗರದಲ್ಲಿರುವ ಸಾರ್ವಜನಿಕ ಸ್ಮಶಾನದ ಕಾಂಪೌಂಡ್ ಗೋಡೆ ಕುಸಿದು ಬಿದ್ದಿರುವುದು.

ಮೈಸೂರು, ಜ.23(ಎಂಕೆ)– ಮೈಸೂರು ನಗರಪಾಲಿಕೆ ವಾರ್ಡ್ ನಂ.15ರ ವ್ಯಾಪ್ತಿಯ ಗಣೇಶನಗರದಲ್ಲಿರುವ ಸಾರ್ವಜನಿಕ ಸ್ಮಶಾನದ ಕಾಂಪೌಂಡ್ ಗೋಡೆ ಕುಸಿದು ಬಿದ್ದಿದ್ದು, ಬೀದಿ ದೀಪ ವ್ಯವಸ್ಥೆಯಿಲ್ಲದೆ ಪುಂಡ–ಪೋಕರಿಗಳ ಹಾವಳಿಯಿಂದ ಹಾಳುಕೊಂಪೆಯಾಗಿದೆ.

ಅಂದಾಜು 4 ಎಕರೆ ವಿಸ್ತೀರ್ಣದಲ್ಲಿರುವ ಸ್ಮಶಾನದಲ್ಲಿ ರಾತ್ರಿ ವೇಳೆ ಬೀದಿ ದೀಪದ ವ್ಯವಸ್ಥೆ ಇಲ್ಲದೆ ಸಂಜೆಯಾಗುತ್ತಿದ್ದಂತೆ ಕಗ್ಗತ್ತಲೂ ಆವರಿಸಲಿದ್ದು, ಪುಂಡರ ಹಾವಳಿ ಜೊತೆಗೆ ಅನೈತಿಕ ಚಟುವಟಿಕೆಗಳ ತಾಣವಾಗಿ ಬದಲಾಗಿದೆ ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಸ್ಮಶಾನದ ಕಾಂಪೌಂಡ್ ಗೋಡೆ ಕುಸಿದು ಬಿದ್ದು, ವರ್ಷವೇ ಕಳೆಯುತ್ತಿದ್ದರೂ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿ–ಸಿಬ್ಬಂದಿ ಇದುವರೆಗೂ ಗಮನಿಸಿಲ್ಲ. ಸ್ಮಶಾನದ ಸುತ್ತಲೂ ಮನೆಗಳು ಹೆಚ್ಚಾಗಿರುವುರಿಂದ ಸ್ಥಳೀಯ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಶಾಲೆಗೆ ತೆರಳುವ ಮಕ್ಕಳು ಸ್ಮಶಾನದ ಬಳಿ ಬಂದಾಗ ಭಯ ಬೀಳುವಂತಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಸ್ಮಶಾನದ ಸುತ್ತಲೂ ಇದ್ದ ಕಾಂಪೌಂಡ್ ಕುಸಿದು ಬಿದ್ದಿರುವುದರಿಂದ ರಾತ್ರಿ ವೇಳೆ ಸ್ಮಶಾನದೊಳಗೆ ಪುಂಡ–ಪೋಕರಿಗಳಿಂದ ಪಾರ್ಟಿ ಮತ್ತಿತರ ಅನೈತಿಕ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿವೆ. ಬೀದಿ ದೀಪದ ವ್ಯವಸ್ಥೆ ಇಲ್ಲದಿರುವುದು ಪುಂಡರ ಹಾವಳಿಗೆ ಅವಕಾಶ ಮಾಡಿಕೊಟ್ಟಂತಾಗಿದ್ದು, ಸಂಜೆಯಾಗುತ್ತಿದ್ದಂತೆ ಸ್ಮಶಾನದ ಬಳಿಯ ರಸ್ತೆಯಲ್ಲಿ ತಿರುಗಾಡುವುದಕ್ಕೂ ಭಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕಸ, ಮದ್ಯದ ಬಾಟಲ್‌ಗಳ ರಾಶಿ: ಸ್ಮಶಾನದ ಮೂಲೆ ಮೂಲೆಯಲ್ಲೂ ಮದ್ಯದ ಬಾಟಲ್‌ಗಳು ಹಾಗೂ ಕಸ ರಾಶಿ ರಾಶಿ ಬಿದ್ದಿದೆ. ಪುಂಡರ ಆತಂಕದ ಜೊತೆಗೆ ಕಸದ ನಡುವೆಯೇ ಅಂತ್ಯ ಸಂಸ್ಕಾರ ನಡೆಸುವ ದುರ್ಗತಿ ಬಂದಿದೆ ಎಂದು ಅಸಹಾಯಕತೆ ತೋರಿದ್ದಾರೆ.

ಸನ್ಮಾನ



ಮೈಸೂರು ತಾಲೂಕು ಕಸಬಾ ಹೋಬಳಿಯ ನಾಗನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಸಂಘದ ಅಧ್ಯಕ್ಷ ರಾಜು, ಉಪಾಧ್ಯಕ್ಷ ಎಲ್.ಟಿ.ವೆಂಕಟೇಶ್, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ದಿನೇಶ್, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಭಾಸ್ಕರ್, ಹರೀಶ್, ಯಾದವೇಂದ್ರ, ದೇವರಾಜ್, ಜನಾರ್ಧನ್, ರಾಮಚಂದ್ರಪ್ಪ, ವಿದ್ಯಾಶಂಕರ್, ಮಹದೇವಪ್ಪ, ರಮೇಶ್, ವಿಜಿ, ರವಿಕಾಂತ್, ಶ್ರೀನಿವಾಸ್, ರವಿ, ಕಿರಣ್, ಪ್ರಭಾಕರ್, ಭದ್ರೇಗೌಡ, ಶಿವಣ್ಣ, ರಾಮಚಂದ್ರ, ರವಿಚಂದ್ರ, ಸೋಮು, ನಿತ್ಯ, ಸಾವಿತ್ರಮ್ಮ, ಸುನಿಲ್, ಕರುಣೇಶ್ ಮತ್ತಿತರರು ಉಪಸ್ಥಿತರಿದ್ದರು.

ಜ.26, ಪಂಜಿನ ಕವಾಯತು ಮೈದಾನದಲ್ಲಿ ಗಣರಾಜ್ಯೋತ್ಸವ

ಮೈಸೂರು,ಜ.23– ಮೈಸೂರು ಜಿಲ್ಲಾಡಳಿತ ವತಿಯಿಂದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ನಗರದ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಜ.26ರಂದು ಬೆಳಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ನೆರವೇರಿಸಲಿದ್ದು, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಸೇರಿದಂತೆ ಶಾಸಕರು, ಸಂಸದರು, ನಿಗಮ ಮಂಡಳಿ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ.

ಬಿಲ್ಡಿಂಗ್ ಲೈಸೆನ್ಸ್ ಪಡೆಯುವ ನಿರ್ಮಾಣ್ 2.0 ಸಾಫ್ಟ್‌ವೇರ್ ಸ್ಥಗಿತ

ಲೈಸೆನ್ಸ್‌ಗಾಗಿ ಮೈಸೂರು ನಗರ ಪಾಲಿಕೆಗೆ ಅಲೆಯುತ್ತಿರುವ ಜನರು

ಮೈಸೂರು, ಜ.23(ಬಿಎಲ್‌ಯು)–ಮೈಸೂರು ನಗರ ಪಾಲಿಕೆ ಸೇರಿದಂತೆ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಪರವಾನಗಿ (Building Plan Approval) ಪಡೆಯಲು ಪರಿಚಯಿಸಿರುವ ನಿರ್ಮಾಣ್ 2.0 ವೆಬ್ ಸೈಟ್ ಕಳೆದ 20 ದಿನಗಳಿಂದ ಸ್ಥಗಿತಗೊಂಡಿದೆ. ಇದರಿಂದ ಕಟ್ಟಡ ನಿರ್ಮಾಣ ಪರವಾನಗಿ (ಬಿಲ್ಡಿಂಗ್ ಲೈಸನ್ಸ್) ಪಡೆಯಲು ಮೈಸೂರು ನಗರದ ಜನರು ಪರದಾಡುತ್ತಿದ್ದಾರೆ.

ಕಟ್ಟಡ ನಿರ್ಮಾಣ ಪರವಾನಗಿ ನೀಡುವ ವೇಳೆ ಪಾರದರ್ಶಕತೆ ಹಾಗೂ ವೇಗ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಮಾಣ್ 2.0 ತಂತ್ರಾಂಶವನ್ನು ಅಭಿವೃದ್ಧಿಗೊಳಿಸಿದೆ. ಕಟ್ಟಡ ನಿರ್ಮಾಣ ಪರವಾನಗಿ ಪಡೆಯುವವರು ನಿವೇಶನಕ್ಕೆ ಸಂಬಂಧಿಸಿದ ದಾಖಲಾತಿ, ಕಟ್ಟಡ ನಿರ್ಮಾಣ ನಕ್ಷೆ ಸೇರಿದಂತೆ ಇತರೆ ದಾಖಲಾತಿಗಳೊಂದಿಗೆ ನಿರ್ಮಾಣ 2.0 ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಬಹುದಾಗಿದೆ.

ದಾಖಲಾತಿಗಳನ್ನು ಪರಿಶೀಲಿಸುವ ನಗರ ಪಾಲಿಕೆಯ ಇಂಜಿನಿಯರ್ ಶಾಖೆಯವರು ಒನ್–ಲೈನ್ ಬಿಲ್ಡಿಂಗ್ ಪರ್ಮಿಷನ್ ಸಿಸ್ಟಂ (ಒಬಿಪಿಎಸ್) ಮೂಲಕ ಕಟ್ಟಡ ನಿರ್ಮಾಣ ಪರವಾನಗಿಗೆ ಅನುಮೋದನೆ ನೀಡುತ್ತಿದ್ದರು.

ಆದರೆ ಕಳೆದ 20 ದಿನಗಳಿಂದ ನಿರ್ಮಾಣ 2.0 ವೆಬ್‌ಸೈಟ್ ಕಾರ್ಯ ನಿರ್ವಹಿಸುತ್ತಿಲ್ಲ. ವೆಬ್‌ಸೈಟ್ ತೆರೆದು ಕ್ಲಿಕ್ ಮಾಡಿದರೆ ಎಲ್‌ಬಿಪಿಎಸ್ ವೆಬ್‌ಸೈಟ್ ನಿರ್ವಹಣೆಯಲ್ಲಿದೆ ಎಂದು ತೋರಿಸುತ್ತದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮನೆ ಸೇರಿದಂತೆ ಇತರೆ ಕಟ್ಟಡ ನಿರ್ಮಾಣ ಮಾಡುವವರು ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಪರದಾಡುತ್ತಿದ್ದಾರೆ. ಕಟ್ಟಡ ನಿರ್ಮಾಣ ಪರವಾನಗಿಯ ತುರ್ತು ಅಗತ್ಯ ಇದ್ದವರು ಮೈಸೂರು ನಗರ ಪಾಲಿಕೆಗೆ ದಾಖಲಾತಿ ಸೇರಿದಂತೆ ಅರ್ಜಿ ಹಿಡಿದು ಅಲೆಯುತ್ತಿದ್ದಾರೆ.

ಕೆಲವರು ಈ ಮೊದಲು ಸಲ್ಲಿಸಿದ್ದ ಕಟ್ಟಡ ನಿರ್ಮಾಣ ಪರವಾನಗಿಗೆ ನಗರ ಪಾಲಿಕೆಯ ಇಂಜಿನಿಯರ್ ಶಾಖೆಯಿಂದ ಅನುಮೋದನೆಯಾಗಿದೆ. ಆದರೆ ಲೈಸೆನ್ಸ್ ಡೌನ್‌ಲೋಡ್ ಮಾಡಿಕೊಂಡು ಅದನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಇನ್ನು ಎರಡು ವಾರದಲ್ಲಿ ವೆಬ್‌ಸೈಟ್ ತೆರೆಯಲಿದೆ ಚಿಂತೆ ಬೇಡ

ನಿರ್ಮಾಣ್ 2.0 ವೆಬ್‌ಸೈಟ್ ತಾಂತ್ರಿಕ ಸಮಸ್ಯೆ ಇನ್ನು ಎರಡು ವಾರದಲ್ಲಿ ಪರಿಹಾರವಾಗಲಿದೆ. ನಿರ್ಮಾಣ್ 2.0ಗೆ Karnataka's Unified Land Mangement System (ULMS0) ಹೊಸ ಸಾಫ್ಟ್‌ವೇರ್ ಪರಿಚಯಿಸಲಾಗುತ್ತಿದೆ. ಇದರಿಂದ ತಾತ್ಕಾಲಿಕವಾಗಿ ನಿರ್ಮಾಣ್ 2.0 ವೆಬ್‌ಸೈಟ್ ಸ್ಥಗಿತಗೊಂಡಿದೆ. ಇನ್ನು ಎರಡು ವಾರದಲ್ಲಿ ಹೊಸ ತಂತ್ರಾಂಶ ಅಳವಡಿಸಿ, ವೆಬ್‌ಸೈಟ್‌ಗೆ ಚಾಲನೆ ನೀಡಲಾಗುವುದು ಎಂದು ರಾಜ್ಯ ಸರ್ಕಾರ ಸ್ಪಷ್ಟನೆ ನೀಡಿದೆ. ಈಗಿರುವ ಸಾಫ್ಟ್‌ವೇರ್‌ಗಿಂತ ಹೊಸ ಸಾಫ್ಟ್‌ವೇರ್‌ನಲ್ಲಿ ಬಹಳಷ್ಟು ಪ್ರಯೋಜನಗಳಿವೆ. ಇದರಿಂದ ಲೈಸೆನ್ಸ್‌ಗೆ ಶೀಘ್ರ ಅನುಮೋದನೆ ದೊರೆಯಲಿದೆ. ವೆಬ್‌ಸೈಟ್ ತೊಂದರೆ ಆಗಿರುವ ಹಿನ್ನೆಲೆಯಲ್ಲಿ ಸದ್ಯಕ್ಕೆ ಜನರಿಗೆ ತೊಂದರೆ ಆಗಿರಬಹುದು. ಆದರೆ ಮುಂದೆ ಲೈಸೆನ್ಸ್ ನೀಡುವ ಪ್ರಕ್ರಿಯೆ ವೇಗ ಪಡೆಯುತ್ತದೆ.

-ಶೇಖ್ ತನ್ವೀರ್ ಆಸೀಫ್, ಆಯುಕ್ತರು, ಮೈಸೂರು ನಗರಪಾಲಿಕೆ

ತುರ್ತು ಅಗತ್ಯ ಇದ್ದವರು ನಗರ ಪಾಲಿಕೆಗೆ ಅಲೆದು ಬೇಸತ್ತಿದ್ದಾರೆ. ಸಾಫ್ಟ್ ವೇರ್ ಸಮಸ್ಯೆ, ಸರ್ವರ್ ಸಮಸ್ಯೆ ಇದೆ ಎಂದು ಇಂಜಿನಿಯರ್ ಶಾಖೆಯವರು ದಿನನಿತ್ಯ ಒಂದೊಂದು ಸಬೂಬು ಹೇಳುತ್ತಿದ್ದಾರೆ. ನಿರ್ಮಾಣ್ ವೆಬ್‌ಸೈಟ್ ತೆರೆಯದ ಕಾರಣ ಅವರಿಗೂ ಜನರಿಗೆ ಸ್ಪಷ್ಟನೆ ನೀಡಿ ನೀಡಿ ಸಾಕಾಗಿಹೋಗಿದೆ. ಕೆಲವು ತಾಂತ್ರಿಕ ಸಮಸ್ಯೆ ಹಿನ್ನೆಲೆಯಲ್ಲಿ 2020, ಜುಲೈನಲ್ಲಿ ಇದೇ ರೀತಿ ನಿರ್ಮಾಣ್ 2.0 ಕಾರ್ಯ ಸ್ಥಗಿತಗೊಂಡಿತ್ತು. ಆ ಸಂದರ್ಭದಲ್ಲಿ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತಿತ್ತು. ವೈಬ್‌ಸೈಟ್ ತಾಂತ್ರಿಕ ಸಮಸ್ಯೆ ಸರಿ ಹೋಗುವವರೆಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಲೈಸೆನ್ಸ್ ಪಡೆಯಲು ಅವಕಾಶ ನೀಡಬೇಕೆಂದು ಜನರು ಮೈಸೂರು ನಗರ ಪಾಲಿಕೆಯನ್ನು ಆಗ್ರಹಿಸಿದ್ದಾರೆ.

ಹೆದ್ದಾರಿ ಅಗಲೀಕರಣಕ್ಕೆ 98 ಮರ ಕಡಿಯಲು ಆಕ್ಷೇಪ



ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಮುದ್ದನಹಳ್ಳಿ ಸಮೀಪ ಅಗಲೀಕರಣ ಯೋಜನೆಗೆ 98 ಮರಗಳನ್ನು ಕಡಿಯುವ ಸಂಬಂಧ ಶುಕ್ರವಾರ ಸಾರ್ವಜನಿಕ ಅಹವಾಲು ಸಭೆ ನಡೆಸಲಾಯಿತು.

ಮೈಸೂರು, ಜ.23– ನಂಜನಗೂಡು ತಾಲೂಕು ಮುದ್ದನಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ 766ರ ಅಗಲೀಕರಣಕ್ಕಾಗಿ 98 ಮರಗಳ ಕಡಿಯಲು ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ನಂಜನಗೂಡು–ಊಟಿ ರಸ್ತೆಯ ಸಿಂಧುವಳ್ಳಿಪುರ ಗ್ರಾಮದ ಗಣಪತಿ ದೇವಸ್ಥಾನದ ಬಳಿ ಶುಕ್ರವಾರ ಏರ್ಪಡಿಸಿದ್ದ ಯೋಜನೆ ಸಂಬಂಧ ಸಾರ್ವಜನಿಕ ಅಹವಾಲು ಹಾಗೂ ಆಕ್ಷೇಪಣೆ ಸ್ವೀಕಾರ ಸಭೆಯಲ್ಲಿ ಮರಗಳನ್ನು ಕಡಿಯುವ ಬದಲು ಯೋಜನೆಯನ್ನೇ ಕೈಬಿಡಿ ಇಲ್ಲವೇ ಡಿಪಿಆರ್ ಅನ್ನು ಬದಲಿಸಿ ಮರಗಳನ್ನು ಉಳಿಸಿ ಎಂದು ಪರಿಸರ ಕಾರ್ಯಕರ್ತರು, ಡಿಎಸ್‌ಎಸ್ ಸದಸ್ಯರು ಹಾಗೂ ರೈತ ಮುಖಂಡರು ಒಕ್ಕೊರಲಿನಿಂದ ಆಗ್ರಹಿಸಿದರು.

ಸಭೆಯಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆಯ ಪರಶುರಾಮೇಗೌಡ ಮಾತನಾಡಿ, ಹೆಚ್.ಡಿ.ಕೋಟೆ ರಸ್ತೆ ಅಗಲೀಕರಣವನ್ನು ಮರಗಳನ್ನು ಕಡಿಯದೇ ನಡೆಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ 766ರ ಅಗಲೀಕರಣ ಯೋಜನೆಗೂ ಇದೇ ವಿಧಾನವನ್ನು ಅನುಸರಿಸಬೇಕು. ಹೆಚ್ಚು ಮರಗಳನ್ನು ಬೆಳೆಸಬೇಕಿರುವ ಕಾಲಘಟ್ಟದಲ್ಲಿ ಇರುವ ಮರಗಳನ್ನು ನೆಲಕ್ಕುರುಳಿಸುವುದು ಸರಿಯಲ್ಲ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ್ ಮಾತನಾಡಿ, ನಗರೀಕರಣದ ಹೆಸರಿನಲ್ಲಿ ಪರಿಸರ ಹಾಳು ಮಾಡುವುದು ಸರಿಯಲ್ಲ. ರಸ್ತೆ ಅಗಲೀಕರಣದ ನೆಪದಲ್ಲಿ ಉಸಿರು ನೀಡುವ ಮರಗಳನ್ನು ಕಡಿದು ಜೀವಸಂಕುಲಕ್ಕೆ ವಿಷ ಉಣಿಸುವ ಕೆಲಸವನ್ನು ಕೈಬಿಡಿ. ಸಾವಿರಾರು ಮರಗಳನ್ನು ಮಕ್ಕಳಂತೆ ಬೆಳಸಿದ ಸಾಲುಮರದ ತಿಮ್ಮಕ್ಕನವರು ನಮಗೆ ಆದರ್ಶವಾಗಬೇಕು ಎಂದು ಹೇಳಿದರು.

ಜನ ಸಂಗ್ರಾಮ ಪರಿಷತ್‌ನ ರಾಜ್ಯ ಗೌರವಾಧ್ಯಕ್ಷ ನಗರ್ಲೆ ಎಂ.ವಿಜಯಕುಮಾರ್, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಸರ್ವಿಸ್ ರಸ್ತೆ ಮಾಡದೇ ಟೋಲ್ ವಸೂಲಿ ಮಾಡುತ್ತಿರುವುದು ಖಂಡನೀಯ. ಈ ಹೆದ್ದಾರಿಗಳಲ್ಲಿ ಅಧಿಕ ಎಂ ಸ್ಯಾಂಡ್, ಜೆಲ್ಲಿ ಕಲ್ಲು ತುಂಬಿಕೊಂಡು ಸಂಚರಿಸುವ ಭಾರೀ ಲಾರಿಗಳಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಇದನ್ನು ನಿಯಂತ್ರಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ವಕೀಲ ರವಿಕುಮಾರ್, ಪರಿಸರ, ಅರಣ್ಯ ಮತ್ತು ವನ್ಯಜೀವಿಗಳ ರಕ್ಷಿಸುವುದು ಸರ್ಕಾರದ ಕರ್ತವ್ಯ. ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ಮುಂದಿನ ಪೀಳಿಗೆಗೆ ಉಳಿಯಬೇಕಿರುವ ಪರಿಸರ ಸಂಪತ್ತನ್ನು ನಾಶಮಾಡುವ ಹಕ್ಕು ಯಾರಿಗೂ ಇಲ್ಲ. ಮರಗಳನ್ನು ಕಡಿಯುವುದರಿಂದ ಉಂಟಾಗುವ ತಾಪಮಾನ ಏರಿಕೆ ಇನ್ನಿತರ ಹವಾಮಾನ ವೈಪರೀತ್ಯದಿಂದ ಜೀವಸಂಕುಲಕ್ಕೆ ಸಂಕಷ್ಟ ಎದುರಾಗಲಿದೆ ಎಂಬುದನ್ನು ಮರೆಯಬಾರದು ಎಂದರು.

ಒಟ್ಟಾರೆ ಸಭೆಯಲ್ಲಿ ಯೋಜನೆ ರದ್ದುಪಡಿಸಿ ಇಲ್ಲವೇ ಡಿಪಿಆರ್ ಬದಲಾವಣೆ ಮಾಡಿ ಎಂಬ ಒಕ್ಕೊರಲ ಆಗ್ರಹ ವ್ಯಕ್ತವಾದ ಹಿನ್ನೆಲೆಯಲ್ಲಿ ಸಭೆಯ ತೀರ್ಮಾನವನ್ನು ಮೇಲಧಿಕಾರಿಗಳಿಗೆ ತಿಳಿಸಿ, ಮರಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕ್ರಮ ವಹಿಸುವುದಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಮತಿ ಸುಮಿತ್ರ ಭರವಸೆ ನೀಡಿದರು. ಆರ್‌ಎಫ್‌ಓ ನಿತಿನ್, ಡಿಎಸ್‌ಎಸ್‌ನ ಮಲ್ಲೇಶ್, ಪರಿಸರಕ್ಕಾಗಿ ನಾವು ಸಂಘಟನೆಯ ಬಾನು ಪ್ರಶಾಂತ್, ಭಾಗ್ಯ, ಸುಶೀಲಾ, ಸುಗುಣ, ಕಾಮಾಕ್ಷಿ ಗೌಡ, ಗಣೇಶ್, ಬಂಗಾರ ನಾಯಕ, ಸಾರ್ಥಕ್ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಸ್ಥಳೀಯ ಸಂಸ್ಥೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ತಮ್ಮ ಅಕ್ರಮ ಮುಚ್ಚಿಕೊಳ್ಳಲು

ವಿಬಿ ಜಿ ರಾಮ್ ಜಿ ಬಗ್ಗೆ ಕಾಂಗ್ರೆಸ್ ಅಪಪ್ರಚಾರ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

ಮಂಡ್ಯ, ಜ.23– ರಾಜ್ಯಪಾಲರ ವಿರುದ್ಧ ಗೋ ಬ್ಯಾಕ್ ಗೋ ಬ್ಯಾಕ್ ಎನ್ನುತ್ತಿರುವ ರಾಜ್ಯ ಕಾಂಗ್ರೆಸ್ ಏನು ಸಾಧಿಸುವುದಿಲ್ಲ. ಗೋ ಬ್ಯಾಕ್ ಗರ್ವನರ್ ಅನ್ನೋದು ಕೇವಲ ರಾಜಕೀಯ ನಾಟಕ ಕಳೆದ ಎರಡೂ ಮುಕ್ಕಾಲು ವರ್ಷದಲ್ಲಿ ನಡೆಸಿರುವ ಅನ್ಯಾಯ, ಅಕ್ರಮಗಳನ್ನು ಮರೆಮಾಚಲು ವಿಬಿ ಜಿ ರಾಮ್ ಜಿ ಯೋಜನೆ ಬಗ್ಗೆ ಕಾಂಗ್ರೆಸ್ ಸರ್ಕಾರ ಅಪಪ್ರಚಾರ ಮಾಡುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಶುಕ್ರವಾರ ತಾಲೂಕಿನ ವಿ.ಸಿ.ಫಾರಂನ ಕೃಷಿ ವಿವಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕಾಂಗ್ರೆಸ್ ರಾಜ್ಯಪಾಲರ ವಿಷಯದಲ್ಲಿ ಹೇಗೆ ನಡೆದು ಕೊಂಡಿತ್ತು ಎಂಬುದರ ಬಗ್ಗೆ ಒಮ್ಮೆ ನೆನಪು ಮಾಡಿ ಕೊಂಡರೆ ಅವರ ಬಣ್ಣ ಏನೆಂದು ಗೊತ್ತಾಗುತ್ತದೆ. ವಿಶೇಷ ಅಧಿವೇಶನ ಕರೆದು ಅಲ್ಲಿ ಸಮಯ ಪೋಲು ಮಾಡುತ್ತಿದ್ದಾರೆ. ರಾಜ್ಯಪಾಲರು ಭಾಷಣ ಓದದಿರುವ ಅಥವಾ ಮೊಟಕುಗೊಳಿಸಿರುವ ಘಟನೆ ಇದೇ ಮೊದಲ ಬಾರಿ ನಡೆದಿದ್ದು ಅಲ್ಲ. ಜೆ.ಹೆಚ್.ಪಟೇಲ್ ಸಿಎಂ ಆಗಿದ್ದಾಗ ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಅಂದಿನ ಸಂದರ್ಭ ನೆನಪು ಮಾಡಿಕೊಳ್ಳಬೇಕು. ಈಗ ನೋಡಿದರೆ ಅನಗತ್ಯವಾಗಿ ವಿಧಾನಸಭೆ ಕಲಾಪದಲ್ಲಿ ಸಂಘರ್ಷ ನಡೆಯುತ್ತಿದೆ. ಈ ಸಂಘರ್ಷ ಗಳಿಂದ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಾ ಎಂದು ಪ್ರಶ್ನಿಸಿದ ಅವರು ಗೋ ಬ್ಯಾಕ್ ಗವರ್ನರ್ ಅನ್ನೋದು ಕೇವಲ ರಾಜಕೀಯ ನಾಟಕ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರವನ್ನು ನಿಂದಿಸಲು ವಿಶೇಷ ಅಧಿವೇಶನ: ಮನ್ರೇಗಾ ವಿಷಯ ಇಟ್ಟುಕೊಂಡು ಕೇಂದ್ರ ಸರ್ಕಾರವನ್ನು ನಿಂದಿಸುವುದು ಈ ಸರ್ಕಾರದ ಉದ್ದೇಶ. ಅದಕ್ಕಾಗಿಯೇ ವಿಶೇಷ ಅಧಿವೇಶನ ಕರೆದಿದ್ದಾರೆ. ಪದೇ ಪದೇ ದಲಿತರ ಹೆಸರು ಬಳಸಿ ತಮ್ಮ ಸ್ಥಾನಮಾನ ಗಟ್ಟಿಗೊಳಿಸುವ ಪ್ರಯತ್ನದಲ್ಲಿದ್ದಾರೆ. ಕಾಂಗ್ರೆಸ್ ಸರ್ಕಾರ ಪ.ಜಾತಿ, ವರ್ಗದ ಜನರಿಗೆ ಮೀಸಲಿಟ್ಟಿದ್ದ ಹಣವನ್ನು ಗ್ಯಾರಂಟಿಗಳಿಗೆ ಬಳಸಿದ್ದಾರೆ. ಇದು ದಲಿತರ ಉದ್ಧಾರವೇ ಎಂದು ಕಿಡಿಕಾರಿದರು.



ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಸರ್ಕಾರ ಪಾರದರ್ಶಕವಾಗಿ ನಡೆದುಕೊಂಡಿಲ್ಲ: ಈ ಸರ್ಕಾರದಲ್ಲಿ ಹಲವು ಅಕ್ರಮ ನಡೆದಿದೆ. ಕಾನೂನು ಬಾಹಿರ ನಿರ್ಧಾರಗಳ ಬಗ್ಗೆ ರಾಜ್ಯ ಪಾಲರು ಕ್ರಮ ಕೈಗೊಳ್ಳುವ ಅವಕಾಶವಿದ್ದರೂ, ರಾಜ್ಯಪಾಲರು ಬೇರೆ ರಾಜ್ಯಗಳ ರಾಜ್ಯಪಾಲರ ರೀತಿ ನಮ್ಮ ಸರ್ಕಾರದ ಜೊತೆ ಸಂಘರ್ಷ ಮಾಡಲಿಲ್ಲ. ಅದನ್ನು ಈ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಕೇಂದ್ರ ಸರ್ಕಾರದ ಜೊತೆ ರಾಜ್ಯ ಸರ್ಕಾರ ವಿಶ್ವಾಸ ದಲ್ಲಿಲ್ಲ. ಕೇಂದ್ರದ ಅನುದಾನದ ಬಗ್ಗೆ ರಾಜ್ಯ ಸರ್ಕಾರ ಪಾರದರ್ಶಕವಾಗಿ ನಡೆದುಕೊಂಡಿಲ್ಲ. ಇವರ ತಪ್ಪಿನಿಂದ ಕೆಲ ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ವಾಪಸ್ ಹೋಗಿವೆ. ಇದಕ್ಕೆ ಹೊಣೆ ಯಾರು ಎಂದು ಪ್ರಶ್ನಿಸಿದರು.

ರೈತರಿಗೆ ಸರಣಿ ಅನ್ಯಾಯ: ರೈತರಿಗೆ ಈ ಸರ್ಕಾರ ಸರಣಿ ಅನ್ಯಾಯ ಮಾಡಿದೆ. ಬೆಳೆ ಬೆಳೆದ ರೈತರನ್ನು ಇವರು ಕಾಪಾಡಿದ್ದಾರಾ? ಕೇಂದ್ರ ಸರ್ಕಾರ ಅನುಮತಿ ಕೊಟ್ಟ ಮಾನದಂಡದಲ್ಲಿ ಎಷ್ಟು ಬೆಳೆ ಖರೀದಿ ಮಾಡಿದ್ದೀರಿ ಎಂಬುದನ್ನು ಹೇಳಲಿ. ಮಾವಿನ ಬೆಲೆ ಕುಸಿದಾಗ ಕೇಂದ್ರದ ಮುಂದೆ ಇವರು ಅರ್ಜಿ ಹಿಡಿದುಕೊಂಡು ಹೋಗಿದ್ದರು. ನಾನು ಸಿಎಂ ಆಗಿದ್ದಾಗ ಮಾವು ಬೆಲೆ ಕುಸಿದಾಗ ರಾಜ್ಯ ಸರ್ಕಾರ ದಿಂದಲೇ ಹಣ ಕೊಟ್ಟೆ. ಇವರಿಗೆ ಕೆಲಸ ಮಾಡಲು ಆಗುತ್ತಿಲ್ಲ. ಆದರೆ ಕೇಂದ್ರವನ್ನು ನಿಂದಿಸಲು ನೆಪ ಹುಡುಕುತ್ತಾರೆ ಎಂದು ಕಟುವಾಗಿ ಟೀಕಿಸಿದರು.

ತೆರಿಗೆ ಕಟ್ಟುವವರು ಜನರು: ಸಂಘರ್ಷಗಳಿಂದ ಸಮಸ್ಯೆ ಬಗೆಹರಿಯಲ್ಲ. ಕೇಂದ್ರದ ಜೊತೆ ವಿಶ್ವಾಸದಲ್ಲಿದ್ದು ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ನಾನು ಸಲಹೆ ನೀಡುತ್ತೇನೆ. ಮಾತೆತ್ತಿದ್ದರೆ ದೊಡ್ಡ ಪ್ರಮಾಣದ ಟ್ಯಾಕ್ಸ್ ಕಟ್ಟುತ್ತಿದ್ದೇವೆ ಅಂತೀರಾ? ತೆರಿಗೆ ಕಟ್ಟುವವರು ಜನರು. ರಾಜ್ಯದ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆಗಳಾಗಬೇಕು. ಅದನ್ನು ಬಿಟ್ಟು ಕೇವಲ ಹೈಡ್ರಾಮಾ ನಡೆಸಿದರೆ ಏನೂ ಆಗುವು ದಿಲ್ಲ ಎಂದು ಅವರು ತರಾಟೆಗೆ ತೆಗೆದುಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮ ಚಂದ್ರ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ನನ್ನ ಇಲಾಖೆಯಿಂದಲೇ ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆ

ಮಂಡ್ಯ: ಜಿಲ್ಲೆಯಲ್ಲಿ ಕೈಗಾರಿಕೆಗೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕು. ಅದಕ್ಕೆ ಪೂರಕವಾಗಿ ಕೇಂದ್ರದ ಬೃಹತ್ ಕೈಗಾರಿಕೆ ಇಲಾಖೆಯಿಂದಲೇ ಕೈಗಾರಿಕೆ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಮಂಡ್ಯ ಜಿಲ್ಲೆಗೆ ಏನು ಮಾಡಬೇಕು ಎಂಬುದು ಖಂಡಿತ ನನಗೆ ಗೊತ್ತಿದೆ. ಈ ಬಗ್ಗೆ ಬೇರೆ ಯಾರ ಸರ್ಟಿಫಿಕೇಟ್ ಬೇಕಿಲ್ಲ. ಈ ಬಗ್ಗೆ ನಾನೇ ಸಿಎಂಗೆ ಪತ್ರ ಬರೆದಿದ್ದೇನೆ ಎಂದರು.

ಮಂಡ್ಯದಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಆಟೋಮ್ಯಾಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಸಂಸ್ಥೆ ಸ್ಥಾಪಿಸಲು ಜಾಗ ಕೊಡುವಂತೆ ನನ್ನ ಇಲಾಖೆಯಿಂದಲೇ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಇದರಲ್ಲಿ ಅನವಶ್ಯಕ ರಾಜಕೀಯ ಅಗತ್ಯ ಇಲ್ಲ. ಜಿಲ್ಲೆ ಅಭಿವೃದ್ಧಿ ಎಲ್ಲರ ಜವಾಬ್ದಾರಿ. ಜಿಲ್ಲಾಧಿಕಾರಿಗಳು ಜಾಗ ಇಲ್ಲ ಎಂದು ಹೇಳಿದ್ದರು. ಶಾಸಕರಿಗೆ ಜಾಗ ಕೊಡುವ ಅವಕಾಶ ಇದೆಯೇ? ಇದೇ ವಿಚಾರ ಇಟ್ಟುಕೊಂಡು ಕಾಂಗ್ರೆಸ್ಸಿಗರು ರಾಜಕೀಯ ಮಾಡ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚೆಗೆ ಅಪರೂಪದ ಆಯಸ್ಕಾಂತ (ರೇರ್ ಅರ್ಥ್ ಮ್ಯಾಗ್ನೆಟಿಕ್) ಕಾರ್ಖಾನೆ ಸ್ಥಾಪಿಸಲು ಕರ್ನಾಟಕದವರೇ ಪ್ರಸ್ತಾಪ ಸಲ್ಲಿಸಿದ್ದರು. ಅವರು ನನ್ನಲ್ಲಿಗೆ ಬಂದಿದ್ದರು. ಮಂಡ್ಯದಲ್ಲೇ ಒಂದು ಕೈಗಾರಿಕೆ ಸ್ಥಾಪಿಸುವಂತೆ ಕೇಳಿದರೆ ಕರ್ನಾಟಕದಲ್ಲಿ ಬೇಡ ಅಂತಾರೆ. ಕರ್ನಾಟಕದ ಸರ್ಕಾರ ಬೆಂಬಲ ಕೊಡಲ್ಲ ಎಂದು ದೂರುತ್ತಾರೆ. ವಿಶಾಖಪಟ್ಟಣದಲ್ಲಿ ಜಾಗ ಕೊಡಿಸಿ ಎಂದು ಕೇಳುತ್ತಾರೆ ಎಂದರು.

ರಾಜ್ಯದಲ್ಲಿ ಇಂಥ ಕೆಟ್ಟ ಪರಿಸ್ಥಿತಿ ಸೃಷ್ಟಿ ಮಾಡಿದ್ದು ಯಾರು? ಸರ್ಕಾರ ಅಲ್ಲವೇ? ಇದು ದರಿದ್ರ ಸರ್ಕಾರ. ಇವರಿಗೆ ಅಭಿವೃದ್ಧಿ ಬೇಕಿಲ್ಲ. ಈ ಸರ್ಕಾರದ ಯಾವುದೇ ಸಚಿವರು ಅಭಿವೃದ್ಧಿ ವಿಚಾರವಾಗಿ ನನ್ನೊಂದಿಗೆ ಚರ್ಚಿಸಿಲ್ಲ. ಕೈಗಾರಿಕೆ ಅಷ್ಟೇ ಅಲ್ಲ, ಬೇರೆ ಯಾವ ಅಭಿವೃದ್ಧಿ ಕೆಲಸಕ್ಕೆ ಕೂಡ ಯಾರು ನಮ್ಮನ್ನು ಭೇಟಿ ಮಾಡಿ ಚರ್ಚೆ ನಡೆಸಿಲ್ಲ ಎಂದು ಅವರು ಕಿಡಿಕಾರಿದರು.

ಮಂಡ್ಯಕ್ಕೆ ಕೈಗಾರಿಕೆ ತರಲು ಎಷ್ಟು ಶ್ರಮ ಹಾಕುತ್ತಿದ್ದೇನೆ ಅನ್ನುವುದು ನನಗೆ ಮಾತ್ರ ಗೊತ್ತು. ರಾಜಕೀಯವಾಗಿ ಟೀಕೆ ಸಾಮಾನ್ಯ. ಮಂಡ್ಯ ಜಿಲ್ಲೆಗೆ ಒಳ್ಳೆದಾಗಬೇಕು ಎಂದರೆ ಜೆಡಿಎಸ್ ಒದ್ದೋಡಿಸಬೇಕು ಎಂದಿದ್ದಾರೆ. ಮುಂದಿನ ದಿನಗಳಲ್ಲಿ ಯಾರು ಯಾರನ್ನ ಒದ್ದೋಡಿಸುತ್ತಾರೆ ಅನ್ನುವುದು ಗೊತ್ತಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವರು ತಮ್ಮ ಸ್ಥಾನಕ್ಕೆ ಶೋಭೆ ತರುವ ಮಾತುಗಳನ್ನಾಡಲಿ

ಮೈತ್ರಿಗೆ ಯಾವುದೇ ಅಡ್ಡಿ–ಆತಂಕ ಇಲ್ಲ: ನಿಖಿಲ್ ಕುಮಾರಸ್ವಾಮಿ

ಮಂಡ್ಯ, ಜ.23– ಜಿಲ್ಲೆಯಿಂದ ಜೆಡಿಎಸ್ ಪಕ್ಷವನ್ನು ಕಿತ್ತೊಗೆಯಿರಿ ಎಂಬ ಸಚಿವ ಚಲುವರಾಯಸ್ವಾಮಿ ಅವರ ಮಾತು ಅವರ ಸ್ಥಾನಕ್ಕೆ ಶೋಭೆ ತರುವಂತಹದ್ದಲ್ಲ. ಅವರು ರಾಜಕೀಯವಾಗಿ ಬೆಳೆದು ಬಂದ ದಾರಿ ಮರೆತಿದ್ದಾರೆ. ಆ ದಾರಿ ಮರೆತಿರುವವರು ಜೀವನದಲ್ಲಿ ಏಳಿಗೆ ಕಾಣುವುದಿಲ್ಲ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿರುಗೇಟು ನೀಡಿದರು.

ತಾಲೂಕಿನ ಹನಕೆರೆಯಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ನಮಗೂ ನಾಲಿಗೆ ಇದೆ. ಅವರ ತರ ಹರಿ ಬಿಡುವುದಿಲ್ಲ. ಸಮಯ ಬಂದಾಗ ಜಿಲ್ಲೆಯ ಜನ ಇದಕ್ಕೆ ಉತ್ತರ ಕೊಡುತ್ತಾರೆ. ಅವರು ಹೇಳಿಕೆ ಕೊಡುವುದ ಕ್ಕಿಂತ ಮುಂಚೆ ಯೋಚನೆ ಮಾಡಿ ಮಾತನಾಡಲಿ. ಜೆಡಿಎಸ್ ಓಡಿಸುವ ಶಕ್ತಿ ಇರುವುದು ಜಿಲ್ಲೆಯ ಜನತೆಗೆ. ಯಾರನ್ನು ಜಿಲ್ಲೆಯಲ್ಲಿ ಉಳಿಸಿಕೊಳ್ಳಬೇಕು ಯಾರನ್ನು ಕಳುಹಿಸಬೇಕು ಎಂದು ಜಿಲ್ಲೆಯ ಜನ ತೀರ್ಮಾನಿಸುತ್ತಾರೆ. ಕಳೆದ ಎರಡೂ ವರೆ ವರ್ಷದ ರಾಜ್ಯ ಸರ್ಕಾರದ ಆಡಳಿತ ವೈಖರಿಯನ್ನು ರಾಜ್ಯದ ಜನ ನೋಡಿದ್ದಾರೆ. ಗಲ್ಲಿ ಗಲ್ಲಿಯಲ್ಲಿ ಬಾಯಿಗೆ ಬಂದಂಗೆ ಬೈಯ್ಯುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈತ್ರಿ ಮಾತುಕತೆ ಆಗಿದೆ: ನಮ್ಮ ಬಿಜೆಪಿ ಮೈತ್ರಿ ಗಟ್ಟಿ ಯಾಗಿದೆ. ರಾಷ್ಟ್ರ ಮಟ್ಟದ ನಾಯಕರ ಜೊತೆ ನಮ್ಮ ಮೈತ್ರಿ ಆಗಿದೆ. ರಾಜ್ಯದಲ್ಲಿ ನಮ್ಮ ಬಿಜೆಪಿ ಮೈತ್ರಿಗೆ ಯಾವುದೇ ಅಡ್ಡಿ–ಆತಂಕ ಇಲ್ಲ. ಇಲ್ಲಿನ ಕೆಲವರು ತಮ್ಮ ರಾಜಕೀಯ ಅಸ್ತಿತ್ವ ಕಳೆದುಕೊಳ್ಳುವ ಭೀತಿಯಲ್ಲಿ ಮೈತ್ರಿ ಬೇಡ ಎನ್ನುತ್ತಿದ್ದಾರೆ. ನಾವು ನೀವು ಮೈತ್ರಿ ಬಗ್ಗೆ ಚರ್ಚೆ ಮಾಡಿದ್ರೆ ಏನು ಸಿಗುವುದಿಲ್ಲ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಇದಕ್ಕೂ ಮುನ್ನ ಮಂಡ್ಯ ಜಿಲ್ಲೆಯ ಹಾಕೆರೆ, ಬೂದನೂರು, ಕೊಮ್ಮೇರಹಳ್ಳಿಯಲ್ಲಿ ನಿಖಿಲ್ ಕುಮಾರಸ್ವಾಮಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ಇದೇ ವೇಳೆ ಕಾರ್ಯಕರ್ತ ರೊಂದಿಗೆ ಕೇಕ್ ಕತ್ತರಿಸಿ ನಿಖಿಲ್ ಹುಟ್ಟುಹಬ್ಬ ಆಚರಿಸಿ ಕೊಂಡರು. ಬಳಿಕ ಹುಲಿವಾನದಲ್ಲಿ ನೂತನವಾಗಿ ನಿರ್ಮಿಸಿ ರುವ ಶ್ರೀಕಾಲ ಭೈರವೇಶ್ವರಸ್ವಾಮಿ ಮಹಾದ್ವಾರ, ಶ್ರೀ ಹಿರಿದೇವಮ್ಮ ಶ್ರೀ ಅಚ್ಚಾಳಮ್ಮ ಮತ್ತು ಶ್ರೀ ಅಟ್ಟಿ ಲಕ್ಕಮ್ಮನವರ ದೇವಸ್ಥಾನ ಲೋಕಾರ್ಪಣೆ ಸಮಾರಂಭದಲ್ಲಿ ಗ್ರಾಮಸ್ಥರು ನಿಖಿಲ್ ಅವರನ್ನು ಎತ್ತಿನಗಾಡಿ ಯಲ್ಲಿ ಮೆರವಣಿಗೆ ಮಾಡುವ ಮೂಲಕ ಅದ್ದೂರಿ ಸ್ವಾಗತ ಕೋರಿದರು.

ಸೇರ್ಪಡೆ ಕೈ ಬಿಡುವಂತೆ ಆಗ್ರಹ: ಮದ್ದೂರು ನಗರಸಭೆ ವ್ಯಾಪ್ತಿಗೆ ಗ್ರಾಪಂಗಳ ಸೇರ್ಪಡೆ ಕೈ ಬಿಡುವಂತೆ ಗ್ರಾಮಸ್ಥರು ಹಾಗೂ ರೈತರು ನಡೆಸು ತ್ತಿದ್ದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಪಾಲ್ಗೊಂಡು ಗ್ರಾಪಂಗಳ ಸೇರ್ಪಡೆ ಕೈ ಬಿಡುವಂತೆ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದರು.

ನಗರಸಭೆ ಸೇರ್ಪಡೆ ಕೈ ಬಿಡಬೇಕು. ಈ ಹೋರಾಟಕ್ಕೆ ನಮ್ಮ ಬೆಂಬಲವಿದೆ. ನಾವು ಗ್ರಾಮಸ್ಥರ ಜೊತೆ ಇರುತ್ತೇವೆ. ಜಯ ಸಿಕ್ಕುವ ವರೆಗೆ ಹೋರಾಟ ಮಾಡುತ್ತೇವೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ರೈತರನ್ನು ಒಕ್ಕಲೆಬ್ಬಿಸುವು ದನ್ನು ಬಿಟ್ಟು ರೈತರ ಅಭಿವೃದ್ಧಿ ಮಾಡಬೇಕು. ಹಳ್ಳಿಯ ಸೊಗಡನ್ನು ಉಳಿಸಬೇಕು. ವಾಸ್ತವಾಂಶಗಳನ್ನು ಅರಿತು ಕೆಲಸ ಮಾಡಬೇಕು ಎಂದು ತಿಳಿಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಜಿಲ್ಲಾಧ್ಯಕ್ಷ ಡಿ.ರಮೇಶ್, ರೈತ ಹೋರಾಟಗಾರರಾದ ಸುನಂದಾ ಜಯರಾಂ, ರಾಜಣ್ಣ, ಮನ್‌ಮುಲ್ ಮಾಜಿ ಅಧ್ಯಕ್ಷ ರಾಮಚಂದ್ರು, ಪುರಸಭೆ ಮಾಜಿ ಅಧ್ಯಕ್ಷ ಪ್ರವೀಣ್ ಉಪಸ್ಥಿತರಿದ್ದರು.

ಈ ಬಾರಿ ಮತ್ತಷ್ಟು ಆಕರ್ಷಕ ಫಲಪುಷ್ಪ ಪ್ರದರ್ಶನ

ಮಂಡ್ಯ, ಜ.23– ಕಳೆದ ಬಾರಿಗಿಂತ ಈ ಬಾರಿ ವಿಶೇಷವಾಗಿ 2 ಲಕ್ಷಕ್ಕೂ ಅಧಿಕ ಹೂಗಳನ್ನು ಬಳಸಿ ವಿಶೇಷ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ ಹಾಗೂ ಎಲ್ಲಾ ಇಲಾಖೆಗಳಿಂದ ವಿಭಿನ್ನ ರೀತಿ ಇಲಾಖೆಯ ಸೌಲಭ್ಯಗಳ ಕುರಿತು ವಿಶಿಷ್ಟ ವಾಗಿ ಫಲಪುಷ್ಪ ಪ್ರದರ್ಶನ ಮಾಡ ಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ ಮತ್ತು ಜಿಪಂ, ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ತೋಟಗಾರಿಕೆ ಆವರಣದಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಇಲಾಖೆ ಯಿಂದ ರೈತ ಮಹಿಳೆಯರು ಉದ್ಯಮಿಯಾಗಿ ಪರಿವರ್ತನೆಯಾಗಲು ಹಾಗೂ ಕೃಷಿ ಇಲಾಖೆ ಯಿಂದ ನೀಡುವ ವಿವಿಧ ಅವಕಾಶಗಳ ಕುರಿತು ವಿಶಿಷ್ಟವಾಗಿ ಫಲಪುಷ್ಪ ವಸ್ತು ಪ್ರದ ರ್ಶನ ಆಯೋಜಿಸಲಾಗಿದೆ. ಕೃಷಿ ಇಲಾಖೆ ಯಿಂದ ರೈತ ಮಹಿಳೆಯರಿಗೆ ಉತ್ತೇಜನ ನೀಡಲು ಯಾಂತ್ರೀಕೃತ ಭತ್ತ ನಾಟಿ ಮಾಡುವ ಯಂತ್ರ ಮತ್ತು ರೈತ ಮಹಿಳೆಯನ್ನು ಹೂವಿನ ಕಲಾಕೃತಿಯಲ್ಲಿ ಪ್ರದರ್ಶಿಸಲಾಗಿದೆ ಎಂದರು.



ಫಲಪುಷ್ಪ ಪ್ರದರ್ಶನವನ್ನು ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ತಾಯಿ ಎದೆ ಹಾಲಿನ ಮಹತ್ವ ಕುರಿತು ಸಂದೇಶ ಸಾರಲು ವಿಶೇಷವಾಗಿ ತಾಯಿ ಮಗುವಿಗೆ ಎದೆಹಾಲು ಉಣಿಸುತ್ತಿರುವ ಕಲಾಕೃತಿಯನ್ನು ಪುಷ್ಪ ಪ್ರದರ್ಶನ ಮಾಡ ಲಾಗಿದೆ. ಫಲಪುಷ್ಪ ಪ್ರದರ್ಶನದ ಟಿಕೆಟ್ ದರವನ್ನು ವಯಸ್ಕರಿಗೆ 30 ರೂ., ಮಕ್ಕಳಿಗೆ 20 ರೂ. ಮತ್ತು ಶಾಲಾ ವಿದ್ಯಾರ್ಥಿಗಳಿಗೆ (ಯೂನಿಫಾರ್ಮ್ ನಲ್ಲಿ ಬರುವ ಮಕ್ಕಳಿಗೆ) ಉಚಿತ ಎಂದು ತಿಳಿಸಿದರು.

ರೇಷ್ಮೆ ಇಲಾಖೆಯಿಂದ ರೇಷ್ಮೆ ಹುಳುವಿನ ಕಲಾಕೃತಿ ಪ್ರದರ್ಶನ, ಖಾದಿ ಮತ್ತು ಗ್ರಾಮೋ ದ್ಯೋಗ ಇಲಾಖೆಯಿಂದ ಮಂಡ್ಯ ಜಿಲ್ಲೆಯ ವಿವಿಧ ತಾಲೂಕುಗಳ ಪ್ರವಾಸ ತಾಣಗಳ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ. ಜಿಲ್ಲೆಯ ಯುವಜನತೆ ಫಲಪುಷ್ಪ ಪ್ರದರ್ಶನ ವನ್ನು ಕಣ್ತುಂಬಿಕೊಂಡು ಅದರ ಉಪಯೋಗ ಮತ್ತು ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಇದೇ ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಅವರು ಫಲಪುಷ್ಪ ವಸ್ತು ಪ್ರದರ್ಶನ ದಲ್ಲಿ ವಿವಿಧ ಇಲಾಖೆಗಳಿಂದ ಆಯೋಜಿ ಸಿದ್ದ ಕಲಾಕೃತಿಯನ್ನು ಉದ್ಘಾಟಿಸಿ ವೀಕ್ಷಿಸಿದರು. ಎಂಎಲ್‌ಸಿ ದಿನೇಶ್ ಗೂಳಿಗೌಡ, ಡಿಸಿ ಡಾ.ಕುಮಾರ, ಜಿಪಂ ಸಿಇಓ ಕೆಆರ್. ನಂದಿನಿ, ಎಸ್ಪಿ ಶೋಭಾರಾಣಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ರೂಪಾಶ್ರೀ ಇನ್ನಿತರರಿದ್ದರು.

ಒಂದನೇ ಪುಟದಿಂದ

ರಾಜ್ಯಪಾಲರಿಂದ ಸದನಕ್ಕೆ ಅವಮಾನ

ಒಟ್ಟು 122 ಪ್ಯಾರಾಗಳ ಭಾಷಣದಲ್ಲಿ ಯಾರನ್ನೂ ವೈಯಕ್ತಿಕವಾಗಿ ನಿಂದಿಸಿರ ಲಿಲ್ಲ. ರಾಜ್ಯಪಾಲರು ಅಧಿವೇಶನದಿಂದ ಓಡಿ ಹೋಗಿದ್ದಾರೆ ಎಂಬ ಮಾತಿಗೆ ನಾನು ಈಗಲೂ ಬದ್ಧನಾಗಿದ್ದೇನೆ.

ಸಚಿವ ಪಾಟೀಲ್, ರಾಜ್ಯಪಾಲರನ್ನು ಕರೆ ಯಲು ಹೋಗಿದ್ದರು ಎಂಬುದಾಗಿ ವಿರೋಧ ಪಕ್ಷದವರು ಆಪಾದಿಸಿದ್ದಾರೆ. ರಾಜ್ಯಪಾಲರು ನಿರ್ಗಮಿಸುವಾಗ ಅವರನ್ನು ಹಿಂಬಾಲಿಸು ವಂತೆ ಮುಖ್ಯಮಂತ್ರಿ ಸನ್ನೆ ಮಾಡಿದರು. ಅದರಂತೆ ನಾನು ಹೆಜ್ಜೆ ಹಾಕಿದ್ದೆ, ಬಹುಶಃ ಅದನ್ನು ವಿರೋಧ ಪಕ್ಷದವರು ತಪ್ಪಾಗಿ ಭಾವಿಸಿದಂತಿದೆ ಎಂದರು.

ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನೂ ಸೇರಿದಂತೆ ಸಂಪುಟ ಸದಸ್ಯರು ರಾಜ್ಯಪಾಲರಿಗೆ ಹಸ್ತಲಾಘವ ನೀಡಿ ಕಾರಿನಲ್ಲಿ ಕೂರಿಸಿ ಗೌರವಯುತ ವಾಗಿ ಬೀಳ್ಕೊಟ್ಟಿದ್ದೇವೆ. ಎಲ್ಲಿಯೂ ಅವರಿಗೆ ಅಪಮಾನ ಮಾಡಿಲ್ಲ ಎಂದು ಸಮರ್ಥಿಸಿ ಕೊಂಡರು. ವಿಷಯ ಪ್ರಸ್ತಾಪಿಸಿರುವ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ರಾಜ್ಯಪಾಲರಿಗೆ ಯಾರಿಂದ ಅವಮಾನ ವಾಗಿದೆ ಎಂಬ ಹೆಸರನ್ನು ಉಲ್ಲೇಖಿಸಿಲ್ಲ. ವಿಧಾನಪರಿಷತ್‌ನ ಸದಸ್ಯ ಬಿ.ಕೆ.ಹರಿ ಪ್ರಸಾದ್ ಹೆಸರು ಹೇಳಿದ್ದಾರೆ. ಅವರು ವಿಧಾನಸಭೆ ಸದಸ್ಯರಲ್ಲದ ಕಾರಣ ಚರ್ಚೆ ಮಾಡಲು ಅಥವಾ ಕ್ರಮ ತೆಗೆದುಕೊಳ್ಳಲು ಅವಕಾಶ ಇಲ್ಲ.

ರಾಜ್ಯಪಾಲರು ತಮ್ಮ ಭಾಷಣವನ್ನು ಚುಟುಕಾಗಿ ಮುಗಿಸಿ ಜೈಹಿಂದ್ ಹೇಳಿ ಹೊರಟೇಬಿಟ್ಟರು. ರಾಷ್ಟ್ರಗೀತೆ ಹಾಕುವವ ರೆಗೂ ಕಾಯಲಿಲ್ಲ. ರಾಜ್ಯಪಾಲರನ್ನು ಸ್ವಾಗತಿ ಸುವ ಮತ್ತು ಬೀಳ್ಕೊಡುವ ಬಗ್ಗೆ ಸಭಾ ಧ್ಯಕ್ಷರ ಕಚೇರಿಯಿಂದ ನೀಡಲಾಗಿರುವ ಲಘು ಟಿಪ್ಪಣಿಯಲ್ಲಿ ಸ್ಪಷ್ಟ ಉಲ್ಲೇಖವಿತ್ತು. ಅದರಂತೆ ನಾವು ನಡೆದುಕೊಂಡಿದ್ದೇವೆ.

ರಾಜ್ಯಪಾಲರು ಯಾರ ಒತ್ತಡಕ್ಕೆ ಇಲ್ಲವೇ ಗೊಂದಲಕ್ಕೆ ಒಳಗಾಗಿದ್ದರೋ ಗೊತ್ತಿಲ್ಲ. ತಕ್ಷಣ ಹೊರಟುಹೋಗಿದ್ದಾರೆ. ಅವರ ನಡೆ ಸಂವಿಧಾನ ಉಲ್ಲಂಘನೆಯಾಗಿದೆ. ಅದಕ್ಕಾಗಿ ರಾಜ್ಯಪಾಲರು ಕನ್ನಡ ನಾಡಿನ ಮತ್ತು ಸದನದ ಕ್ಷಮೆ ಕೇಳಬೇಕು. ರಾಜಕಾರಣವನ್ನು ಮುಂದೆ ತಂದು ರಾಜ್ಯಪಾಲರನ್ನು ಪಕ್ಷದ ವ್ಯಕ್ತಿ ಎಂಬಂತೆ ಬಿಜೆಪಿ ಸದಸ್ಯರು ಸಮರ್ಥಿಸಿಕೊಳ್ಳುತ್ತಿ ರುವುದು ಸರಿಯಲ್ಲ ಎಂದರು.

ಹರಿಪ್ರಸಾದ್ ಅಮಾನತು ಮಾಡಿ

ನಾಯಕರು ಪತ್ರ ಕೊಟ್ಟಾಗ ಅದನ್ನು ಪರಿಶೀಲಿಸಿ ಚರ್ಚೆಗೆ ಅವಕಾಶ ಕೊಡಬೇಕು. ಅದಕ್ಕೂ ಮೊದಲೇ ಕ್ರಿಯಾ ಲೋಪ ಎತ್ತಲು ಅವಕಾಶ ನೀಡಿದರೆ ಸದನಕ್ಕೆ ತಪ್ಪು ಸಂದೇಶ ರವಾನೆ ಯಾಗುತ್ತದೆ ಎಂದಾಗ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ದನಿಗೂಡಿಸಿದರು.

ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಮಾತನಾಡಿ, ಸದನದಲ್ಲಿ ಯಾರು ಹೇಗೆ ವರ್ತನೆ ಮಾಡಿದ್ದಾರೆ ಎಂಬುದು ಗೊತ್ತಿದೆ. ಸಂವಿಧಾನಕ್ಕೆ ವಿರುದ್ಧವಾಗಿ ನಡೆದು ಕೊಂಡವರು ಯಾರು. ರಾಷ್ಟ್ರಗೀತೆಗೆ ಅಪಮಾನ ಮಾಡಿದವರು ಯಾರು ಎಂದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಭಾರೀ ಗದ್ದಲ, ಮಾತಿನ ಚಕಮಕಿ, ಆರೋಪ, ಪ್ರತ್ಯಾರೋಪಗಳು ನಡೆದವು.

ಆಗ ಪ್ರತಿಪಕ್ಷದ ಸದಸ್ಯರು, ಆಗಲೇ ಬೇಕು.. ಆಗಲೇಬೇಕು.. ಗೂಂಡಾ ಶಾಸಕ ಹರಿಪ್ರಸಾದ್ ಅಮಾನತು ಆಗಲೇಬೇಕು, ರೌಡಿಯಂತೆ ವರ್ತಿಸಿರುವ ಸದಸ್ಯನನ್ನು ಸದನದಿಂದ ಹೊರಗೆ ಹಾಕಿ, ಈ ತಕ್ಷಣವೇ ಅವರನ್ನು ಮಾರ್ಷಲ್‌ಗಳ ಮೂಲಕ ಹೊರಗೆ ಹಾಕಿ ಎಂದು ಘೋಷಣೆ ಕೂಗಿದರು.

ರಾಜ್ಯಪಾಲರನ್ನು ಕರೆಸಿ ದುರುದ್ದೇಶ ಪೂರ್ವಕವಾಗಿ ಅಪಮಾನ ಮಾಡಲಾಗಿದೆ. ತಾವೊಬ್ಬ ಶಾಸಕರು ಎಂಬುದನ್ನು ಮರೆತು ಗೂಂಡಾ ವರ್ತನೆ ತೋರಿರುವ ಹರಿಪ್ರಸಾದ್ ಅವರಿಗೆ ಸದನದಲ್ಲಿ ಕೂರಲು ಅರ್ಹತೆ ಇಲ್ಲ ಎಂದು ಪ್ರತಿಪಕ್ಷದ ಸದಸ್ಯರು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಸದಸ್ಯರು ಒಟ್ಟಿಗೇ ಮಾತನಾಡಿ, ಮೊದಲು ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳ ಬೇಕು. ಕೇಂದ್ರ ಸರ್ಕಾರದ ಕೈಗೊಂಬೆ ಯಂತೆ ವರ್ತಿಸಿದ್ದಾರೆ. ಇದಕ್ಕೆ ಬಿಜೆಪಿಯೇ ಕಾರಣ ಎಂದು ದೂರಿದರು.

ಈ ವೇಳೆ ಗದ್ದಲವಾದಾಗ ಸಭಾಪತಿ ಗಳು ಪೀಠದಿಂದ ಎದ್ದು ನಿಂತು, ನಿಮಗೆ ಮಾನ–ಮರ್ಯಾದೆ ಇಲ್ಲವೇ, ಸಹನೆಗೂ ಒಂದು ಇತಿಮಿತಿ ಇದೆ. ಇದೇ ರೀತಿ ನಡೆದುಕೊಂಡರೆ ಸದನದಿಂದ ಹೊರ ಹಾಕುತ್ತೇನೆ ಎಂದು ಎಚ್ಚರಿಸಿದರು.

ವಿಷಯ ಪ್ರಸ್ತಾಪಿಸಿದ ಛಲವಾದಿ ನಾರಾಯಣಸ್ವಾಮಿ, ರಾಜ್ಯಪಾಲರು ಶಿಷ್ಟಾಚಾರದಂತೆ ಸದನಕ್ಕೆ ಬಂದು ಭಾಷಣ ಮಾಡಿದ್ದಾರೆ, ಅವರಿಂದ ಯಾವುದೇ ಕರ್ತವ್ಯಲೋಪ ಆಗಿಲ್ಲ. ಸದನದಿಂದ ನಿರ್ಗಮಿಸುವ ವೇಳೆ ಪರಿಷತ್ ಸದಸ್ಯ ಹರಿಪ್ರಸಾದ್ ಅವರನ್ನು ಅಡ್ಡಗಟ್ಟಿ ಗೂಂಡಾಗಿರಿ ಪ್ರವೃತ್ತಿ ತೋರಿದ್ದಾರೆ. ಅವರನ್ನು ತಕ್ಷಣ ಸದನದಿಂದ ಅಮಾ ನತುಪಡಿಸಿ ಎಂದು ಒತ್ತಾಯಿಸಿದರು.

ಹಿಂದೆ ಹಂಸರಾಜ್ ಭಾರದ್ವಾಜ್ ಸರ್ಕಾರ ಕೊಟ್ಟಿದ್ದ ಭಾಷಣವನ್ನೇ ಓದಿರಲಿಲ್ಲ. ಆಗ ಕಾಂಗ್ರೆಸ್ ಸದಸ್ಯರು ಬಾಯಿ ಮುಚ್ಚಿ ಕೊಂಡು ಏಕೆ ಕುಳಿತಿದ್ದರು ಎಂದರು. ಕ್ರಿಯಾಲೋಪ ಪ್ರಸ್ತಾಪಿಸಿದ ಹರಿಪ್ರಸಾದ್, ರಾಜ್ಯಪಾಲರು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಅವರಿಂದ ರಾಷ್ಟ್ರಗೀತೆಗೆ ಅವ ಮಾನವಾ ಗಿದೆ ಎನ್ನುತ್ತಿದ್ದಂತೆ ಸದನದಲ್ಲಿ ಭಾರೀ ಗದ್ದಲ ಉಂಟಾಯಿತು. ಸದನ ನಿಯಂ ತ್ರಣಕ್ಕೆ ಬಾರದಿರುವುದನ್ನು ಗಮನಿಸಿದ ಸಭಾಪತಿ ಕಲಾಪ ಮುಂದೂಡಿದರು.

ಬಟ್ಟೆ ನಾವ್ ಹರಿದಿಲ್ಲ... ಅವರೇ ಹರಿ....ಪ್ರಸಾದ ಅಲ್ವೇ !

ಮಾಡಲಾಗಿದೆ. ಅವರು ಏಕಾಂಗಿಯಾಗಿ ಹೊರಹೋದರು. ಅವರ ಜೊತೆ ಯಾರು ಇರಲಿಲ್ಲ. ನಂತರದ ಕಲಾಪದಲ್ಲಿ ಕಾನೂನು ಸಚಿವರೇ ರಾಜ್ಯಪಾಲರು ಓಡಿಹೋಗಿದ್ದಾರೆಂದು ಹೇಳಿದ್ದಾರೆ. ಇದು ಸರಿಯಲ್ಲ. ಸರ್ಕಾರಗಳು ಇರಬಹುದು, ಹೋಗಬಹುದು, ಆದರೆ ಸಂಪ್ರದಾಯಗಳು ಮತ್ತು ನಿಯಮಗಳ ಉಲ್ಲಂಘನೆ ಆಗಬಾರದು. ಈ ಹಿಂದೆ ಬಿಜೆಪಿಯ 18 ಶಾಸಕರನ್ನು ಅಮಾನತು ಗೊಳಿಸಿದಂತೆ ನಿನ್ನೆ ರಾಜ್ಯಪಾಲರಿಗೆ ಅಗೌರವ ತೋರಿದ ಆಡಳಿತ ಪಕ್ಷದ ಸದಸ್ಯರ ವಿರುದ್ಧವೂ ಕ್ರಮ ಕೈಗೊಳ್ಳಬೇಕು.

ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಬಾರದು ಎಂಬುದು ನಿಯಮಗಳಲ್ಲಿ ಸ್ಪಷ್ಟವಾಗಿದೆ. ನಾವು ಕೆಲವರ ಹೆಸರನ್ನು ಉಲ್ಲೇಖಿಸಿದ್ದೇವೆ. ವಿಡಿಯೋ ಪರಿಶೀಲಿಸಿ ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು. ಡಾ.ಅಶ್ವತ್ಥನಾರಾಯಣ ಮಾತನಾಡಿ, ಸಭಾಧ್ಯಕ್ಷರು ಸದನದ ಗೌರವವನ್ನು ಎತ್ತಿಹಿಡಿಯಬೇಕು. ಕಾರ್ಯ ಕಲಾಪಗಳ ನಿಯಮಾವಳಿ 27ರ ಅನುಸಾರ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದವರ ವಿರುದ್ಧ ಮುಂದಿನ ಸದನ ಸಮಾವೇಶದಲ್ಲಿ ಕ್ರಮ ಕೈಗೊಳ್ಳಬೇಕೆಂಬ ಸ್ಪಷ್ಟ ಉಲ್ಲೇಖವಿದೆ. ರಾಜ್ಯಪಾಲರಿಗೆ ಅಡಚಣೆ ಮಾಡಿದವರ ವಿರುದ್ಧ ಕ್ರಮ ತೆಗೆದುಕೊ ಳ್ಳುವ ಜೊತೆಗೆ ಗಲಾಟೆ ಪ್ರಕರಣ ಖಂಡಿಸುವ ನಿರ್ಣಯ ಕೈಗೊಳ್ಳಬೇಕು, ರಾಜ್ಯಪಾಲರ ಕ್ಷಮೆ ಕೇಳಬೇಕು ಎಂದರು.

ಸುನೀಲ್‌ಕುಮಾರ್ ಮಾತನಾಡಿ, ರಾಜ್ಯಪಾಲರಿಗೆ ಸಚಿವರು, ಶಾಸಕರು ಅಗೌರವ ತೋರಿಸಿದ ಬಗ್ಗೆ ವಿರೋಧ ಪಕ್ಷದ ನಾಯಕರು ತಕ್ಷಣವೇ ಸಭಾಧ್ಯಕ್ಷರ ಗಮನಕ್ಕೆ ತಂದಿದ್ದಾರೆ, ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಸಭಾಧ್ಯಕ್ಷರು ಮೊದಲ ಅವಧಿಯ ಕಲಾಪದಲ್ಲೇ 9 ಸದಸ್ಯರನ್ನು ಅಮಾನತುಗೊಳಿಸಿದರು. ಮತ್ತೊಂದು ಪ್ರಕರಣದಲ್ಲಿ ವಿರೋಧ ಪಕ್ಷದ 18 ಶಾಸಕರನ್ನು 6 ತಿಂಗಳ ಕಾಲ ಅಮಾನತುಗೊಳಿಸಿದ್ದರು. ಅನುಚಿತವಾಗಿ ವರ್ತನೆ ಮಾಡಿದ ಶಾಸಕರನ್ನು ಉಳಿಸಿಕೊಂಡು ಸದನ ನಡೆಸುವುದು ಸೂಕ್ತವಲ್ಲ.

ರಾಜ್ಯಪಾಲರು ಮತ್ತು ವಿಧಾನಸಭಾಧ್ಯಕ್ಷರು ತಾನು ಹೇಳಿದಂತೆ ಕೇಳಬೇಕು ಎಂಬ ಧೋರಣೆಯನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆ. ಇದು ಸರಿಯಲ್ಲ, ಸದನದಲ್ಲೇ ರಾಜ್ಯಪಾಲ ರಿಗೆ ಗೌರವ ಇಲ್ಲ ಎಂದಾದರೆ ಹೇಗೆ ಎಂದು ಪ್ರಶ್ನಿಸಿದರು.

ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಅಪಮಾನ: ಆಡಳಿತ ಪಕ್ಷದ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ರಾಜ್ಯಪಾಲರನ್ನು ಗೌರವ ಪೂರ್ವಕವಾಗಿ ಸ್ವಾಗತಿಸಲಾಗಿದೆ. ಭಾಷಣ ಮುಗಿಸಿ ಹೋಗುವಾಗ ರಾಷ್ಟ್ರಗೀತೆ ಗಾಯನ ನಿರೀಕ್ಷಿಸದೇ ಹೊರಗೆ ಹೋಗಬಾರದಿತ್ತು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಅಪಮಾನ ಮಾಡುವುದನ್ನು ಸಹಿಸಲಾಗುವು ದಿಲ್ಲ. ರಾಜ್ಯಪಾಲರು ಹೊರಗೆ ಹೋಗುವಾಗ ಕೆಲವರು ಅಡ್ಡ ಹಾಕಿರಬಹುದು, ಅದೇನೂ ದೊಡ್ಡ ಅಪರಾಧವಲ್ಲ ಎಂದರು.

ವೈಯಕ್ತಿಕ ಹಗೆತನಕ್ಕೆ ಅವಕಾಶವಿಲ್ಲ: ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ತಮ್ಮ ಮುಂದೆ ಎರಡು ವಿಚಾರಗಳಿವೆ. ಆಡಳಿತ ಪಕ್ಷದ ಕಡೆಯಿಂದ ರಾಜ್ಯಪಾಲರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆಂಬ ಆಕ್ಷೇಪ ಸಲ್ಲಿಕೆಯಾಗಿದೆ. ವಿರೋಧ ಪಕ್ಷದವರು ರಾಜ್ಯಪಾಲರಿಗೆ ಅಗೌರವ ತೋರಲಾ ಗಿದೆ ಎಂದು ಲಿಖಿತ ದೂರು ನೀಡಿದ್ದಾರೆ. ನಾವು ಸದನದಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಚರ್ಚೆ ನಡೆಸಬೇಕೇ ಹೊರತು ವೈಯಕ್ತಿಕ ಹಗೆತನಕ್ಕಾಗಿ ಜಗಳವಾಡಬಾರದು ಎಂದರು.

ಹೈಕೋರ್ಟ್ ಗ್ರೀನ್ ಸಿಗ್ನಲ್

ಮೋಟಾರ್ ವಾಹನ ಕಾಯ್ದೆಯ ಸೆಕ್ಷನ್ 74(2)ರ ಪ್ರಕಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅಗತ್ಯ ಷರತ್ತುಗಳನ್ನು ವಿಧಿಸ ಬಹುದು ಎಂದು ಪೀಠ ಆದೇಶ ನೀಡಿದೆ. ಇದರಿಂದ ಬೈಕ್ ಟ್ಯಾಕ್ಸಿ ಚಾಲಕರು ನಿಟ್ಟು ಸಿರು ಬಿಟ್ಟಿದ್ದಾರೆ. ವಿಚಾರಣೆ ವೇಳೆ ವಾದ ಮಂಡಿಸಿದ ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿ ಯೇಷನ್, ರಾಜ್ಯ ಸರ್ಕಾರದ ನಡೆಯು ಬೈಕ್ ಟ್ಯಾಕ್ಸಿ ಚಾಲಕರ ಸುಮಾರು 6 ಲಕ್ಷ ಕುಟುಂಬ ಗಳ ಬದುಕು ಸಂಕಷ್ಟಕ್ಕೆ ದೂಡುತ್ತದೆ.ಈ ಕುಟುಂಬಗಳು ಬದುಕು ಸಾಗಿಸಲು ತನ್ನ ದುಡಿಮೆ ಹಣದಿಂದ ಬೈಕ್ ಖರೀದಿಸಿ, ಸಾಲವನ್ನೂ ಪಡೆದಿದ್ದಾರೆ.

ಸರ್ಕಾರ ಬೈಕ್ ಟ್ಯಾಕ್ಸಿಗಳನ್ನು ನಿರ್ಬಂಧಿ ಸುವ ಬದಲು, ಯಾವುದೇ ಕಾನೂನು–ಕ್ರಮದ ಸಮಸ್ಯೆಗಳು ಉಂಟಾದರೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೈಕ್ ಟ್ಯಾಕ್ಸಿಗಳಿಗೆ ನೋಂದಣಿ ನೀಡದಿರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ ಯಾಗಿದೆ ಎಂದು ವಾದಿಸಿದರು.

ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಹಾವಳಿ ಹೆಚ್ಚಾಗಿದೆ ಎಂದು ಕೆಲ ಸಂಸ್ಥೆಗಳು ದೂರು ನೀಡಿದ್ದವು. ಇತ್ತ ಆಟೋ, ಕ್ಯಾಬ್ ಸೇವೆಗಳು ದುಬಾರಿಯಾಗುತ್ತಿದ್ದಂತೆ ಬೈಕ್ ಟ್ಯಾಕ್ಸಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳ ಪ್ರಯಾಣಿಕರಿಗೆ ವರವಾಗಿತ್ತು. ಆದರೆ, ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ನಿಷೇಧಿಸಿ ಆದೇಶ ನೀಡಿತ್ತು.

ಇತ್ತ ಈ ಆದೇಶವನ್ನು ಪ್ರಶ್ನಿಸಿ ಬೈಕ್ ಟ್ಯಾಕ್ಸಿ ಅಗ್ರೇಟರ್ ಕಂಪನಿಗಳು ಹೈ ಕೋರ್ಟ್ ಮೆಟ್ಟಿಲೇರಿದ್ದವು. ವಿಚಾರಣೆ ನಡೆಸಿದ ಏಕಸದಸ್ಯ ಪೀಠ ರಾಜ್ಯ ಸರ್ಕಾರದ ಆದೇಶ ಎತ್ತಿ ಹಿಡಿದಿತ್ತು. ಹೀಗಾಗಿ ಅಗ್ರಿಗೇಟರ್ ಕಂಪನಿಗಳು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಕುರಿತು ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಇಂದು ಮಹತ್ವದ ಆದೇಶ ನೀಡಿದೆ.

ಕೋರ್ಟ್ ಆದೇಶದ ಪ್ರತಿ ಸಿಕ್ಕಿಲ್ಲ: ಈ ನಡುವೆ ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಇನ್ನೂ ಕೋರ್ಟ್ ಆದೇಶದ ಪ್ರತಿ ಸಿಕ್ಕಿಲ್ಲ. ಆದೇಶದ ಪ್ರತಿ ಬಂದ ನಂತರ ಅದನ್ನು ಕೂಲಂಕುಷ ವಾಗಿ ಪರಿಶೀಲಿಸುತ್ತೇನೆ. ಈ ಬಗ್ಗೆ ಇಲಾಖೆಯ ಕಮಿಷನರ್ ಅವರೊಂದಿಗೆ ಚರ್ಚಿಸಿ, ಮುಂದಿನ ಕಾನೂನು ಹೋರಾಟ ಅಥವಾ ತೀರ್ಮಾನದ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಸ್ಪರ್ಧೆ ಮಾಡ್ತೇನೆ!

ಸರ್ಕಾರ ವಾಗಿದೆ. ರೈತರು ಹೆಚ್ಚು ಬೆಳೆ ಬೆಳೆದಾಗ ಸರ್ಕಾರ ಖರೀದಿ ಕೇಂದ್ರ ತೆರೆಯಲ್ಲ. ಇಂತಹ ಸಂದರ್ಭ ಬೆಲೆ ಕುಸಿತ ಆಗುತ್ತದೆ. ಖಾಸಗಿಯವರು ಎಲ್ಲಾ ಬೆಳೆಯನ್ನು ಅಗ್ಗದ ಬೆಲೆಗೆ ಖರೀದಿಸಿದ ಮೇಲೆ ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆಯುತ್ತದೆ. ಆಗ ದಲ್ಲಾಳಿಗಳು ಹೆಚ್ಚಿನ ಬೆಲೆಗೆ ಆ ಬೆಳೆ ಮಾರುತ್ತಾರೆ. ಯಾವಾಗಲೂ ಹೀಗೆಯೇ ಆಗುತ್ತದೆ. ರೈತರ ಬಳಿ ಮಾಲು ಇದ್ದಾಗ ಸರ್ಕಾರ ಖರೀದಿಸಿಲ್ಲ. ರೈತರು ಸಂಕಷ್ಟಕ್ಕೆ ಸಿಲುಕಿ, ಬೆಳೆ ಮಾರಾಟ ಮಾಡಿದ ಮೇಲೆ ಖರೀದಿ ಕೇಂದ್ರ ತೆರೆಯುತ್ತಾರೆ. ಇದು ಬ್ರೋಕರ್ ಸರ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ ಸೇರಿ ದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ರಾಜೀನಾಮೆಗೆ ವಿಪಕ್ಷ ಸದಸ್ಯರ ಆಗ್ರಹ

ಅಬಕಾರಿ ಸಚಿವರು ಮತ್ತು ಅವರ ಮಗನ ಹೆಸರು ಕೇಳಿಬಂದಿದೆ. ಇದು ಮೊದಲ ಬಾರಿಯಲ್ಲ, ಮೂರನೇ ಬಾರಿ ಆರೋಪ ಕೇಳಿಬಂದಿದ್ದು, ಸಚಿವರ ರಾಜೀನಾಮೆ ಪಡೆಯಬೇಕು ಎಂದರು. ಸದನದಲ್ಲಿ ಪೆನ್‌ಡ್ರೈವ್ ಪ್ರದರ್ಶಿಸಿ, ಅಸ್ಸಾಂ, ಕೇರಳ ಚುನಾವಣೆಗೆ ಹಣ ಸಂಗ್ರಹ ಮಾಡಲಾಗುತ್ತಿದೆ ಎನ್ನುತ್ತಿದ್ದಂತೆ, ಬಿಜೆಪಿ ಶಾಸಕರು ಒಮ್ಮಲೇ ಎದ್ದು ನಿಂತು ಅಬಕಾರಿ ಸಚಿವರು ರಾಜೀನಾಮೆ ಕೊಡಬೇಕು. ಮುಖ್ಯಮಂತ್ರಿ ರಾಜೀನಾಮೆ ಪಡೆದುಕೊಳ್ಳಬೇಕು ಎಂಬ ಘೋಷಣೆ ಕೂಗಿದರು.

ಅಬಕಾರಿ ಇಲಾಖೆ ಮೇಲೆ 4 ಸಾವಿರ ಕೋಟಿ ರೂ. ಲೂಟಿ ಆರೋಪ ಇದೆ, ಲೋಕಾಯುಕ್ತದಲ್ಲೂ ದೂರು ದಾಖಲಾಗಿದೆ. ಸದನದಲ್ಲಿ ಚರ್ಚೆಗೆ ಅವಕಾಶ ಕೊಡಬೇಕು. ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ನಿಲುವಳಿ ಸೂಚನೆ ಬದಲಿಗೆ ನಿಯಮ 69ಕ್ಕೆ ಪರಿವರ್ತನೆ ಮಾಡುವುದಾಗಿ ತಿಳಿಸಿ ಮುಂದಿನ ಕಲಾಪಕ್ಕೆ ಮುಂದಾದಾಗಲೂ ಬಿಜೆಪಿ ಸದಸ್ಯರು ಅಬಕಾರಿ ಸಚಿವರ ರಾಜೀನಾಮೆಗೆ ಘೋಷಣೆ ಕೂಗುತ್ತಲೇ ಇದ್ದರು.

ಕಾಡಾನೆಗಳಿಂದ ಕಬ್ಬಿನ ಫಸಲು ನಾಶ



ಭಾರತೀನಗರ, ಜ.23– ಕಾಡಾನೆಗಳ ಹಿಂಡು ಕಬ್ಬಿನ ಫಸಲನ್ನು ನಾಶಗೊಳಿಸಿ ರುವ ಘಟನೆ ಇಲ್ಲಿಗೆ ಸಮೀಪದ ಕೆ.ಪಿ. ದೊಡ್ಡಿಯಲ್ಲಿ ಗುರುವಾರ ಸಂಜೆ ನಡೆದಿದೆ.

5 ಕಾಡಾನೆಗಳ ಹಿಂಡು ಗ್ರಾಮದ ಸಿದ್ದ ರಾಜು ಅವರ ಜಮೀನಿನಲ್ಲಿ ಬೀಡುಬಿಟ್ಟು ಕಬ್ಬಿನ ಫಸಲನ್ನು ಸಂಪೂರ್ಣ ನಾಶಗೊಳಿ ಸಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಜಮೀನಿನಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳನ್ನು ಮುತ್ತತ್ತಿ ಅರಣ್ಯ ಪ್ರದೇಶಕ್ಕೆ ಓಡಿಸಲು ಮುಂದಾದಾಗ ಅಣ್ಣೂರು, ಕಾರ್ಕಹಳ್ಳಿ, ಕ್ಯಾತಘಟ್ಟ ಮಾರ್ಗವಾಗಿ ಗೊರವನಹಳ್ಳಿ ಗ್ರಾಮದ ರೈತರ ಜಮೀನಿನಲ್ಲಿ ಬೀಡು ಬಿಟ್ಟಿದ್ದು, ಸ್ಥಳೀಯರು ಆತಂಕಕ್ಕೆ ಒಳಗಾ ಗಿದ್ದಾರೆ. ಹೀಗಾಗಿ ಕೂಡಲೇ ಕಾಡಾನೆ ಗಳನ್ನು ಕಾಡಿಗೆ ಅಟ್ಟಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಅಲ್ಲದೇ ಕಬ್ಬಿನ ಬೆಳೆ ಕಳೆದುಕೊಂಡಿರುವ ರೈತ ಸಿದ್ದರಾಜು ಅವರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ ದರೋಡೆ ಪ್ರಕರಣ

ಬಿಹಾರ ಮೂಲದ ಇಬ್ಬರು ಆರೋಪಿಗಳಿಗೆ ಪೊಲೀಸರಿಂದ ಡ್ರಿಲ್

ಮೈಸೂರು, ಜ.23(ಬಿಎಲ್‌ಯು)– ಮೈಸೂರು ಜಿಲ್ಲೆ ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ ದರೋಡೆ ಪ್ರಕರಣದ ಇಬ್ಬರು ಆರೋಪಿಗಳನ್ನು ಮೈಸೂರು ಜಿಲ್ಲಾ ಪೊಲೀಸರು ತೀವ್ರ ವಿಚಾರಣೆ ಗೊಳಪಡಿಸಿದ್ದಾರೆ.

ಬಿಹಾರದ ಬಾಗಲ್ಪುರ್‌ನಲ್ಲಿ ಬಂಧಿಸಿ ರುವ ಪಂಕಜ್ ಕುಮಾರ್ ಹಾಗೂ ದೆಹಲಿ ಯಲ್ಲಿ ಸೆರೆ ಸಿಕ್ಕ ರಿಷಿಕೇಶ್ ಕುಮಾರ್ ಅವರನ್ನು ಮೊನ್ನೆ ರಾತ್ರಿಯೇ ಬಿಹಾರ ದಿಂದ ಮೈಸೂರಿಗೆ ಕರೆತರಲಾಗಿದೆ.

ಈ ಇಬ್ಬರು ಆರೋಪಿಗಳನ್ನು ಹತ್ತು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯ ಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲ ದಂಡಿ, 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಿನ್ನೆ ಬೆಳಿಗ್ಗೆಯಿಂದ ಇಬ್ಬರು ಆರೋಪಿಗಳನ್ನು ತೀವ್ರ ವಿಚಾರಣೆ ಗೊಳಪಡಿಸಲಾಗಿದೆ. ವಿಚಾರಣೆ ವೇಳೆ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಇದರ ಆಧಾರದ ಮೇಲೆ ಉಳಿದ ಆರೋಪಿಗಳ ಪತ್ತೆಗೆ ಕಾರ್ಯಾ ಚರಣೆ ಚುರುಕುಗೊಳಿಸಲಾಗಿದೆ ಎಂದರು.

ಒಟ್ಟಾರೆ ಆರೋಪಿಗಳನ್ನು ಶೀಘ್ರವೇ ಬಂಧಿಸುತ್ತೇವೆ ಎಂದು ಮಲ್ಲಿಕಾರ್ಜುನ ಬಾಲದಂಡಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉಳಿದ ಆರೋಪಿಗಳ ಪತ್ತೆಗೆ ಐವರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಒಳಗೊಂಡ 30 ಪೊಲೀಸ್ ಸಿಬ್ಬಂದಿಯ ತಂಡ ಬಿಹಾರ ದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಇಂದಿನಿಂದ ಮೈಸೂರಲ್ಲಿ ರೋಟರಿ 'ಸಮಾಗಮ'

ಮೈಸೂರು, ಜ.23(ಜಿಎ)–ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3160ರ 42ನೇ ಜಿಲ್ಲಾ ಸಮಾವೇಶ 'ಸಮಾಗಮ' ಜ.24 ಮತ್ತು 25 ರಂದು ನಗರದ ಸೈಲೆಂಟ್ ಶೋರ್ ರೆಸಾರ್ಟ್‌ನಲ್ಲಿ ನಡೆಯಲಿದೆ ಎಂದು ಜಿಲ್ಲಾ ರಾಜ್ಯಪಾಲ ಎಂ.ಕೆ. ರವೀಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾರ್ಥ ಮೀರಿದ ಸೇವೆ ವಿಷಯ ಆಧಾರಿತವಾದ ಸಮಾವೇಶ ಇದಾ ಗಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಡಾ. ಸಿ.ಎನ್. ಮಂಜುನಾಥ್ ಹಾಗೂ ನಟ ರಮೇಶ್ ಅರವಿಂದ್, ಗುರುಜೀತ್ ಸಿಂಗ್ ಶೆಖಾವ್, ರೊ.ಶರತ್ ಬಾಬು ಚಿಲುಕುರಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸಮಾವೇಶದಲ್ಲಿ ಪ್ರಮುಖ ಪ್ರೇರಣಾ ದಾಯಕ ಭಾಷಣ, ಸಂವಾದ, ಶಿಕ್ಷಣ, ಆರೋಗ್ಯ ಯೋಜನೆ, ಮಹಿಳಾ ಸಬಲೀ ಕರಣ ಬಗ್ಗೆ ಚರ್ಚೆ ನಡೆಯಲಿವೆ. ರಾಜ್ಯದ ಒಂಭತ್ತು ಕಂದಾಯ ಜಿಲ್ಲೆಗಳು ಮತ್ತು ಆಂಧ್ರ ಪ್ರದೇಶದ 8 ಕಂದಾಯ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸ ಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆರ್. ಮಂಜುನಾಥ್, ಮಧುಪ್ರಸಾದ್, ವಿಶ್ವನಾಥ್, ಡಾ.ಮಧುಸೂದನ್ ರೆಡ್ಡಿ ಉಪಸ್ಥಿತರಿದ್ದರು.



ಮೈಸೂರಲ್ಲೀಗ ಗುರಾಯಿಸಿದರೆ ಗುನ್ನಾ...! ಮಾತನಾಡಿಸಿದರೆ ಮಚ್ಚಿನೇಟು ಗ್ಯಾರಂಟಿ...!!

● ಸಾಂಸ್ಕೃತಿಕ ನಗರದಾದ್ಯಂತ ಮಾದಕ ವಸ್ತುಗಳ ಘಮಲು ● ರಾತ್ರಿ ಬಹುಹೊತ್ತಿನವರೆಗೆ ಬಯಲು ಪ್ರದೇಶಗಳಲ್ಲಿ ಧಮ್ ಮಾರೋ... ಧಮ್... ● ಪೊಲೀಸರ ಬೀಟ್ ವಾಹನ ಕಂಡಾಗ ಕಣ್ಣಾ ಮುಚ್ಚಾಲೆ ಆಟ! ● ಇಂತಹ ವೇಳೆ ಅಮಾಯಕರು ಸಿಕ್ಕರೆ ಅವರ ಕತೆ ಮುಗಿಯಿತು ● ಮಾನಸಿಕ ಸ್ಥಿಮಿತತೆ ಕಳೆದುಕೊಂಡಂತಿರುವ ಇವರ ಕೆಣಕಿದರೆ ಮುಗಿಯಿತು!!!

ಮೈಸೂರು, ಜ.23 (ಎಂಕೆ)– ಮೈಸೂರಲ್ಲಿ ಗುರಾಯಿಸಿದರೆ ಗುನ್ನಾ..! ಮಾತನಾಡಿಸಿದರೆ ಮಚ್ಚಿನೇಟು...!! ಮುಂದೆ ಏನು ಬೇಕಾದರೂ ಆಗಬಹುದು...!!!

ಅಬ್ಬಬ್ಬಾ...! ಸಾಂಸ್ಕೃತಿಕ ನಗರಿ, ಅರಮನೆ ನಗರಿ, ಪಾರಂಪರಿಕ ನಗರಿ ಎಂಬಿತ್ಯಾದಿ ಹೆಸರುಗಳೊಂದಿಗೆ ಜಗತ್ಪ್ರಸಿದ್ಧಿಯಾಗಿರುವ ಸೌಜನ್ಯ, ಸಜ್ಜನರು, ಸುಸಂಸ್ಕೃತರು, ಸ್ನೇಹಪರರ ನೆಲೆವೀಡು ಎಂದೆನಿಸಿದ್ದ ಮೈಸೂರು, ಇತ್ತೀಚೆಗೆ ಡ್ರಗ್ಸ್ ಇನ್ನಿತರೆ ಮಾದಕ ವಸ್ತುಗಳ ಹಾವಳಿಯಿಂದಾಗಿ ಕುಖ್ಯಾತಿ ಪಡೆದುಕೊಳ್ಳುತ್ತಿದೆ.

ವಿಶಾಲ ರಸ್ತೆಗಳು... ಸುಂದರ ಪಾರಂಪರಿಕ ಕಟ್ಟಡಗಳು... ಹಚ್ಚ ಹಸಿರಿನಿಂದ ಕೂಡಿರುವ ಧಾರ್ಮಿಕ ಕ್ಷೇತ್ರ ಚಾಮುಂಡಿಬೆಟ್ಟ ಹಾಗೂ ಉದ್ಯಾನವನಗಳಿಂದ ಸುಂದರ ಮತ್ತು ಸ್ವಚ್ಛ, ಪ್ರಶಾಂತತೆಯಿಂದ ಕೂಡಿದ್ದ ಮೈಸೂರಿನಲ್ಲಿ ದಿನೇ ದಿನೇ ಆತಂಕಕಾರಿ ವಾತಾವರಣ ಮನೆ ಮಾಡುತ್ತಿದೆ.

ನಗು ಮುಖದಿಂದ ಮಾತನಾಡಿಸಿದರೂ ಏಕಾಏಕಿ ಕೆರಳಿ, ಕೆಂಡದಂತಾಗುತ್ತಿರುವ ಮೈಸೂರಿನ ಯುವ ಮನಸ್ಸುಗಳಿಗೆ ಮಾದಕ ವಸ್ತುಗಳ ವಿಷ ಪ್ರಾಶನವನ್ನೇ ಮಾಡಿಸಲಾಗುತ್ತಿದ್ದು, ಪೊಲೀಸರು ಎಚ್ಚೆತ್ತುಕೊಳ್ಳದಿದ್ದರೆ ಈಗ ವಾರಕ್ಕೊಂದು... ತಿಂಗಳಿಗೊಂದರಂತೆ ನಡೆಯುತ್ತಿರುವ ಕೊಲೆ, ಸುಲಿಗೆ ಮತ್ತು ಅತ್ಯಾಚಾರ ಪ್ರಕರಣಗಳು ಮುಂದೆ ಪ್ರತಿನಿತ್ಯ ನಡೆಯುವಂತಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಚಾಮರಾಜ ವಿಧಾನಸಭಾ ಕ್ಷೇತ್ರ, ಕೃಷ್ಣರಾಜ ಹಾಗೂ ಮೈಸೂರಿನ ಸುತ್ತಲಿನ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಆಗೊಂದು.. ಈಗೊಂದು ಅಪರಾಧ ಪ್ರಕರಣಗಳು ನಡೆದರೆ, ಮೈಸೂರಿನ ಹೃದಯ ಭಾಗವನ್ನೊಳಗೊಂಡಿರುವ ಅದರಲ್ಲೂ ಹೆಚ್ಚಿನ ಜನಸಂಖ್ಯೆ ಇರುವ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಂದು ಕೊಲೆ, ಸುಲಿಗೆ ಪ್ರಕರಣಗಳು ವರದಿಯಾಗುತ್ತಿರುವುದು ಜನಸಾಮಾನ್ಯರಲ್ಲಿ ಆತಂಕ ಸೃಷ್ಟಿಸಿದೆ.

ಮೊನ್ನೆಯಷ್ಟೇ ರಾಜೀವ್‌ನಗರ 2ನೇ ಹಂತದಲ್ಲಿ ಹಾಡಹಗಲೇ ಗುಂಪೊಂದು ಲಾಂಗು–ಮಚ್ಚುಗಳ ಹಿಡಿದು ಅಟ್ಟಹಾಸ ಮೆರೆದಿರುವುದಲ್ಲದೆ ಯುವಕನೋರ್ವನನ್ನು ಮನಬಂದಂತೆ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿರುವುದು, ಮೈಸೂರಿನ ಗಲ್ಲಿ ರಸ್ತೆಯಲ್ಲಿ ಅರಣ್ಯಾಧಿಕಾರಿಯೊಬ್ಬರ ಮೃತದೇಹ ಪತ್ತೆಯಾಗಿರುವುದು, ರಾಜೀವ್‌ನಗರದ 2ನೇ ಹಂತದಲ್ಲೇ ಕ್ರಿಕೆಟ್ ಆಟದ ವಿಚಾರದಲ್ಲಾದ ಗಲಾಟೆಯಲ್ಲಿ ಎರಡು ಗುಂಪುಗಳ ನಡುವೆ ಮಚ್ಚು–ಲಾಂಗು ಹಿಡಿದು ಮಾರಾಮಾರಿ ನಡೆದಿರುವುದು ಮೈಸೂರಿಗರನ್ನು ಭಯಭೀತರನ್ನಾಗಿಸಿದೆ.

ಎನ್.ಆರ್.ಕ್ಷೇತ್ರದ ಮುಖಂಡರೊಬ್ಬರು ಹೇಳುವಂತೆ, ರಾತ್ರಿಯಾಗುತ್ತಿದ್ದಂತೆ ಎಲ್ಲಾದರೂ ಹೊರಗಡೆ ಹೋಗಬೇಕೆಂದರೆ ಭಯ, ಆತಂಕ, ಮನಸ್ಸಿನಲ್ಲಿ ದುಗುಡ ಆವರಿಸಲಿದೆ. ಅಪ್ಪಿತಪ್ಪಿ ಯಾರನ್ನಾದರೂ ಮಾತನಾಡಿಸಿದರೆ ಮುಗಿತು ಕತೆ... ಕೆರಳಿ ಕೆಂಡವಾಗಿ ಮೇಲೆ ಬೀಳುವ ಹಂತಕ್ಕೆ ತಲುಪುತ್ತಾರೆ. ಇದಕ್ಕೆಲ್ಲಾ ಮಕ್ಕಳ ಮನಸ್ಸನ್ನು ವಿಕೃತಗೊಳಿಸುವ... ಶಾಂತಿಯೆಂಬುದನ್ನೇ ಮರೆ ಮಾಚುವ... ರಕ್ತವನ್ನೇ ಹಪಹಪಿಸುವಂತೆ ಮಾಡುವ 'ಡ್ರಗ್ಸ್' ಕಾರಣ ಎಂದಿದ್ದಾರೆ.

ಮಾದಕ ವಸ್ತುಗಳ ಸೇವಿಸಿ ಅಮಲಲ್ಲಿ ತೇಲಾಡುತ್ತಿರುವ ಪುಂಡ–ಪೋಕರಿಗಳ ನೋಡಿದರೆ ರಕ್ಕಸರನ್ನೇ ನೋಡಿದಂತಾಗುತ್ತದೆ. ರಪ್ಪನೆಂದು ನಮ್ಮ ಕುತ್ತಿಗೆಗೂ ಮಚ್ಚು ಬೀಸುತ್ತಾರೋ... ಡ್ರ್ಯಾಗರ್ ಎಳೆದು ಚುಚ್ಚುತ್ತಾರೋ ಎಂಬ ಭಯ ಕಾಡತೊಡಗಿದೆ. ಒಂದು ಕಾಲದಲ್ಲಿ ಸಾಂಸ್ಕೃತಿಕ ವೈಭವವೇ ಮೇಳೈಸುತ್ತಿದ್ದ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕಾ ಹಾಗೂ ಮಾರಾಟ ಜಾಲವೇ ಪತ್ತೆಯಾಗಿದ್ದು ಮೈಸೂರು ಪರಂಪರೆಗೆ ಕಪ್ಪು ಮಸಿ ಬಳಿದಂತಾಗಿದೆ.

ಎಚ್ಚೆತ್ತುಕೊಳ್ಳುವುದು ಅವಶ್ಯ... ಅನಿವಾರ್ಯ... ಅಗತ್ಯ...!: ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಘಟಕ ಎಚ್ಚೆತ್ತುಕೊಳ್ಳುವುದು ಅವಶ್ಯ, ಅನಿವಾರ್ಯ ಮತ್ತು ಅಗತ್ಯವಾಗಿದೆ. ನಗರದ ಒಂದಲ್ಲಾ ಒಂದು ಕಡೆ ಅದರಲ್ಲೂ ಎನ್.ಆರ್. ಕ್ಷೇತ್ರದಲ್ಲಿ ಅಪರಾಧ ಪ್ರಕರಣಗಳು ನಡೆಯುತ್ತಲೇ ಇದ್ದು, ಇದೇ ರೀತಿ ಮುಂದುವರೆದಲ್ಲಿ ಮೈಸೂರು ಅಪರಾಧಗಳಿಂದಲೇ ಕುಖ್ಯಾತಿ ಪಡೆಯಲಿದೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು 'ಮೈಸೂರು ಮಿತ್ರ'ನೊಂದಿಗೆ ತಮ್ಮೊಳಗಿನ ಆತಂಕವನ್ನು ಹೊರಹಾಕಿದ್ದಾರೆ.

ಗೂಂಡಾಗಳ ನಿಗ್ರಹ, ಡ್ರಗ್ಸ್ ಜಾಲಕ್ಕೆ ಕಡಿವಾಣ, ಜನಸಂದಣಿ ಸ್ಥಳಗಳಲ್ಲಿ ಬಂದೋಬಸ್ತ್, ಪಾಳು ಬಿದ್ದಿರುವ ಸ್ಥಳಗಳು ಹಾಗೂ ಸ್ಮಶಾನಗಳ ಸುತ್ತಲೂ ರೌಂಡ್ಸ್, ರೌಡಿಶೀಟರ್‌ಗಳ ಹದ್ದುಬಸ್ತಿನಲ್ಲಿಡುವುದು, ಸಾರ್ವಜನಿಕರಲ್ಲಿ ಅಪರಾಧ ಕುರಿತು ವ್ಯಾಪಕ ಅರಿವು ಮೂಡಿಸುವುದು ಸೇರಿದಂತೆ ಅಪರಾಧ ಮುಕ್ತ ಮೈಸೂರನ್ನಾಗಿಸಲು ಪೊಲೀಸರು ಕಂಕಣ ಬದ್ಧರಾಗದಿದ್ದಲ್ಲಿ ಮೈಸೂರಿನ ಸಾಂಸ್ಕೃತಿಕ ವೈಭವವೇ ಮರೆಯಾಗಲಿದೆ ಎಂದಿದ್ದಾರೆ.

ಕಣ್ಣಾ ಮುಚ್ಚೆ ಕಾಡೇ ಗೂಡೆ...!

ಮೈಸೂರಿನಲ್ಲಿ ಪೊಲೀಸರು ಮತ್ತು ಪುಂಡ–ಪೋಕರಿಗಳ ನಡುವೆ ಕಣ್ಣಾ ಮುಚ್ಚೆ ಕಾಡೇ ಗೂಡೆ ಆಟ ನಡೆಯುತ್ತಿದೆ. ಯಾವುದಾದರೂ ಕೂಲಿ ಕೆಲಸ ಮಾಡಿಕೊಂಡು, ಸಂಜೆಯಾಗುತ್ತಿದ್ದಂತೆ ಖಾಲಿ ನಿವೇಶನಗಳು, ಪಾಳು ಬಿದ್ದ ಜಾಗಗಳು, ಕಗ್ಗತ್ತಲು ಆವರಿಸಿರುವ ಸ್ಮಶಾನಗಳಲ್ಲಿ ಡ್ರಗ್ಸ್ ಪಾರ್ಟಿ ಮಾಡುವ ಪುಂಡ–ಪೋಕರಿಗಳು, ಪೊಲೀಸರ 112 ಮತ್ತು ಠಾಣೆಯ ಬೀಟ್ ವಾಹನಗಳು ಬರುತ್ತಿದಂತೆ ಮರೆಯಾಗಿ, ಪೊಲೀಸರು ಅತ್ತ ಹೋದ ಕೂಡಲೇ ಮತ್ತದೇ ಸ್ಥಳದಲ್ಲಿ ತಮ್ಮ ಮತ್ತಿನ ಮೋಜು–ಮಸ್ತಿಯನ್ನು ಮುಂದುವರೆಸುತ್ತಾರೆ. ಇದರ ಬಗ್ಗೆ ಪೊಲೀಸರು ಗಂಭೀರ ಮತ್ತು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಿದೆ.

– ಮೈಸೂರಿನ ಪ್ರಜ್ಞಾವಂತ ನಾಗರಿಕರು

ಎನ್.ಆರ್.ಕ್ಷೇತ್ರದಲ್ಲಿ 12 ರಿಂದ 14 ವರ್ಷದ ಹುಡುಗರ ಕೈಯ್ಯಲ್ಲಿ ಚಾಕು... ಚೂರಿ...!

ಮೈಸೂರಿನ ಎನ್.ಆರ್.ಕ್ಷೇತ್ರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಿಗಿ ಮಾಡುವಂತೆ ಪದೇ ಪದೇ ಪೊಲೀಸ್ ಕಮಿಷನರ್ ಅವರಿಗೆ ನಾವುಗಳು ಹೇಳುತ್ತಲೇ ಇದ್ದೇವೆ. ಯುವಕರಿಗೆ ಪೊಲೀಸರ ಮೇಲಿನ ಭಯವೇ ಇಲ್ಲ. ಅಪ್ರಾಪ್ತರೇ ಹೆಚ್ಚಾಗಿ ರೌಡಿಸಂ ಮಾಡುತ್ತಿದ್ದಾರೆ. ಇದರ ಬಗ್ಗೆ ಪೊಲೀಸರು ನಿಗಾ ವಹಿಸುವುದರ ಜೊತೆಗೆ ಸಾರ್ವಜನಿಕರು ಪೊಲೀಸರಿಗೆ ಸಹಕಾರ ನೀಡಬೇಕು.

ಡ್ರಗ್ಸ್ ಜಾಲ ಪತ್ತೆಯಾದ ಬಳಿಕ ಒಂದಷ್ಟು ತಪಾಸಣೆಗಳನ್ನು ನಡೆಸಿದ ಪೊಲೀಸರು, ನಂತರ ಸುಮ್ಮನಾದರು. ಈಗೇನೂ ಡ್ರಗ್ಸ್, ಗಾಂಜಾ ಇನ್ನಿತರೆ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆ ಕಮ್ಮಿಯಾಗಿಲ್ಲ. ಪೊಲೀಸರ ಭಯವಿಲ್ಲದ ಕಾರಣ ಎನ್.ಆರ್.ಕ್ಷೇತ್ರದಲ್ಲಿ 12–14 ವರ್ಷದ ಹುಡುಗರು ಮಚ್ಚು–ಲಾಂಗು, ಚಾಕು–ಚೂರಿ ಹಿಡಿದುಕೊಂಡು ಸುತ್ತಾಡುವ ಪರಿಸ್ಥಿತಿ ಬಂದಿದೆ. ಟಿನೇಜ್ ರೌಡಿಸಂ ಹೆಚ್ಚಾಗಿದೆ. ಹೋಟೆಲ್‌ಗಳನ್ನು ರಾತ್ರಿ 10 ಗಂಟೆಗೆ ಕ್ಲೋಸ್ ಮಾಡಬೇಕು. ಆದರೆ, ತಡರಾತ್ರಿಯವರೆಗೂ ಹೋಟೆಲ್‌ಗಳು, ಟೀ ಅಂಗಡಿಗಳು ಓಪನ್ ಆಗಿರುತ್ತವೆ. ಅಲ್ಲಿ ಕೆಲಸಕ್ಕೆ ಬಾರದಿರುವವರೆಲ್ಲಾ ಗಂಟೆಗಟ್ಟಲೆ ಕುಳಿತಿರುತ್ತಾರೆ. ಒಂದು ಟೀ ಕುಡಿಯಲು 2 ಗಂಟೆ ಕಾಲ ಕುಳಿತಿರುತ್ತಾರೆ. ಅಲ್ಲಿಂದಲೇ ಡ್ರಗ್ಸ್, ಗಾಂಜಾ ಇನ್ನಿತರೆ ಮಾದಕ ವಸ್ತುಗಳ ವ್ಯಾಪಾರ ಮತ್ತು ಅಪರಾಧಗಳಿಗೆ ಪೂರ್ವ ಸಿದ್ಧತೆ ಆರಂಭವಾಗುತ್ತಿದೆ.

ಮೈಸೂರು ನಗರ ಪೊಲೀಸರು ಕಾರು, ಬೈಕ್ ಮತ್ತು ಸ್ಕೂಟರ್‌ಗಳ ತಪಾಸಣೆಗಷ್ಟೇ ಸಿಮೀತವಾಗಿದ್ದಾರೆ. ಸೀಟ್ ಬೆಲ್ಟ್, ಹೆಲ್ಮೆಟ್ ಹಾಕದವರಷ್ಟೇ ಪೊಲೀಸರಿಗೆ ಹೆದರಿಕೊಳ್ಳಬೇಕು. ಮುಖ್ಯವಾಗಿ ಎನ್.ಆರ್.ಕ್ಷೇತ್ರದಲ್ಲಿ ಡ್ರಗ್ಸ್ ಜಾಲ ಪತ್ತೆಯಾಗಿ, ಕೊಲೆ–ಸುಲಿಗೆಯಾಗುತ್ತಿದ್ದರೂ ಸ್ಥಳೀಯ ಸಂಘ–ಸಂಸ್ಥೆಗಳು, ಜನಪ್ರತಿನಿಧಿಗಳು ಮೂಕರಾಗಿರುವುದು ಶೋಚನೀಯ. ಬೃಹತ್ ಬೆಂಗಳೂರಿನಲ್ಲಿಯೂ ಇಷ್ಟೊಂದು ಅಪರಾಧ ಪ್ರಕರಣಗಳು ನಡೆಯುತ್ತಿಲ್ಲ.

– ನರಸಿಂಹರಾಜ ಕ್ಷೇತ್ರದ ಸಾಮಾಜಿಕ ಕಳಕಳಿಯುಳ್ಳ ಮುಖಂಡರು.

ನಾಳೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 108 ಸಾಮೂಹಿಕ ಸೂರ್ಯ ನಮಸ್ಕಾರ

ಮೈಸೂರು, ಜ.23(ಜಿಎ)–ಮೈಸೂರು ಜಿಲ್ಲಾ ಯೋಗ ಸ್ಪೋರ್ಟ್ಸ್ ಫೌಂಡೇಷನ್, ಗಣಪತಿ ಸಚ್ಚಿದಾನಂದ ಆಶ್ರಮಗಳ ಸಂಯುಕ್ತಾಶ್ರಯದಲ್ಲಿ ಜ.25ರಂದು ಬೆಳಗ್ಗೆ 5.30ಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 108 ಸಾಮೂಹಿಕ ಸೂರ್ಯ ನಮಸ್ಕಾರ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಯೋಗ ಸ್ಪೋರ್ಟ್ಸ್ ಫೌಂಡೇಷನ್, ಅಧ್ಯಕ್ಷ ಡಾ.ಪಿ.ಎನ್. ಗಣೇಶ್‌ಕುಮಾರ್ ಈ ವಿಷಯ ತಿಳಿಸಿ, ರಥಸಪ್ತಮಿ ಹಾಗೂ ವಿವೇಕಾನಂದ ಜಯಂತಿ ಅಂಗವಾಗಿ ಸಾಮೂಹಿಕ ಸೂರ್ಯ ನಮಸ್ಕಾರ ಆಯೋಜಿಸಲಾಗಿದೆ. ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸುವರು. ಮಾಜಿ ಎಂಎಲ್‌ಸಿ ಸಿದ್ದರಾಜು, ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಶ್ರೀವತ್ಸ, ಗ್ಲೋಬಲ್ ಯೋಗ ಫೋರಂ ಅಧ್ಯಕ್ಷ ಶ್ರೀಹರಿ, ಯೋಗ ಫೋರಂ ಖಜಾಂಚಿ ಶಶಿಕುಮಾರ್, ನಿವೃತ್ತ ಡಿವೈಎಸ್‌ಪಿ ಉಮೇಶ್ ಗಣಪತಿ ಭಟ್, ನಿವೃತ್ತ ಡಿಡಿಪಿಐ ಮಂಜುಳಾ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಇದು ಸಂಪೂರ್ಣ ಉಚಿತ ಕಾರ್ಯಕ್ರಮವಾಗಿದ್ದು, ಆಗಮಿಸುವವರು ತಾವೇ ಮ್ಯಾಟ್ ತರಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಿವೃತ್ತ ಡಿಡಿಪಿಐ ಮಂಜುಳಾ, ಶಶಿಕುಮಾರ್, ವಿವೇಕ್, ನಿಶಾಂತ್, ಪ್ರೇಮ್‌ಕುಮಾರ್ ಉಪಸ್ಥಿತರಿದ್ದರು.

ಹಸುಗಳನ್ನು ಕದ್ದು ಕಸಾಯಿಖಾನೆಗೆ ಸಾಗಿಸುತ್ತಿದ್ದ ಇಬ್ಬರು ಖದೀಮರ ಬಂಧನ

ಎರಡು ಸ್ಕಾರ್ಪಿಯೋ ಕಾರು; 30 ಸಾವಿರ ನಗದು ವಶಕ್ಕೆ

ಮೈಸೂರು, ಜ.23(ಎಂಕೆ)– ಕಸಾಯಿಖಾನೆಗೆ ಸಾಗಿಸಲು ಜಿಲ್ಲೆಯ ವಿವಿಧೆಡೆ ಹಸುಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಖದೀಮರನ್ನು ಬಂಧಿಸಿರುವ ನಂಜನಗೂಡು ಟೌನ್ ಪೊಲೀಸರು, ಬಂಧಿತರಿಂದ 2 ಸ್ಕಾರ್ಪಿಯೋ ಕಾರು, 30 ಸಾವಿರ ರೂ.ನಗದು ಹಣವನ್ನು ವಶಕ್ಕೆ ಪಡೆದು, ತನಿಖೆ ನಡೆಸುತ್ತಿದ್ದಾರೆ.

ಮೈಸೂರಿನ ಕೆಸರೆ ನಿವಾಸಿಗಳಾದ ಸಿದ್ದಿಕ್ ಪಾಷಾ ಮತ್ತು ಸುಲೇಮಾನ್ ಪಾಷಾ ಬಂಧಿತ ಆರೋಪಿಗಳಾಗಿದ್ದು, ಜ.6 ರಂದು ನಂಜನಗೂಡಿನ ಒಕ್ಕಲಗೇರಿ ನಿವಾಸಿ ಶಿವಕುಮಾರ್ ಎಂಬುವರಿಗೆ ಸೇರಿದ್ದ 5 ಹಸುಗಳನ್ನು ಕಳ್ಳತನ ಮಾಡಿರುವ ಕುರಿತು ಪ್ರಕರಣ ದಾಖಲಿಸಿ ಕೊಂಡಿದ್ದ ನಂಜನಗೂಡು ಟೌನ್ ಪೊಲೀಸರು, ದೂರುದಾರರ ಮಾಹಿತಿ, ಸಿಸಿಟಿವಿ ದೃಶ್ಯಾವಳಿಗಳು ಹಾಗೂ ವೈಜ್ಞಾನಿಕ ಸಾಕ್ಷಾಧಾರ ಗಳ ಮೂಲಕ ಆರೋಪಿಗಳನ್ನು ಜ.22 ರಂದು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಳಿಕ ಬಂಧಿತ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಆರೋಪಿಗಳಾದ ಸುಲೇಮಾನ್ ಪಾಷಾ ವಿರುದ್ಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ ಹಾಗೂ ಸಿದ್ದಿಕ್ ಪಾಷಾ ವಿರುದ್ಧ ಮೈಸೂರು ನಗರದ ಎನ್.ಆರ್. ಪೊಲೀಸ್ ಠಾಣೆಯಲ್ಲಿ 2 ಪ್ರಕರಣ, ಶ್ರೀರಂಗಪಟ್ಟಣ ಮತ್ತು ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ತಲಾ 1 ಪ್ರಕರಣ ದಾಖಲಾಗಿರುವುದು ತಿಳಿದು ಬಂದಿದೆ.

ಹಾಗೆಯೇ ಕಳ್ಳತನ ಮಾಡುತ್ತಿದ್ದ ಹಸುಗಳನ್ನು, ಮೈಸೂರಿನ ಕೆಸರೆಯ ಉಸ್ಮಾನಿಯ ಬ್ಲಾಕ್‌ನಲ್ಲಿರುವ ಕಸಾಯಿಖಾನೆಗೆ ಮಾರಾಟ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ನಂಜನಗೂಡು ಟೌನ್, ಹೆಚ್.ಡಿ.ಕೋಟೆ, ಟಿ.ನರಸೀಪುರ, ಬಿಳಿಗೆರೆ ಮತ್ತು ಬಿಳಿಕೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆ ದಾಖಲಾಗಿದ್ದ 5 ಕಳ್ಳತನ ಪ್ರಕರಣಗಳು ಪತ್ತೆಯಾಗಿದೆ.

ಬಂಧಿತರಿಂದ 30 ಸಾವಿರ ರೂ. ನಗದು, ಕಳ್ಳತನಕ್ಕೆ ಉಪಯೋಗಿಸುತ್ತಿದ್ದ 2 ಸ್ಕಾರ್ಪಿಯೊ ಕಾರುಗಳನ್ನು ವಶಕ್ಕೆ ಪಡೆದಿದ್ದು, ಆರೋಪಿಗಳಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ತನಿಖೆ ಮುಂದುವರೆಸಲಾಗಿದೆ. ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ಗಳಾದ ಎಲ್. ನಾಗೇಶ್, ಸಿ.ಮಲ್ಲಿಕ್, ನಂಜನಗೂಡು ಉಪ ವಿಭಾಗದ ಡಿವೈಎಸ್‌ಪಿ ಜಿ.ಎಸ್.ರಘು ಮಾರ್ಗದರ್ಶನ ಹಾಗೂ ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ನೇತೃತ್ವ ದಲ್ಲಿ ನಡೆದ ತನಿಖಾ ಕಾರ್ಯಾ ಚರಣೆಯಲ್ಲಿ ಎಎಸ್‌ಐ ಸತೀಶ್, ಸಿಹೆಚ್‌ಸಿಗಳಾದ ಅಬ್ದುಲ್ ಲತೀಫ್, ಎನ್.ಎ.ಅಶೋಕ ಭಾಸ್ಕರ್, ಸಿಪಿಸಿ ಗಳಾದ ಯು.ಎಸ್. ಶಿವಕುಮಾರ್, ವೈ.ಎಂ. ಮಹೇಶ್, ತಿಮ್ಮಯ್ಯ, ಚೇತನ್, ಚಾಲಕ ಕೃಷ್ಣ ಹಾಗೂ ಜಿಲ್ಲಾ ಟೆಕ್ನಿಕಲ್ ವಿಭಾಗದ ಎಎಸ್‌ಐ ವಸಂತ್‌ಕುಮಾರ್, ಸುನಿತಾ ಭಾಗವಹಿಸಿದ್ದರು.

ರೋಬೋಟಿಕ್ಸ್ ತಂತ್ರಜ್ಞಾನದಿಂದ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ 150 ಮಂದಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ

ತ್ವರಿತ ಚೇತರಿಕೆ; ಅಲ್ಪ ಅವಧಿಯಲ್ಲಿ ಆಹಾರ ಸೇವನೆ ಸಾಧ್ಯತೆ



ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ರೋಬೋಟಿಕ್ ಸರ್ಜನ್ ಡಾ. ವಿಜಯ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜ.23(ಎಂಟಿವೈ)– ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ 150 ಕ್ಯಾನ್ಸರ್ ರೋಗಿಗಳಿಗೆ ರೋಬೋಟಿಕ್ಸ್ ತಂತ್ರಜ್ಞಾನದಿಂದ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ರೋಬೋಟಿಕ್ ಸರ್ಜನ್ ಡಾ.ವಿಜಯ ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಮೊಟ್ಟ ಮೊದಲಿಗೆ ರೋಬೋಟಿಕ್ಸ್ ತಂತ್ರಜ್ಞಾನ ಪರಿಚಯಿಸಿ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಿದ ಹೆಗ್ಗಳಿಕೆಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆ ಸೇರಿದೆ.

ರೋಬೋಟಿಕ್ಸ್ ಶಸ್ತ್ರ ಚಿಕಿತ್ಸೆಗೆ ಒಳಗಾದ ರೋಗಿಗಳು ತ್ವರಿತಗತಿಯಲ್ಲಿ ಗುಣಮುಖರಾಗಿ ಸಹಜ ಜೀವನಕ್ಕೆ ಮರಳಿದ್ದಾರೆ. ಈ ಚಿಕಿತ್ಸಾ ವಿಧಾನದಿಂದ ಅಡ್ಡ ಪರಿಣಾಮ ಇರುವುದಿಲ್ಲ. ಹೀಗಾಗಿ ಜಿಲ್ಲೆ ಸೇರಿದಂತೆ ವಿವಿಧ ಭಾಗಗಳ ಕ್ಯಾನ್ಸರ್ ರೋಗಿಗಳು ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು, ಎಲ್ಲರೂ ಆರೋಗ್ಯವಾಗಿದ್ದಾರೆ ಎಂದು ಹೇಳಿದರು.

ರೋಬೋಟಿಕ್ಸ್ ನೆರವಿನ ಶಸ್ತ್ರ ಚಿಕಿತ್ಸೆಯು ಅತ್ಯಂತ ನಿಖರತೆ ಮತ್ತು ಕನಿಷ್ಠ ಹಾನಿಕಾರಕ. ಇದರಿಂದಾಗಿ ಶಸ್ತ್ರ ಚಿಕಿತ್ಸೆಯ ನಂತರದ ನೋವು ಕಡಿಮೆ ಇರಲಿದೆ. ಸೋಂಕಿನ ಅಪಾಯ ಕಡಿಮೆ, ಕಲೆಗಳು ಅತೀ ಸಣ್ಣದಾಗಿರಲಿವೆ. ಹೀಗಾಗಿ ಮುಕ್ತ ಶಸ್ತ್ರ ಚಿಕಿತ್ಸೆಗಳಿಗೆ ಹೋಲಿಸಿದರೆ ಚೇತರಿಕೆ ವೇಗವಾಗಿರಲಿದೆ. ಮುಕ್ತ ಶಸ್ತ್ರ ಚಿಕಿತ್ಸೆಯಲ್ಲಿ ಆಹಾರ ಸೇವಿಸಲು 4ರಿಂದ 5 ದಿನಗಳು ಬೇಕಾದರೆ ರೋಬೋಟಿಕ್ಸ್ ಶಸ್ತ್ರ ಚಿಕಿತ್ಸೆಯ ನಂತರ ಕೇವಲ 24 ಗಂಟೆಯಲ್ಲಿ ರೋಗಿಗಳು ಆಹಾರ ಸೇವಿಸಬಹುದು. ವೇಗದ ಚೇತರಿಕೆಯಿಂದಾಗಿ ಕೀಮೋ ಥೆರಪಿ ಮತ್ತು ರೇಡಿಯೋ ಥೆರಪಿಯನ್ನು ಬೇಗನೆ ಪ್ರಾರಂಭಿಸಲು ಸಾಧ್ಯವಾಗಲಿದೆ.

ಒಟ್ಟಾರೆ ಚಿಕಿತ್ಸೆ ಫಲಿತಾಂಶವನ್ನು ಉತ್ತಮಗೊಳಿಸಲಿದೆ. ಬೆಂಗಳೂರು ಮತ್ತು ಇತರೆ ಪ್ರದೇಶಗಳಲ್ಲಿ ಚಿಕಿತ್ಸೆಗೆ 15–20 ಲಕ್ಷವಾದರೆ ನಮ್ಮಲ್ಲಿ ಕಡಿಮೆ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವಿವರಿಸಿದರು.

ಮೈಸೂರಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸುಧಾರಿತ ಶಸ್ತ್ರ ಚಿಕಿತ್ಸಾ ಪರಿಹಾರಗಳ ಅಗತ್ಯ ಹೆಚ್ಚಿದೆ. ಈ ನಿಟ್ಟಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ರೋಬೋಟಿಕ್ ಶಸ್ತ್ರ ಚಿಕಿತ್ಸೆ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಏಕೈಕ ವಿಶೇಷ ಆಸ್ಪತ್ರೆ ನಮ್ಮದಾಗಿದ್ದು, ಸ್ಥಳೀಯ ರೋಗಿಗಳಿಗೆ ವಿಶ್ವ ದರ್ಜೆಯ ಚಿಕಿತ್ಸೆ ಲಭ್ಯವಾಗುವಂತೆ ಮಾಡಿದೆ ಎಂದು ತಿಳಿಸಿದರು.

ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಗೌತಮ್ ಧ್'ಮರ್ಲ ಮಾತನಾಡಿ, 150 ಜನರ ಶಸ್ತ್ರ ಚಿಕಿತ್ಸೆಯ ಮೈಲಿಗಲ್ಲು ರೋಬೋಟಿಕ್ಸ್ ಆಂಕೋಲಾಜಿಯಲ್ಲಿ ಶ್ರೇಷ್ಠತಾ ಕೇಂದ್ರವಾಗುವ ಆಸ್ಪತ್ರೆಯ ದೃಷ್ಟಿಕೋನವನ್ನು ಪ್ರತಿಬಿಂಬಿಸಲಿದೆ. ಸುಧಾರಿತ ತಂತ್ರಜ್ಞಾನ ಮತ್ತು ನುರಿತ ವೈದ್ಯರ ತಂಡ ಹೊಂದಿರುವ ಆಸ್ಪತ್ರೆಯು ಪರಿಣಾಮಕಾರಿ ಕ್ಯಾನ್ಸರ್ ಆರೈಕೆ ನೀಡುವ ಗುರಿಯನ್ನು ಹೊಂದಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕನ್ಸಲ್ಟೆಂಟ್ ಸರ್ಜಿಕಲ್ ಆಂಕೋಲಜಿಸ್ಟ್ ಡಾ.ರಕ್ಷಿತ್ ಶೃಂಗೇರಿ ಇದ್ದರು.

ಮೈಸೂರು ಪಾಲಿಕೆಯಿಂದ ಸ್ವಚ್ಛತೆ ಆಧರಿಸಿದ ಚಿತ್ರಕಲಾ ಸ್ಪರ್ಧೆ

ಶಾಲಾ ಮಕ್ಕಳ ಆಕರ್ಷಕ ಕಲಾಕೃತಿಗೆ ಪ್ರಶಂಸೆ


ಮನೆಯಲ್ಲಿನ ತ್ಯಾಜ್ಯಗಳಿಂದ ತಯಾರಿಸಿದ್ದ ಕಲಾಕೃತಿ ಪ್ರದರ್ಶಿಸಿದ ಮಕ್ಕಳು.

ಮೈಸೂರು, ಜ.23(ಎಂಟಿವೈ)–'ಸ್ವಚ್ಛ ಭಾರತ ಅಭಿಯಾನ 2.0' ಹಾಗೂ 'ಸ್ವಚ್ಛ ಸರ್ವೇಕ್ಷಣಾ 2025–26'ರ ಅಂಗವಾಗಿ ಮೈಸೂರಿನ ಪುರಭವನದ ಆವರಣದಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆ ಹಾಗೂ ತ್ಯಾಜ್ಯದಿಂದ ರೂಪಿಸಿದ್ದ ಕಲಾಕೃತಿಗಳ ಪ್ರದರ್ಶನದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ಸ್ವಚ್ಛತಾ ಪ್ರಜ್ಞೆ ಮೆರೆಸಿದರು.

ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ ಈ ಚಿತ್ರಕಲಾ ಸ್ಪರ್ಧೆ, ಪೋಸ್ಟರ್ ಮೇಕಿಂಗ್ ಮತ್ತು 'ವೇಸ್ಟ್ ಟು ಆರ್ಟಿಫ್ಯಾಕ್' ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪರಿಸರ ಸಂರಕ್ಷಣೆ, ಘನತ್ಯಾಜ್ಯ ನಿರ್ವಹಣೆ, ಮನೆ ಮನೆಯಿಂದ ಕಸ ಸಂಗ್ರಹ, ಪೌರಕಾರ್ಮಿಕರ ಶ್ರಮ, ಎಲ್ಲೆಂದರಲ್ಲಿ ಕಸ ಸುರಿಯುವವರ ಚಿತ್ರಣ, ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮ, ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಸೇರಿದಂತೆ ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳು ಸ್ಥಳದಲ್ಲೇ ಚಿತ್ರ ರಚಿಸಿ ಗಮನ ಸೆಳೆದರೆ, ಮತ್ತಷ್ಟು ವಿದ್ಯಾರ್ಥಿಗಳು 'ತ್ಯಾಜ್ಯದಿಂದ ಕಲಾಕೃತಿ' ತಯಾರಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡು ಮನೆಯಲ್ಲಿನ ತ್ಯಾಜ್ಯವನ್ನು ಬಳಸಿ ತಯಾರಿಸಿದ ಕಲಾಕೃತಿಗಳನ್ನು ಪ್ರದರ್ಶಿಸಿ ಪ್ರಶಂಸೆಗೆ ಪಾತ್ರರಾದರು.

ಈ ವೇಳೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಸ್ಪರ್ಧೆಗೆ ದೊಡ್ಡ ಮಟ್ಟದ ಸ್ಪಂದನೆ ದೊರೆತಿದೆ. ಮುಂದಿನ ಪೀಳಿಗೆಯಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸುವಲ್ಲಿ ಪಾಲಿಕೆಯ ಈ ಪ್ರಯತ್ನ ಯಶಸ್ವಿಯಾಗಿದೆ. 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ (ಎಇಇ) ಮೀನಾಕ್ಷಿ, ಪರಿಸರ ಅಭಿಯಂತರರಾದ ಮಹಾದೇವಮ್ಮ, ನವೀನ್, ಜ್ಯೋತಿ, ಲೋಕೇಶ್ವರಿ, ಕೃಷ್ಣಮೂರ್ತಿ ಹಾಗೂ ಶ್ರೀದೇವಿ, ಆರೋಗ್ಯ ನಿರೀಕ್ಷಕರು ಸೇರಿದಂತೆ ಪಾಲಿಕೆಯ ಸಿಬ್ಬಂದಿ ಭಾಗವಹಿಸಿದ್ದರು.

ತ್ಯಾಜ್ಯದಿಂದ ಕಲಾಕೃತಿ: ಈ ಸ್ಪರ್ಧೆಯಲ್ಲಿ ಬೇಡನ್ ಪೊವೆಲ್ ಪಬ್ಲಿಕ್ ಶಾಲೆಯ ಮೂರನೇ ತರಗತಿ ವಿದ್ಯಾರ್ಥಿ ಬಿ.ಪ್ರನರದತ್ತ ಪ್ರಥಮ, ಶ್ರೀರಾಂಪುರದ ಬಿಜಿಎಸ್ ಶಾಲೆಯ 9ನೇ ತರಗತಿಯ ಶ್ರೀಕಾಂತ್ ದ್ವಿತೀಯ, ಸೆಂಟ್ ಥಾಮಸ್ ಶಾಲೆಯ 9ನೇ ತರಗತಿಯ ಅಮೂಲ್ಯ ತೃತೀಯ ಬಹುಮಾನ ಪಡೆದರು.

ಪೋಸ್ಟರ್ ಮೇಕಿಂಗ್: ಸ್ಪರ್ಧೆಯಲ್ಲಿ ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್ 8ನೇ ತರಗತಿಯ ಹೆಚ್.ಪಿ.ಪಾವನಿ ಪ್ರಥಮ, ಐಡಿಯಲ್ ಜಾವಾ ರೋಟರಿ ಶಾಲೆಯ 8ನೇ ತರಗತಿಯ ಎಂ.ಚಾರುಮಿತ್ರ ದ್ವಿತೀಯ, ಸಿದ್ಧಾರ್ಥನಗರದ ಜೆ.ಎಸ್.ಎಸ್ ಪಬ್ಲಿಕ್ ಶಾಲೆಯ 4ನೇ ತರಗತಿಯ ಹೆಚ್. ಮಂಜುಶ್ರೀ ತೃತೀಯ ಬಹುಮಾನ ತನ್ನದಾಗಿಸಿಕೊಂಡರು. ಇದರೊಂದಿಗೆ 20 ಮಂದಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ವಿಶೇಷ ಚೇತನ ಸ್ಪರ್ಧಿಗಳು: ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ವಿಶೇಷ ಚೇತನ ವಿದ್ಯಾರ್ಥಿಗಳಾದ ರೀಬಾರ್ನ್ ಫೌಂಡೇಶನ್ ಸ್ಪೆಷಲ್ ಸ್ಕೂಲ್ ಅಂಡ್ ಡೇ ಕೇರ್ ಫಾರ್ ಸ್ಪೆಷಲ್ ಚಿಲ್ಡ್ರನ್ ವಿದ್ಯಾರ್ಥಿಗಳು ಗಮನಸೆಳೆದರು. ವಿಶೇಷ ಚೇತನ ಮಕ್ಕಳನ್ನು ಒಳಗೊಂಡ, ವಿಶೇಷ ವಿಭಾಗ ಮಾಡಿ, ಮೂರು ಬಹುಮಾನಗಳನ್ನು ನೀಡಿ ಅವರನ್ನು ಉತ್ತೇಜಿಸಲಾಯಿತು. ಪ್ರಥಮ ಬಹುಮಾನ 5ನೇ ತರಗತಿಯ ಕುಸುಮಾ, 2ನೇ ತರಗತಿ ಕೆ.ಪವನ ದ್ವಿತೀಯ ಬಹುಮಾನ ಹಾಗೂ 1ನೇ ತರಗತಿಯ ತುಷಾರ್ ಗೌಡ ತೃತೀಯ ಬಹುಮಾನ ಪಡೆದುಕೊಂಡರು.

ದೇಶ – ವಿದೇಶ

ಕೋಟಿ ಬಹುಮಾನ ಹೊತ್ತಿದ್ದ ಪ್ರಭಾವಿ ಸೇರಿ 15 ಮಾವೋವಾದಿಗಳ ಹತ್ಯೆ

ರಾಂಚಿ: ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ



ಸಾರಂಡ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ನಡೆಸಿದ ಭೀಕರ ಎನ್‌ಕೌಂಟರ್‌ನಲ್ಲಿ ಸಿಪಿಐ (ಮಾವೋವಾದಿ) ಕೇಂದ್ರ ಸಮಿತಿ ಸದಸ್ಯ ಹಾಗೂ ಒಂದು ಕೋಟಿ ರೂಪಾಯಿ ಬಹುಮಾನ ಹೊತ್ತಿದ್ದ ಪ್ರಭಾವಿ ನಾಯಕ ಅನಲ್ ದಾ ಸೇರಿ ಒಟ್ಟು 15 ಮಾವೋವಾದಿಗಳನ್ನು ಹತ್ಯೆ ಮಾಡಲಾಗಿದೆ.

ಅನಲ್ ದಾ ಅಲಿಯಾಸ್ ಪತಿರಾಮ್ ಮಾಂಜಿ ನೇತೃತ್ವದ ಮಾವೋವಾದಿಗಳ ತಂಡವು ದೊಡ್ಡ ಮಟ್ಟದ ದಾಳಿಗೆ ಸಂಚು ರೂಪಿಸುತ್ತಿದೆ ಎಂಬ ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ಕೈಗೊಂಡಿದ್ದವು. ಗುರುವಾರ ಬೆಳಗ್ಗೆ ಎನ್‌ಕೌಂಟರ್ ಆರಂಭಿಸಿದ ಕೋಬ್ರಾ, ಜಾರ್ಖಂಡ್ ಜಾಗ್ವಾರ್ ಮತ್ತು ಸಿಆರ್‌ಪಿಎಫ್ ತಂಡಗಳು ಸುದೀರ್ಘ ಗುಂಡಿನ ಚಕಮಕಿ ನಡೆಸಿದವು. ಶೋಧ ಕಾರ್ಯದಲ್ಲಿ 15 ಮೃತದೇಹಗಳ ಜೊತೆಗೆ ಎಕೆ–47, ಇನ್ಸಾಸ್ ರೈಫಲ್, ಎಸ್‌ಎಲ್‌ಆರ್ ಮತ್ತು ನೂರಾರು ಸುತ್ತು ಗುಂಡುಗಳನ್ನು ಒಳಗೊಂಡಂತೆ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಐಜಿ(ಕಾರ್ಯಾಚರಣೆ) ಮೈಕೆಲ್ ರಾಜ್ ತಿಳಿಸಿದ್ದಾರೆ.

ಜೈಲುಹಕ್ಕಿಗಳ ದಾಂಪತ್ಯಕ್ಕೆ ಪೆರೋಲ್ ಮಂಜೂರು

ಜೈಪುರ: ಮಹತ್ವದ ಬೆಳವಣಿಗೆಯಲ್ಲಿ ರಾಜಸ್ಥಾನದಲ್ಲಿ



ಇಬ್ಬರು ಕೊಲೆ ಅಪರಾಧಿಗಳಿಗೆ ಮದುವೆಯಾಗಲು ನ್ಯಾಯಾಲಯ ಪೆರೋಲ್ ನೀಡಿದೆ. ಎರಡು ಪ್ರತ್ಯೇಕ ಕೊಲೆ ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಪ್ರಿಯಾ ಸೇಥ್ ಮತ್ತು ಹನುಮಾನ್ ಪ್ರಸಾದ್ ಅಲಿಯಾಸ್ ಜ್ಯಾಕ್‌ಗೆ ಕೋರ್ಟ್ ಪೆರೋಲ್ ನೀಡಿದ್ದು, ಈ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ.

ತೆರೆದ ಜೈಲಿನಲ್ಲಿದ್ದಾಗಲೇ ಪ್ರೀತಿಯ ಬಲೆಗೆ ಸಿಲುಕಿದ್ದರು. ರಾಜಸ್ಥಾನ ಹೈಕೋರ್ಟ್‌ನ ಹಸ್ತಕ್ಷೇಪದ ನಂತರ, ಜಿಲ್ಲಾ ಪೆರೋಲ್ ಸಲಹಾ ಸಮಿತಿಯು ಅವರಿಗೆ 15 ದಿನಗಳ ಪೆರೋಲ್ ನೀಡಿದ್ದು, ಅಲ್ವಾರ್ ಜಿಲ್ಲೆಯ ಬರೋಡಾ ಮೇವ್ ಗ್ರಾಮದಲ್ಲಿರುವ ಹನುಮಾನ್ ಅವರ ಪೂರ್ವಜರ ಮನೆಯಲ್ಲಿ ಮದುವೆ ನಿಗದಿಯಾಗಿದೆ. ಜೈಪುರ ಕೇಂದ್ರ ಜೈಲಿನಲ್ಲಿದ್ದ ಪ್ರಿಯಾ ಸೇಥ್ ಮತ್ತು ಹನುಮಾನ್ ಪ್ರಸಾದ್ ಇಬ್ಬರೂ ವರ್ಷದ ಹಿಂದೆ ಓಪನ್ ಏರ್ ಕ್ಯಾಂಪ್ ನಿಯಮಗಳಡಿ ತೆರೆದ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಇಲ್ಲಿ ಪ್ರೇಮಾಂಕುರವಾಗಿ ಕಳೆದ ಕೆಲವು ತಿಂಗಳುಗಳಿಂದ ಲಿವ್–ಇನ್ ಸಂಬಂಧದಂತೆ ಒಟ್ಟಿಗೆ ವಾಸಿಸುತ್ತಿದ್ದರು.

ಕಲುಷಿತ ನೀರು ಸೇವಿಸಿ 22 ಮಂದಿ ಅಸ್ವಸ್ಥ; ಇ–ಕೋಲಿ ಬ್ಯಾಕ್ಟೀರಿಯಾ ಆತಂಕ

ಇಂದೋರ್: ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಲುಷಿತ



ನೀರು ಕುಡಿದು ಹಲವರು ಮೃತಪಟ್ಟ ಘಟನೆ ಬೆನ್ನಲ್ಲೇ ಇದೇ ಕಾರಣದಿಂದ 22 ಜನರು ಅಸ್ವಸ್ಥಗೊಂಡಿರುವುದು ಬೆಳಕಿಗೆ ಬಂದಿದೆ. ಡಾ.ಅಂಬೇಡ್ಕರ್ ನಗರ ಅಥವಾ ಮ್ಹೌ ಎಂಬ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಕಲುಷಿತ ನೀರು ಸೇವಿಸಿದವರು ವಾಂತಿ ಮತ್ತು ಭೇದಿಯಿಂದ ಬಳಲುತ್ತಿದ್ದಾರೆ. 9 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದವರಿಗೆ ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಮನೆಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಪಕ್ಕದ ಪ್ರದೇಶಗಳಿಂದಲೂ ಇಂತಹ ಪ್ರಕರಣಗಳು ವರದಿಯಾಗುತ್ತಿರುವುದರಿಂದ ಅಸ್ವಸ್ಥರ ಸಂಖ್ಯೆ 25 ದಾಟುವ ಸಾಧ್ಯತೆಯಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಕುಡಿಯುವ ನೀರಿನಲ್ಲಿ ಬ್ಯಾಕ್ಟೀರಿಯಾ ಹರಡಿದ್ದರಿಂದ ಈ ಸೋಂಕು ತಗುಲಿದೆ. ಭಾಗೀರಥಪುರದ 51 ಕೊಳವೆ ಬಾವಿಗಳ ನೀರಿನ ಮಾದರಿಗಳನ್ನು ಪರೀಕ್ಷಿಸಿದಾಗ ಅದರಲ್ಲಿ ಅಪಾಯಕಾರಿ 'ಇ–ಕೋಲಿ' ಹೆಸರಿನ ಬ್ಯಾಕ್ಟೀರಿಯಾ ಇರುವುದು ದೃಢಪಟ್ಟಿದೆ ಎನ್ನಲಾಗುತ್ತಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರವು, ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಆದರೆ, ಇದು ಹಿರಿಯ ಅಧಿಕಾರಿಗಳನ್ನು ರಕ್ಷಿಸಲು ಹೂಡಿರುವ ಕಣ್ಣೊರೆಸೊ ತಂತ್ರ ಎಂದು ಅರ್ಜಿದಾರರು ಹೈಕೋರ್ಟ್‌ನಲ್ಲಿ ವಾದಿಸಿದ್ದಾರೆ. ಈ ಮಧ್ಯೆ, ಮೃತಪಟ್ಟ ಸಂತ್ರಸ್ತರ ಕುಟುಂಬಗಳಿಗೆ ಸರ್ಕಾರ ತಲಾ 2 ಲಕ್ಷ ರೂ. ಪರಿಹಾರ ವಿತರಿಸಿದೆ.

ತಂದೆ ಬಂಧನಕ್ಕೆ ಐದು ವರ್ಷದ ಬಾಲಕ ವಶ; ವ್ಯಾಪಕ ಆಕ್ರೋಶ

ವಾಷಿಂಗ್ಟನ್: ಮಿನ್ನೇಸೋಟದಲ್ಲಿ ಪ್ರಿ–ಸ್ಕೂಲ್‌ನಿಂದ



ಮನೆಗೆ ಮರಳುತ್ತಿದ್ದ 5 ವರ್ಷದ ಬಾಲಕನನ್ನು ಫೆಡರಲ್ ವಲಸೆ ಅಧಿಕಾರಿಗಳು ಬಂಧನಕ್ಕೊಳಪಡಿಸಿದ್ದಾರೆ ಈ ಕುರಿತ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಅಧಿಕಾರಿಗಳ ನಡೆಗೆ ಆಕ್ರೋಶ ವ್ಯಕ್ತವಾಗುತ್ತಿವೆ.

ಶಾಲೆಯಿಂದ ಮನೆಗೆ ಮರಳುತ್ತಿದ್ದ 5 ವರ್ಷದ ಲಿಯಾಮ್ ಕೊನೆಜೊ ರಾಮೋಸ್ ಎಂಬ ಬಾಲಕನನ್ನು ಮಿನ್ನೇಸೋಟದ ಆತನ ಮನೆಯ ಸಮೀಪದಲ್ಲೇ ಇಮಿಗ್ರೇಷನ್ ಅಯಂಡ್ ಕಸ್ಟಮ್ಸ್ ಎನ್‌ಫೋರ್ಸ್‌ಮೆಂಟ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಆತನ ತಂದೆಯನ್ನು ಬಂಧಿಸಲು ಬಾಲಕನನ್ನು ಒತ್ತೆಯಾಳುವಾಗಿ ಬಳಸಲಾಗಿದೆ ಎಂದು ಶಾಲಾ ಅಧಿಕಾರಿಗಳು ಆರೋಪಿಸಿದ್ದಾರೆ.

ಇದೀಗ ಬಾಲಕ ಮತ್ತು ಆತನ ತಂದೆಯನ್ನು ಟೆಕ್ಸಾಸ್‌ನ ಅಕ್ರಮ ವಲಸಿಗರ ಕೇಂದ್ರದಲ್ಲಿ ಇರಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಘಟನೆಯ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಭಾರಿ ಆಕ್ರೋಶಕ್ಕೆ ಕಾರಣವಾಗಿವೆ. ಇದು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಹಲವರು ಟೀಕಿಸಿದ್ದಾರೆ. ಆದರೆ, ಹೋಂಲ್ಯಾಂಡ್ ಸೆಕ್ಯುರಿಟಿ ಇಲಾಖೆ ವಕ್ತಾರೆ ಟ್ರಿಶಿಯಾ ಮ್ಯಾಕ್ಲಾಫ್ಲಿನ್, ಅಧಿಕಾರಿಗಳು ಮಗುವನ್ನು ಒತ್ತೆಯಾಗಿರಿಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಬಂದ ಅಮೆರಿಕಾ

ವಾಷಿಂಗ್ಟನ್: ಈ ಹಿಂದೆ ಕೋವಿಡ್ ಸಾಂಕ್ರಾಮಿಕದ



ಬಳಿಕ ವಿಶ್ವ ಆರೋಗ್ಯ ಸಂಸ್ಥೆಯ ವಿರುದ್ಧ ನಿರಂತರ ವಾಗ್ದಾಳಿ ನಡೆಸಿಕೊಂಡು ಬಂದಿದ್ದ ಅಮೆರಿಕ ಇಂದು ಅಂತಿಮವಾಗಿ ಅದರ ಸದಸ್ಯತ್ವದಿಂದ ಹೊರಗೆ ಬಂದಿದ್ದು, ತನ್ನ ಸದಸ್ಯತ್ವವನ್ನು ಅಧಿಕೃತವಾಗಿ ರದ್ದುಗೊಳಿಸಿದೆ. ಅಮೆರಿಕ ನಿರ್ಧಾರದ ಬಳಿಕ ಜಿನಿವಾದಲ್ಲಿರುವ ಡಬ್ಲ್ಯೂಹೆಚ್‌ಓ ಕಚೇರಿಯಲ್ಲಿ ಅಮೆರಿಕದ ಧ್ವಜ ತೆರವು ಮಾಡಲಾಗಿದೆ

ರೋಗಗಳ ಕಣ್ಗಾವಲು ಮತ್ತು ನಿರ್ಣಾಯಕ ಆರೋಗ್ಯ ಸವಾಲುಗಳಂತಹ ವಿಷಯಗಳ ಕುರಿತು ಇತರ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಹಕಾರಕ್ಕೆ ಅಮೆರಿಕ ಆದ್ಯತೆ ನೀಡುತ್ತದೆ. ಆದರೆ ವಿಶ್ವ ಆರೋಗ್ಯ ಸಂಸ್ಥೆಯ ವೀಕ್ಷಕನಾಗಿಯೂ ಮುಂದುವರಿಯಲ್ಲ ಎಂದ ಆರೋಗ್ಯ ಇಲಾಖೆ ತಿಳಿಸಿದೆ. ಆದರೆ 2024 ಮತ್ತು 2025ರ ಸದಸ್ಯತ್ವ ಶುಲ್ಕದಲ್ಲಿ ಅಮೆರಿಕ ಇನ್ನೂ ಸುಮಾರು 260 ಮಿಲಿಯನ್ ಡಾಲರ್‌ಗಳನ್ನು ಬಾಕಿ ಉಳಿಸಿಕೊಂಡಿದ್ದು, ಬಾಕಿ ಪಾವತಿಸದೆ, ಸಂಪೂರ್ಣ ಬೇರ್ಪಡಿಕೆ ಸಾಧ್ಯವಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ವಕ್ತಾರರು ತಿಳಿಸಿದ್ದಾರೆ.

ಚೀನಾದ ವುಹಾನ್‌ನಲ್ಲಿ ಉದ್ಭವಿಸಿದ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ವಿಶ್ವ ಆರೋಗ್ಯ ಸಂಸ್ಥೆ ತಪ್ಪಾಗಿ ನಿರ್ವಹಿಸಿದೆ. ತುರ್ತಾಗಿ ಅಗತ್ಯವಿರುವ ಸುಧಾರಣೆಗಳನ್ನು ಅಳವಡಿಸಿಕೊಳ್ಳುವಲ್ಲಿ ವಿಫಲವಾಗಿದೆ. ಕಳೆದ ವರ್ಷ ಜನವರಿ 20ರಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವ ಆರೋಗ್ಯ ಸಂಸ್ಥೆ ತೊರೆಯುವ ಯೋಜನೆಯನ್ನು ಘೋಷಿಸಿ, ಆ ನಿಟ್ಟಿನಲ್ಲಿ ಪ್ರಕ್ರಿಯೆ ಆರಂಭಿಸಿದ್ದರು.

ಮೈಸೂರು ಮಿತ್ರ ಶನಿವಾರ 24 ಜನವರಿ 2026

ಜಮ್ಮಾ ಬಾಣೆ ಸಮಸ್ಯೆಗೆ ಜನರ ಹಾದಿ ತಪ್ಪಿಸುತ್ತಿರುವ ಕಾಂಗ್ರೆಸ್

ಕೆ.ಜಿ.ಬೋಪಯ್ಯ ಆರೋಪ



ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು

ಮಡಿಕೇರಿ,ಜ.23– ಜಮ್ಮಾ ಬಾಣೆ ಸಮಸ್ಯೆಗೆ ಸಂಬಂಧಿಸಿದಂತೆ ಬಿಜೆಪಿಯ ವಿರುದ್ಧ ಅಸಂಬದ್ಧ ಹೇಳಿಕೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಪ್ರಮುಖರು ಜನರ ಹಾದಿ ತಪ್ಪಿಸುವ ಪ್ರಯತ್ನಕ್ಕೆ ಇಳಿದಿದ್ದಾರೆ. ಇದರ ಬದಲಾಗಿ ತಿದ್ದುಪಡಿ ವಿಧೇಯಕಕ್ಕೆ ಅಗತ್ಯ ನಿಯಮಗಳನ್ನು ರೂಪಿಸಿ ಮತ್ತು ಸಮಸ್ಯೆ ಬಗೆಹರಿಕೆಗೆ ಅನುಕೂಲಕರವಾಗಿರುವ ಬಿಜೆಪಿ ಅವಧಿಯಲ್ಲಿ ಆರಂಭಿಸಿದ್ದ 'ಪೌತಿ ಖಾತೆ ಆಂದೋಲನ' ಮುಂದುವರೆಸುವಂತೆ ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಆಗ್ರಹಿಸಿದ್ದಾರೆ.

ಜಮ್ಮಾಬಾಣೆ ಸಮಸ್ಯೆಯ ಶೇ.90ರಷ್ಟನ್ನು ಬಿಜೆಪಿ ಅಧಿಕಾರದ ಅವಧಿಯಲ್ಲೇ ಬಗೆಹರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇಂದಿನ ಕಾಂಗ್ರೆಸ್ ಸರ್ಕಾರ, ಅದರ ಲಾಭ ಬಿಜೆಪಿಗೆ ಹೋಗುತ್ತದೆ ಎಂದು ಕೇವಲ ರಾಜಕೀಯ ಕಾರಣಗಳಿಗಾಗಿ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದೆ. ಇದನ್ನು ಮುಂದುವರೆಸಿದಲ್ಲಿ ತಕ್ಕ ಉತ್ತರವನ್ನು ನೀಡಲು ಬಿಜೆಪಿ ಸಮರ್ಥವಾಗಿದೆ ಎಂದು ಸ್ಪಷ್ಟಪಡಿಸಿದರು. ಶಾಸಕ ಎ.ಎಸ್.ಪೊನ್ನಣ್ಣ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಬರುವಂತೆ ಸವಾಲು ಹಾಕಿರುವುದನ್ನು ಈಗಾಗಲೆ ಸ್ವೀಕರಿಸಿದ್ದೇವೆ. ಇನ್ನಾದರೂ ಅವರು ಸಭೆಯನ್ನು ನಿಗಧಿಪಡಿಸಲಿ, ಅದರಲ್ಲಿ ಪಾಲ್ಗೊಳ್ಳಲು ನಾವು ಸಿದ್ಧವಾಗಿದ್ದೇವೆ ಎಂದವರು ಮತ್ತೊಮ್ಮೆ ಸವಾಲೊಡ್ಡಿದರು.

ಅನಗತ್ಯ ಹೇಳಿಕೆ ಏತಕ್ಕೆ?: 2012ರಲ್ಲಿ ರಾಷ್ಟ್ರಪತಿಗಳ ಅಂಕಿತವಾಗಿ ಬಂದ ಜಮ್ಮಾ ಬಾಣೆ ವಿಧೇಯಕವನ್ನು ಜಾರಿಗೊಳಿಸಬಾರದು ಎಂದು ಸಲ್ಲಿಕೆಯಾಗಿದ್ದ 4 ರಿಟ್ ಪೆಟಿಷನ್‌ಗಳನ್ನು 2024ರಲ್ಲಿ ವಜಾಗೊಳಿಸಿದ ರಾಜ್ಯ ಉಚ್ಚ ನ್ಯಾಯಾಲಯ, ಸಮಸ್ಯೆ ಬಗೆಹರಿದ ತೀರ್ಪನ್ನು 30ದಿನಗಳಲ್ಲಿ ಜಾರಿಗೊಳಿಸುವಂತೆ ನೀಡಿದ್ದ ನ್ಯಾಯಾಲಯದ ಆದೇಶವನ್ನು ಪಾಲಿಸದೆ, ಜಮ್ಮಾ ಬಾಣೆ ಸಮಸ್ಯೆ ಇತ್ಯರ್ಥಕ್ಕೆ ತಂದ ಕಂದಾಯ ಕಾಯ್ದೆ ತಿದ್ದುಪಡಿಗಳನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಕಂದಾಯ ಕಾಯ್ದೆ ಸೆಕ್ಷನ್ 127ಕ್ಕೆ ತಿದ್ದುಪಡಿ ತಂದಿರುವುದಾಗಿ ಶಾಸಕ ಪೊನ್ನಣ್ಣ ತಿಳಿಸಿದ್ದಾರೆ. ಆದರೆ, ಇವರು ತಂದ ತಿದ್ದುಪಡಿಯ ಟಿಪ್ಪಣಿಯಲ್ಲಿ ರಿಟ್ ಅರ್ಜಿಯ ನಿರ್ದೇಶನದ ಬಗ್ಗೆ ಪ್ರಸ್ತಾಪವಿಲ್ಲ ಮತ್ತು ನ್ಯಾಯಿಕ ಘೋಷಣೆಗಳ ನಿಟ್ಟಿನಲ್ಲಿ ಎಂದು ಮಾತ್ರ ಉಲ್ಲೇಖಿಸಲಾಗಿದೆ. ತಿದ್ದುಪಡಿ ವಿಧೇಯಕದ ಪೀಠಿಕೆಯಲ್ಲೆ ಇಲ್ಲದ ಅಂಶದ ಹೇಳಿಕೆಯನ್ನು ಶಾಸಕರು ನೀಡಿದ್ದು ಹೇಗೆ ಎಂದು ಬೋಪಯ್ಯ ಪ್ರಶ್ನಿಸಿದರು.

ಜಿಲ್ಲೆಯಲ್ಲಿನ ಪೌತಿ ಖಾತೆ ಸಮಸ್ಯೆ ಇತ್ಯರ್ಥಕ್ಕೆ ಬಿಜೆಪಿ ಅವಧಿಯಲ್ಲಿ 2020 ಅ.17ರಂದೇ ಪೌತಿ ಖಾತೆ ಆಂದೋಲನವನ್ನು ಆರಂಭಿಸಲಾಗಿತ್ತು. ಇದನ್ನು 2023ರಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ನಿಲ್ಲಿಸಿದೆ. ಈ ಪೌತಿ ಖಾತೆ ಆಂದೋಲನವನ್ನು ಮತ್ತೆ ಆರಂಭಿಸುವಂತೆ ಆಗ್ರಹಿಸಿದರು.

ಕಡತಕ್ಕೆ ಸೇರಿರುವ 'ಏಜೆಂಟ್': ಜಮ್ಮಾ ಬಾಣೆ ಸಮಸ್ಯೆ ಬಗೆಹರಿಕೆ ಕುರಿತ ವಿಧೇಯಕವನ್ನು ತರುವ ಹಂತದಲ್ಲಿ ವಿಧಾನಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ 'ಪಟ್ಟೆದಾರ' ಎನ್ನುವವರು ಬ್ರಿಟೀಷರ ಏಜೆಂಟ್ ಎಂದು ಹೇಳಿದ್ದಾರೆ. ತಿಳುವಳಿಕೆ ಇಲ್ಲದೆ ಅಂತಹ ಮಾತನ್ನು ಅವರು ಆಡಿರಬಹುದು. ಆದರೆ, ಈ ವಿಚಾರ ಕಡತಕ್ಕೆ ಸೇರಿದೆ. ಆ ಹಂತದಲ್ಲಿ ಈ ಬಗ್ಗೆ ಸ್ಪಷ್ಟ ಮಾಹಿತಿ ಇರುವವರು ಅದನ್ನು ಕಡತದಿಂದ ತೆಗೆಸುವ ಕಾರ್ಯವನ್ನು ಮಾಡಲಿಲ್ಲ ಏಕೆ ಎಂದು ತೀವ್ರವಾಗಿ ಪ್ರಶ್ನಿಸಿದರು.

ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ, ಬಿಜೆಪಿ ಅವಧಿಯಲ್ಲಿ ಜಮ್ಮಾಬಾಣೆ ಸಮಸ್ಯೆಯ ಶೇ.90 ರಷ್ಟನ್ನು ಬಗೆಹರಿಸಲಾಗಿತ್ತು. ಉಳಿದ ಶೇ.10ರಷ್ಟು ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ನಡೆಸುವ ಹಂತದಲ್ಲೆ, ಎಲ್ಲಾ ಸಮಸ್ಯೆ ಬಗೆಹರಿಸಿರುವುದಾಗಿ ಕಾಂಗ್ರೆಸ್ ಮಂದಿ ಡಂಗೂರ ಸಾರಿ ಕುಣಿಯುವ ಕೆಲಸ ಮಾಡುತ್ತಿರುವುದಾಗಿ ವ್ಯಂಗ್ಯವಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್‌ಕುಮಾರ್ ಉಪಸ್ಥಿತರಿದ್ದರು.

'ವಿಬಿ ಜಿ ರಾಮ್ ಜಿ' ಯೋಜನೆಯಲ್ಲಿ ಗ್ರಾ.ಪಂ.ಗಳಿಗೆ ಅಧಿಕಾರ

ಕೇಂದ್ರದ 'ವಿಬಿ ರಾಮ್ ಜಿ' ಯೋಜನೆಯ ಕಾಯ್ದೆಯಲ್ಲಿ ಅತ್ಯಂತ ಸ್ಪಷ್ಟವಾಗಿ ಗ್ರಾಮ ಪಂಚಾಯಿತಿಗಳಿಗೆ ಪೂರ್ಣ ಅಧಿಕಾರವನ್ನು ನೀಡಲಾಗಿದೆ. ಗ್ಯಾರಂಟಿಗಳಿಂದಾಗಿ ಹಣ ಹೊಂದಿಸಲಾಗದ ಕಾಂಗ್ರೆಸ್ ವೃಥಾ ಆರೋಪ ಮಾಡುತ್ತಿದೆ ಎಂದು ಬೋಪಯ್ಯ ದೂರಿದರು. ವಿಬಿ ರಾಮ್ ಜಿ ಕಾಯ್ದೆಯಡಿ ಗ್ರಾ. ಪಂ.ಗಳಿಗೆ, ಗ್ರಾಮ ಸಭೆಗಳಿಗೆ ಕಾಮಗಾರಿಗಳನ್ನು ನಿರ್ಧರಿಸುವ, ಕ್ರಿಯಾ ಯೋಜನೆ ತಯಾರಿಸುವ ಹಕ್ಕನ್ನು ನೀಡಲಾಗಿದೆ ಎಂದು ಕಾಯ್ದೆಯ ಪ್ರತಿಯನ್ನು ಪ್ರದರ್ಶಿಸಿದರು. ಈ ಯೋಜನೆಯಡಿ ಶೇ.40ರ ಹಣ ನೀಡಲು ಸಾಧ್ಯವಾಗದ ಕಾರಣ ಇದನ್ನೇ ಮುಂದಿಟ್ಟು ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಟೀಕಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ಹೆಸರನ್ನು ವಿಬಿ ರಾಮ್ ಜಿ ಎಂದು ಬದಲಿಸಲಾಗಿದೆ. ಮತ್ತೆ ಯೋಜನೆಯಲ್ಲಿ ಮಹಾತ್ಮ ಗಾಂಧಿ ಹೆಸರನ್ನು ಸೇರಿಸಬೇಕು ಎನ್ನುವ ಕಾಂಗ್ರೆಸ್‌ಗೆ, ಬಹುತೇಕ ಯೋಜನೆಗಳಿಗೆ ನೆಹರು, ಇಂದಿರಾ, ರಾಜೀವ್ ಹೆಸರುಗಳನ್ನು ಇಟ್ಟಾಗ ಮಹಾತ್ಮ ಗಾಂಧೀಜಿ ಅವರ ಹೆಸರು ಮರೆತು ಹೋಗಿತ್ತೆ ಎಂದು ಪ್ರಶ್ನಿಸಿದರು.

ಹೊದವಾಡ ಶಾಲೆಯಲ್ಲಿ ಭೇಟಿ ಬಚಾವೋ ಭೇಟಿ ಪಡಾವೋ



ಹೊದವಾಡ ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭೇಟಿ ಬಚಾವೋ ಭೇಟಿ ಪಡಾವೋ ಕಾರ್ಯಕ್ರಮ ನಡೆಯಿತು.

ನಾಪೋಕ್ಲು, ಜ.23 (ದುಗ್ಗಳ) – ಸಮೀಪದ ಹೊದವಾಡ ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭೇಟಿ ಬಚಾವೋ ಭೇಟಿ ಪಡಾವೋ ಕಾರ್ಯಕ್ರಮ ಆಯೋಜಿಸಲಾಗಿತ್ತು .

ಹೊದ್ದೂರು ಗ್ರಾ.ಪಂ. ಅಧ್ಯಕ್ಷ ಎಚ್‌ಎ ಹಂಸ ಅಧ್ಯಕ್ಷತೆ ವಹಿಸಿದ್ದರು. ಮಡಿಕೇರಿ ತಾಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶೀಲಾ ಅಶೋಕ್ ಮಾತನಾಡಿ, ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಓದುವ ವಯಸ್ಸಿನಲ್ಲಿ ಯಾವುದೇ ಆಕರ್ಷಣೆಗಳಿಗೆ ಒಳಗಾಗಬಾರದು. ಮಕ್ಕಳು ಯಾವುದೇ ದೌರ್ಜನ್ಯಕ್ಕೆ ಒಳಗಾದಲ್ಲಿ, ಸಹಾಯವಾಣಿ ಸಂಖ್ಯೆ 1098ಕ್ಕೆ ಕರೆ ಮಾಡಿ ಮಾಹಿತಿ ನೀಡುವಂತೆ ತಿಳಿಸಿದರು.

ಜಿಲ್ಲಾ ಮಹಿಳಾ ಮಿಷನ್ ಶಕ್ತಿ ಸಂಯೋಜಕಿ ಮಮತಾ ಮಾತನಾಡಿ, ಹೆಣ್ಣು ಮಕ್ಕಳಿಗೆ 18 ವರ್ಷ ಗಂಡು ಮಕ್ಕಳಿಗೆ 21ವರ್ಷ ತುಂಬಿದ ಬಳಿಕ ವಿವಾಹ ನೆರವೇರಿಸಬೇಕು ಎಂದರು. ಈ ಯೋಜನೆಯು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ರಕ್ಷಣೆ ನೀಡುವ ಉದ್ದೇಶದಿಂದ ಜಾರಿಗೆ ತರಲಾಗಿದೆ ಎಂದರು.

ಹೊದ್ದೂರು ಗ್ರಾ.ಪಂ ಉಪಾಧ್ಯಕ್ಷೆ ಕುಸುಮಾವತಿ, ಸದಸ್ಯ ಹಮೀದ್, ಗಾ.ಪಂ. ಅಭಿವೃದ್ಧಿ ಅಧಿಕಾರಿ ವತ್ಸಲ, ಮೂರ್ನಾಡು ಕ್ಲಸ್ಟರ್ ಕೇಂದ್ರದ ಸಿ ಆರ್ ಪಿ ಉಷಾ, ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಅಶೋಕ್, ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಎಂ.ಟಿ. ರಾಧಮ್ಮ ಸಹ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ ಸುಮಾ, ತುಳಸಿ, ಶೃತಿ, ಶೋಭಾ, ಅಂಬ್ರಿನ ಮೊದಲಾದವರಿದ್ದರು.

ಕೊಡಗಿನ ವಾಯತ್ತೂರು ಉತ್ಸವಕ್ಕೆ ನಾಂದಿ



ಶ್ರೀ ಆದಿಬೈತೂರಪ್ಪ ದೇವಸ್ಥಾನದಲ್ಲಿ ಅಕ್ಕಿ ಅಳೆಯುವ ಶಾಸ್ತ್ರ ನಡೆಯಿತು.

ವಿರಾಜಪೇಟೆ, ಜ.23–ಕೇರಳದ ಇರಿಟ್ಟಿ ಸಮೀಪದ ಉಳಿಕ್ಕಲ್‌ನ ವಾಯತ್ತೂರು ಕಾಲಿಯಾರ್ (ಕೊಡಗಿನ ಶ್ರೀ ಆದಿ ಬೈತೂರಪ್ಪ) ದೇವಸ್ಥಾನದಲ್ಲಿ ವಾರ್ಷಿಕ ಉತ್ಸವದ ಸಲುವಾಗಿ ಕೊಡಗಿನ ಪುಗ್ಗೆರ ಕುಟುಂಬದ ಎತ್ತು ಪೋರಾಟ್ ಹಾಗೂ ಅಕ್ಕಿ ಅಳೆಯುವ ಶಾಸ್ತ್ರ ನಡೆಯಿತು.

ಊಟು ಹಬ್ಬದ ಅಕ್ಕಿಯನ್ನು ಕೊಡಗಿನಿಂದ ದೇವಸ್ಥಾನಕ್ಕೆ ತರಲಾಯಿತು. ಐತಿಹಾಸಿಕ ಪುಗ್ಗೇರಮನೆಯಿಂದ ಬೈತೂರುವಿಗೆ ಕಾಲಿಯಾರ್ ಊಟು ಉತ್ಸವಕ್ಕಾಗಿ ಅಕ್ಕಿ ತರ ಲಾಗುತ್ತದೆ. ದೇವಸ್ಥಾನದಲ್ಲಿ ಅಕ್ಕಿ ಹಾಗೂ ಎತ್ತುಗಳೊಂದಿಗೆ ಆಗಮಿಸಿದ ಕೊಡವರನ್ನು ಸಂಪ್ರದಾಯದಂತೆ ಬರ ಮಾಡಿಕೊಂಡು, ಅಲ್ಲಿಂದ ತಂದ ಅಕ್ಕಿಯನ್ನು ಅಳೆದ ಬಳಿಕ ಕೊಡಗು–ಮಲೆಯಾಳರ ಅಪರೂಪದ ಸಂಗಮವಾಗಿರುವ ವಾಯತ್ತೂರು ಉತ್ಸವ ಆರಂಭವಾಯಿತು.

ದೇವಾಲಯದ ತಕ್ಕರಾದ ಪುಗ್ಗೇರ ಪೊನ್ನಪ್ಪ ಮಾತನಾಡಿ, ದೇವಾಲಯಕ್ಕೆ ವರ್ಷಂಪ್ರತಿಯಂತೆ ತಮ್ಮ ಹಿರಿಯರ ಕಾಲದಿಂದಲೂ ಪುಗ್ಗೆರ ಕುಟುಂಬದವರಿಂದ ನಡೆಸಿ ಕೊಂಡು ಬರುತ್ತಿದ್ದ ಪದ್ಧತಿಯಂತೆ ಎತ್ತ್ ಪೋರಾಟ್, ಅಕ್ಕಿ ಅಳೆಯುವ ಶಾಸ್ತ್ರವನ್ನು ಮಾಡಿದ್ದೇವೆ. ಇದೀಗ ನಮ್ಮ ಕೊಡಗಿನ ಹಬ್ಬ ಪ್ರಾರಂಭವಾಗಿದೆ ಎಂದರು.

ಫಲಪುಷ್ಪ ಪ್ರದರ್ಶನಕ್ಕೆ ಸಜ್ಜಾಗಿರುವ ರಾಜಾಸೀಟ್



ಅಂತಿಮ ಸಿದ್ದತೆಯಲ್ಲಿ ಶ್ರೀ ಭಗಂಡೇಶ್ವರ ದೇವಸ್ಥಾನದ ಕಲಾಕೃತಿ

ಮಡಿಕೇರಿ, ಜ.23–ಗಣರಾಜ್ಯೋತ್ಸವದ ಅಂಗವಾಗಿ ಪ್ರತಿ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ ನಗರದ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟಿನ ಉದ್ಯಾನವನ ಸರ್ವಸಜ್ಜಾಗಿದ್ದು, ಪ್ರವಾಸಿಗರು ಮತ್ತು ಸ್ಥಳೀಯ ಜನತೆಯನ್ನು ಆಕರ್ಷಿಸುವತ್ತ ಸನ್ನದ್ಧಗೊಂಡಿದೆ.


ಈ ಬಾರಿಯ ಫಲಪುಷ್ಪ ಪ್ರದರ್ಶನ ಜ.24 ರಿಂದ 26ರ ವರೆಗೆ ನಡೆಯಲಿದ್ದು, 16 ವಿವಿಧ ರೀತಿಯ ಹೂವಿನ ಕಲಾಕೃತಿಗಳನ್ನು ಒಟ್ಟು 8ರಿಂದ 10 ಲಕ್ಷ ಸಂಖ್ಯೆಯ ಸೇವಂತಿಗೆ, ಆರ್ಕಿಡ್, ಡೆಸ್ಸಿ ಹಾಗೂ ವಿವಿಧ ಹೂವುಗಳಿಂದ ಅಲಂಕರಿಸಿ ಅಂತಿಮ ಹಂತದಲ್ಲಿ ಸಿದ್ಧತಾ ಕಾರ್ಯವಾಗುತ್ತಿದೆ.

ಫಲಪುಷ್ಪ ಪ್ರದರ್ಶನದ ವಿಶೇಷವಾಗಿ ಪ್ರಸಿದ್ದ ಶ್ರೀ ಭಗಂಡೇಶ್ವರ ದೇವಸ್ಥಾನದ ಕಲಾಕೃತಿಯನ್ನು ನಿರ್ಮಿಸಲಾಗುತ್ತಿದೆ. 33 ಅಡಿ ಎತ್ತರ, 18 ಅಡಿ ಉದ್ದ, 23 ಅಡಿ ಅಗಲದಲ್ಲಿ ವಿವಿಧ ಬಣ್ಣಗಳ ಗುಲಾಬಿ, ಸೇವಂತಿಗೆ, ಆಸ್ಟರ್ ಜಾತಿಯ ಹೂವುಗಳಿಂದ ನಿರ್ಮಾಣ ಮಾಡಲಾಗುತ್ತಿದೆ. ಕಲಾಕೃತಿಯು ಅಂತಿಮ ಹಂತದ ಕೆಲಸಗಳು ಸಾಗುತ್ತಿದ್ದು, ಹತ್ತಾರು ನುರಿತ ಕಾರ್ಮಿಕರು ಇದರಲ್ಲಿ ತೊಡಗಿ ಕೊಂಡಿದ್ದಾರೆ. ಕರ್ನಾಟಕ ಏಕೀಕರಣದ ಸಂಕೇತವಾಗಿ ಕನ್ನಡ ಅಕ್ಷರಗಳ ಕಲಾಕೃತಿಗಳನ್ನು 2.5 ಅಡಿ ಮತ್ತು 2 ಅಡಿ ಎತ್ತರದಲ್ಲಿ 4 ಕಲಾಕೃತಿಗಳು ಮತ್ತು 4.5 ಅಡಿ ಮತ್ತು 4 ಅಡಿ ಎತ್ತರದಲ್ಲಿ 2 ಕಲಾಕೃತಿಗಳನ್ನು ವಿವಿಧ ಬಣ್ಣಗಳ ಗುಲಾಬಿ, ಸೇವಂತಿಗೆ, ಆಸ್ಟರ್ ಹೂಗಳಿಂದ ನಿರ್ಮಾಣ ಮಾಡಲಾಗುತ್ತಿದೆ.

ಸಂಗೀತ ಕಲಾಕೃತಿಗಳಾದ ತಬಲಾ, ಪಿಯಾನೊ, ಹರ್ಪ್ ಕಲಾಕೃತಿಗಳನ್ನು ವಿವಿಧ ಬಣ್ಣಗಳ ಹೂವುಗಳಿಂದ ಅಲಂಕರಿಸಿ ನಿರ್ಮಾಣ ಮಾಡಲಾಗುತ್ತಿದೆ. ಅಮರ್ ಜವಾನ್ ಕಲಾಕೃತಿಯನ್ನು, ಹಾರುವ ಹಕ್ಕಿ, ಮೀನು, ಬಟರ್‌ಫ್ಲೈ ಕಲಾಕೃತಿಗಳನ್ನು ವಿವಿಧ ಹೂವುಗಳಿಂದ ಅಲಂಕರಿಸಿ ನಿರ್ಮಾಣ ಮಾಡಲಾಗುತ್ತಿದೆ. ಮಕ್ಕಳಿಗೆ ಮನ ರಂಜನೆ ನೀಡುವಂತಹ ಸ್ಪೈಡರ್ ಮ್ಯಾನ್, ಬ್ಲೂವೇ, ಮಿಕ್ಕಿ ಮೌಸ್, ಡೊರೇಮ್ಯಾನ್ ಕಲಾಕೃತಿಗಳು ಮಕ್ಕಳಿಗೆ ಮುದ ನೀಡಲಿವೆ. ಇದರೊಂದಿಗೆ ವಿವಿಧ ಕ್ಷೇತ್ರಗಳ ಗಣ್ಯರುಗಳ ಕಲಾಕೃತಿಗಳನ್ನು ಹಣ್ಣು, ತರಕಾರಿಗಳಿಂದ ಕೆತ್ತನೆ ಮಾಡಿ ಪ್ರದರ್ಶಿಸಲಾಗುತ್ತಿದೆ.

ಸುಮಾರು 8 ಸಾವಿರ ಕುಂಡಗಳಲ್ಲಿ ವಿವಿಧ ಜಾತಿಯ ಹೂಗಳು ಹಾಗೂ ಬೆಡ್‌ಗಳಲ್ಲಿ ಸುಮಾರು 20 ಸಾವಿರ ವಿವಿಧ ಜಾತಿಯ ಸಾಲ್ವಿಯ, ಸೇವಂತಿಗೆ, ಚೆಂಡು ಹೂ, ಜೀನಿಯಾ, ಡಯಾಂಥಸ್, ಇಂಪೇಷಿಯನ್ಸ್, ವಿಂಕಾ ರೋಸಿಯಾ, ಕಾಕ್ಸ್ ಕೋಂಬ್, ಡೇಲಿಯಾ, ಬೆಳೆಯಲಾಗಿದೆ.

ತಿತಿಮತಿ ವ್ಯಾಪ್ತಿಯಲ್ಲಿ ಕೊಂಬಿಂಗ್ ಕಾರ್ಯಾಚರಣೆಗೆ ಸೂಚನೆ



ಗೋಣಿಕೊಪ್ಪ: ಗೋಣಿಕೊಪ್ಪ–ಮೈಸೂರು ಹೆದ್ದಾರಿಯ ತಿತಿಮತಿ ವ್ಯಾಪ್ತಿಯಲ್ಲಿ ಹುಲಿಯ ಓಡಾಟದಿಂದ ಜನರಲ್ಲಿ ಭೀತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ, ಶಾಸಕ ಎ.ಎಸ್. ಪೊನ್ನಣ್ಣ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿಗೆ ದೂರವಾಣಿ ಕರೆ ಮಾಡಿ, ತಕ್ಷಣವೇ ಹುಲಿ ಪತ್ತೆ ಹಚ್ಚಿ ಸೆರೆ ಹಿಡಿಯಲು ಕೊಂಬಿಂಗ್ ಕಾರ್ಯಾಚರಣೆ ಆರಂಭಿಸುವಂತೆ ಸೂಚನೆ ನೀಡಿದ್ದಾರೆ. ಸಾರ್ವಜನಿಕರು ಹಾಗೂ ರೈತರು ಅತ್ಯಂತ ಎಚ್ಚರಿಕೆಯಿಂದ ಇರುವಂತೆ ಮೂಲಕ ಮನವಿ ಮಾಡಿದ್ದಾರೆ.

ಪುದಿಯೋಡಿ ಅಹಮದ್ ಹಾಜಿ ನಿಧನ



ನಾಪೋಕ್ಲು, ಜ.23– ಇಲ್ಲಿಗೆ ಸಮೀಪದ ಎಮ್ಮೆಮಾಡು ಗ್ರಾಮದ ನಿವಾಸಿ ಪುದಿಯೋಡಿ ಅಹಮದ್ ಹಾಜಿ (84) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಧ್ಯಾಹ್ನದ ನಂತರ ನಡೆಯಿತು.



ಉಮಾವತಿ ನಿಧನ

ನಾಪೋಕ್ಲು: ಇಲ್ಲಿಗೆ ಸಮೀಪದ ನೆಲಜಿ ಗ್ರಾಮದ ನಿವಾಸಿ ಪಂಜೇರೀರ ಪೂಣಚ್ಚ ಅವರ ಧರ್ಮಪತ್ನಿ ನಿವೃತ್ತ ಶಿಕ್ಷಕಿ ಉಮಾವತಿ (65) ಅವರು ಶುಕ್ರವಾರ ನಿಧನರಾದರು. ಮೃತರು ಪತಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಧ್ಯಾಹ್ನದ ನಂತರ ನಡೆಯಿತು.

ಭಗವದ್ಗೀತೆ ಸ್ಪರ್ಧೆ: ನೇಹಾ ಹೆಗ್ಗಡೆ ರಾಜ್ಯಕ್ಕೆ ದ್ವಿತೀಯ



ಚಾಮರಾಜನಗರ: ಸೇವಾ ಭಾರತಿ ಶಿಕ್ಷಣ ಸಂಸ್ಥೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ನೇಹಾ ಸಿ.ಹೆಗ್ಗಡೆ ಅವರು ರಾಜ್ಯಮಟ್ಟದ ಶ್ರೀಭಗವದ್ಗೀತಾ ಅಭಿಯಾನದ 11ನೇ ಅಧ್ಯಾಯದ ಸ್ಪರ್ಧಾ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಶಿವಮೊಗ್ಗದಲ್ಲಿ ನಡೆದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ನೇಹಾ ಹೆಗ್ಗಡೆ ಈ ಸಾಧನೆ ಮಾಡಿದ್ದು, ಇಂದು 11ನೇ ಅಧ್ಯಾಯದ ಜಿಲ್ಲಾ ಶ್ರೀಭಗವದ್ಗೀತಾ ಅಭಿಯಾನ ಸಮರ್ಪಣಾ ಸಮಾರಂಭದಲ್ಲಿ ನೇಹಾ ಹೆಗ್ಗಡೆಯನ್ನು ಸನ್ಮಾನಿಸಲಾಯಿತು.

ಹಾಗೆಯೇ ಜಿಲ್ಲಾ, ತಾಲೂಕು ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರನ್ನು ಗೌರವಿಸಲಾಯಿತು. ನೇಹಾ ಹೆಗಡೆಯ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು , ಜಿಲ್ಲಾ ಬ್ರಾಹ್ಮಣರ ಸಂಘ ಹಾಗೂ ಪೋಷಕರು ಅಭಿನಂದನೆ ಸಲ್ಲಿಸಿದ್ದಾರೆ.

ಅಧಿಕ ಹೊರೆ: ಎಂ ಸ್ಯಾಂಡ್ ತುಂಬಿದ್ದ 5 ಟಿಪ್ಪರ್ ವಶ



ಟಿಪ್ಪರ್‌ಗಳನ್ನು ವಶಪಡಿಸಿಕೊಂಡಿರುವುದು

ಚಾಮರಾಜನಗರ, ಜ.23– ಅಧಿಕ ಪ್ರಮಾಣದ ಎಂ ಸ್ಯಾಂಡ್ ಸಾಗಿಸುತ್ತಿದ್ದ 5 ಟಿಪ್ಪರ್‌ಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ನಡೆದಿದೆ.

ಹೆಗ್ಗೋಠಾರ ಗ್ರಾಮಸ್ಥರು ನೀಡಿದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಆರ್‌ಟಿಓ ಕಚೇರಿ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಸಿಬ್ಬಂದಿ ಗ್ರಾಮಕ್ಕೆ ಆಗಮಿಸಿ ಅಧಿಕ ಭಾರ ಹೊತ್ತು ಎಂ ಸ್ಯಾಂಡ್ ಸಾಗಿಸುತ್ತಿದ್ದ 5 ಟಿಪ್ಪರ್‌ಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಾದೇಶಿಕ ಸಾರಿಗೆ ಕಚೇರಿ ಇನ್ಸ್‌ಪೆಕ್ಟರ್ ಯೋಗೇಶ್ ಮಾತನಾಡಿ, ಹೆಗ್ಗೋಠಾರ ಗ್ರಾಮಸ್ಥರು ಟಿಪ್ಪರ್‌ಗಳು ಅಧಿಕ ಭಾರ ಹೊತ್ತು ಎಂ ಸ್ಯಾಂಡ್ ಸಾಗಿಸುತ್ತಿವೆ. ಇದರಿಂದ ರಸ್ತೆಗಳು ಹಾಳಾಗುತ್ತಿದೆ. ಅಲ್ಲದೇ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂದು ಮನವಿ ಮಾಡಿದ ಹಿನ್ನಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ವಾಹನ ಮಾಲೀಕರಿಗೆ ದಂಡ ವಿಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪಾದಯಾತ್ರಿ ಚಿರತೆಗೆ ಬಲಿ ಪ್ರಕರಣ

ಮ.ಬೆಟ್ಟದಲ್ಲಿ ಡ್ರೋನ್ ಕ್ಯಾಮರಾ ಕಣ್ಗಾವಲು

ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ!



ಸಭೆಯಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿದರು.

ಬೆಂಗಳೂರು, ಜ.23– ಮಲೆಮಹದೇಶ್ವರಬೆಟ್ಟದಲ್ಲಿ ಇತ್ತೀಚೆಗೆ ಚಿರತೆ ದಾಳಿಯಿಂದ ಪಾದಯಾತ್ರಿಯೋರ್ವ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಭಕ್ತರು ಕಾಲುದಾರಿಯಲ್ಲಿ ಮೆಟ್ಟಿಲೇರಿ ಬರುವ ಮಾರ್ಗದಲ್ಲಿ ಡ್ರೋನ್ ಕ್ಯಾಮರಾ ಅಳವಡಿಸಿ ಸತತ ನಿಗಾ ಇಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಕಾಲುದಾರಿ, ಮೆಟ್ಟಿಲು ಇರುವ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿ, ಹೋಂಗಾರ್ಡ್ಸ್ ಮತ್ತು ಸ್ಥಳೀಯ ಸಿಬ್ಬಂದಿಯ ತಂಡ ರಚಿಸಿ ಭಕ್ತರಿಗೆ ನೆರವಾಗುವ ಅಗತ್ಯವಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಭರಿಸುವಂತೆ ಮಲೆ ಮಹದೇಶ್ವರಸ್ವಾಮಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತಕ್ಕೆ ಪತ್ರ ಬರೆಯುವಂತೆಯೂ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಂದ ಭಕ್ತರು ಕಾವೇರಿ ನದಿ ದಾಟಿ, ಹನೂರು ತಾಲೂಕಿನ ಬಸವನಕಣಕ್ಕೆ ಬಂದು ಅಲ್ಲಿಂದ ಕಾಡಿನಲ್ಲಿಯೇ ನಡೆದುಕೊಂಡು ಶಾಗ್ಯ, ಡಿಎಂ ಸಮುದ್ರ, ಎಲ್ಲೆಮಾಳ, ಮಲ್ಲಯ್ಯನಪುರ, ಕೌದಳ್ಳಿ, ವಡಕೆಹಳ್ಳ, ಕೋಣನಕೆರೆ, ತಾಳುಬೆಟ್ಟ ಮಾರ್ಗವಾಗಿ ಬೆಟ್ಟಕ್ಕೆ ಬರುತ್ತಾರೆ ಎನ್ನಲಾಗಿದೆ.

ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಪಾದಯಾತ್ರೆ ಅಪಾಯಕಾರಿಯಾಗಿದೆ. ಹೀಗಾಗಿ ಭಕ್ತರ ಭಾವನೆಗೆ ಧಕ್ಕೆಯಾಗದಂತೆ ಅವರ ಮನವೊಲಿಸಲು ಸಚಿವರು ಸೂಚಿಸಿದರು.

ರಾತ್ರಿಯ ವೇಳೆ ಕಾಡಿನ ಅಂಚಿನಲ್ಲಿ, ಕಾಡಿನೊಳಗಿರುವ ವಸತಿ ಪ್ರದೇಶದಲ್ಲಿ ಮಲಗುವುದೂ ಅಪಾಯಕಾರಿಯಾಗಿದೆ. ಕಳೆದ ಬುಧವಾರ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಗ್ರಾಮದ ಪ್ರವೀಣ್ ಎಂಬ ಯುವಕ ಚಿರತೆ ದಾಳಿಯಿಂದ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ ಹೀಗಾಗಿ ಬಸ್, ಕಾರುಗಳಲ್ಲಿ ತೆರಳಿ ಮಾದಪ್ಪನ ದರ್ಶನ ಪಡೆಯುವಂತೆ ಭಕ್ತರ ಮನವೊಲಿಸಲು ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ಒಳಗೊಂಡ ತಂಡ ರಚಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಯವರಿಗೆ ಟಿಪ್ಪಣಿ ಕಳಿಸಿರುವುದಾಗಿ ಈಶ್ವರ ಖಂಡ್ರೆ ತಿಳಿಸಿದರು.

ಈ ಮಧ್ಯೆ ರಥ ಸಪ್ತಮಿಯ ನಂತರ ಬಿಸಿಲು ಹೆಚ್ಚಾಗಿ ಕಾಡ್ಗಿಚ್ಚಿನ ಅಪಾಯವೂ ಹೆಚ್ಚುವ ಕಾರಣ ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಅರಣ್ಯಾಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ಅರಣ್ಯ ಮತ್ತು ವನ್ಯಜೀವಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾಡಿನ ಬೆಂಕಿಗೆ ಅರಣ್ಯ ಸಂಪತ್ತು ನಾಶವಾಗದ ರೀತಿಯಲ್ಲಿ ಕಟ್ಟೆಚ್ಚರ ವಹಿಸಬೇಕು, ಡ್ರೋನ್ ಸೌಲಭ್ಯ ಇರುವ ಕಡೆ ಕ್ಯಾಮರಾ ಮೂಲಕ ನಿಗಾ ಇಡಬೇಕು, ಗಸ್ತು ಹೆಚ್ಚಿಸಿ, ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿ ಎಚ್ಚರದಿಂದ ಇರಬೇಕು ಎಂದರು. ಬೇಸಿಗೆಯಲ್ಲಿ ವನ್ಯಜೀವಿಗಳಿಗೆ ಕಾಡಿನಲ್ಲಿ ಮೇವು ಮತ್ತು ಕುಡಿಯುವ ನೀರಿನ ಕೊರತೆ ಆಗದಂತೆಯೂ ಎಚ್ಚರ ವಹಿಸಲು, ಜಲಗುಂಡಿಗಳಿಗೆ ಸೌರ ಪಂಪ್‌ಗಳ ಮೂಲಕ ಕೊಳವೆ ಬಾವಿಯಿಂದ ನೀರು ಹರಿಸಲೂ ಸೂಚಿಸಿದರು.

ಮ.ಬೆಟ್ಟಕ್ಕೆ ಸಂಜೆ 6ರಿಂದ ಬೆಳಗ್ಗೆ 6ರವರೆಗೆ ಪಾದಯಾತ್ರೆಗೆ ನಿಷೇಧ

ಚಾಮರಾಜನಗರ: ಜಿಲ್ಲೆಯ ಹನೂರು ತಾಲೂಕಿನ ಶ್ರೀಮಲೆ ಮಹದೇಶ್ವರ ಬೆಟ್ಟಕ್ಕೆ ಇನ್ನು ಮುಂದೆ ನಿತ್ಯ ಸಂಜೆ 6 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ಪಾದಯಾತ್ರೆ ನಿರ್ಬಂಧಿಸಲಾಗಿದೆ.

ಮಲೆ ಮಹದೇಶ್ವರಬೆಟ್ಟ ದಟ್ಟ ಅರಣ್ಯ ಪ್ರದೇಶದಿಂದ ಕೂಡಿದ್ದು, ಸಂಜೆ 6 ರಿಂದ ಮುಂಜಾನೆ 6 ರವರೆಗೆ ಕಾಡು ಪ್ರಾಣಿಗಳ ಸಂಚಾರ ಹೆಚ್ಚಾಗಿರುತ್ತದೆ. ಹೀಗಾಗಿ ಕಾಡು ಪ್ರಾಣಿಗಳು ಹಾಗೂ ಭಕ್ತರ ಸುರಕ್ಷತೆ ದೃಷ್ಟಿಯಿಂದ ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಸಂಬಂಧ ಮಲೆ ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಮಾತನಾಡಿ, ಭಕ್ತರು ತಾಳುಬೆಟ್ಟದಿಂದ ಮಹದೇಶ್ವರಬೆಟ್ಟಕ್ಕೆ ಬೆಳಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ಮಾತ್ರ ಪಾದಯಾತ್ರೆ ಕೈಗೊಳ್ಳಬೇಕು. ಅಲ್ಲದೇ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಗುಂಪು ಗುಂಪಾಗಿ ಬರಬೇಕು ಎಂದು ಕೋರಿದ್ದಾರೆ.

ಮುಂದುವರಿದ ನಿರ್ಬಂಧ: ಚಿರತೆ ಸಿಕ್ಕರೂ ಕೂಡ ಪಾದಯಾತ್ರೆ ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಜ.24ರವರೆಗೆ ನಿರ್ಬಂಧ ಮುಂದುವರೆಸಲಾಗಿದೆ.

ಲೋಕಾಯುಕ್ತ ಬಲೆಗೆ ಬಿದ್ದ ಮುಖ್ಯಪೇದೆ

ಚಾಮರಾಜನಗರ: ವಶಕ್ಕೆ ಪಡೆದಿದ್ದ ಬೈಕ್ ಅನ್ನು ಬಿಡುಗಡೆಗೊಳಿಸಲು ದ್ವಿಚಕ್ರ ವಾಹನ ಮಾಲೀಕನ ಬಳಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಮುಖ್ಯಪೇದೆಯೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಸಂಚಾರಿ ಠಾಣೆಯ ಮುಖ್ಯಪೇದೆ ಮಲ್ಲು ಲೋಕಾಯುಕ್ತ ಬಲೆಗೆ ಬಿದ್ದವರು. ಈತ ಹರದನಹಳ್ಳಿ ಪ್ರತಾಪ್ ಎಂಬುವರ ಬೈಕ್ ಅನ್ನು ರಿಲೀಸ್ ಮಾಡಿಕೊಡಲು 3 ಸಾವಿರ ರೂ. ಬೇಡಿಕೆ ಇಟ್ಟಿದ್ದರು. ಅಲ್ಲದೇ ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಆಗಿದ್ದರೂ, ವಾಹನ ಬಿಡುಗಡೆ ಮಾಡದೇ ಸತಾಯಿಸುತ್ತಿದ್ದರು ಎನ್ನಲಾಗಿದೆ. ಇದರಿಂದ ಬೇಸತ್ತ ಪ್ರತಾಪ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಈ ಹಿನ್ನಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಮಲ್ಲು ಅವರು ಲಂಚದ ಹಣ ಸ್ವೀಕರಿಸುವಾಗ ಡಿವೈಎಸ್‌ಪಿ ಗಜೇಂದ್ರಸ್ವಾಮಿ ನೇತೃತ್ವದಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ಹಣದ ಸಮೇತ ಬಂಧಿಸಿದ್ದಾರೆ.

ಲೋಕಾಯುಕ್ತ ಇನ್ಸ್‌ಪೆಕ್ಟರ್ ಗಿರೀಶ್ ಕುಮಾರ್ ಆರಾಧ್ಯ, ಮಹದೇವಸ್ವಾಮಿ ಪ್ರತಾಪ್, ಗೌತಮ್, ಶಾಂತರಾಜು ಇದ್ದರು.

ನೇಮಕ



ಗುಂಡ್ಲುಪೇಟೆ ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷರಾಗಿ ಯುವ ಮುಖಂಡ ಡಾ. ನವೀನ್ ಮೌರ್ಯರನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಗಾಂಜಾ ಮಾರಾಟಕ್ಕೆ ಯತ್ನ: ಆರೋಪಿ ಬಂಧನ



ಕೊಳ್ಳೇಗಾಲ: ತಾಲೂಕಿನ ಉತ್ತಂಬಳ್ಳಿಯಲ್ಲಿ ಅಕ್ರಮವಾಗಿ ಒಣ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಮಾಂಬಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಜ್ಜಿಹುಂಡಿ ಗ್ರಾಮದ ನಿವಾಸಿ ಶಂಕರ್(45) ಬಂಧಿತ ಆರೋಪಿ. ಈತನಿಂದ 280 ಗ್ರಾಂ ಒಣಗಾಂಜಾ ವಶಪಡಿಸಿಕೊಳ್ಳಲಾಗಿದೆ. ಈತ ಉತ್ತಂಬಳ್ಳಿ ಸರ್ಕಲ್ ಬಳಿ ಮಾರಾಟಕ್ಕೆ ಯತ್ನಿಸುತ್ತಿದ್ದಾಗ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆತನನ್ನು ಬಂಧಿಸಿ, ಗಾಂಜಾ ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಈ ಸಂಬಂಧ ಮಾಂಬಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರ್ಯಾಚರಣೆ ಯಲ್ಲಿ ಎಸ್‌ಐ ಕರಿಬಸಪ್ಪ, ಎಎಸ್‌ಐ ಬಸವರಾಜು, ಕಾನ್ಸಟೇಬಲ್ ಶಿವಕುಮಾರ್ ಹಾಗೂ ಅಪರಾಧ ಪತ್ತೆದಳ ಸಿಬ್ಬಂದಿ ಹಾಜರಿದ್ದರು.

ಸಂವಿಧಾನ ಧರ್ಮದ ತಳಹದಿ ಮೇಲೆ ನಿಂತಿಲ್ಲ : ಹಿರಿಯ ವಕೀಲ ಆರ್.ವಿರೂಪಾಕ್ಷ



ಹಿರಿಯ ವಕೀಲ ಆರ್.ವಿರೂಪಾಕ್ಷ ಮಾತನಾಡಿದರು.

ಚಾಮರಾಜನಗರ, ಜ.23– ಭಾರತದ ಸಂವಿಧಾನ ಧರ್ಮದ ತಳಹದಿ ಮೇಲೆ ನಿಂತಿಲ್ಲ. ಅದು ಧರ್ಮ ನಿರಪೇಕ್ಷಿತವಾಗಿದ್ದು, ದೇಶದ ಜನರು ಗೌರವಯುತವಾಗಿ ಬದುಕುವ ಅವಕಾಶ ಕಲ್ಪಿಸಿದೆ ಎಂದು ಹಿರಿಯ ವಕೀಲ ಆರ್.ವಿರೂಪಾಕ್ಷ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ ಸಹಯೋಗದಲ್ಲಿ ಶುಕ್ರವಾರ ಡಿವಿಜಿ ಉಪನ್ಯಾಸ ಮಾಲೆ–3 ಅಂಗವಾಗಿ ಏರ್ಪಡಿಸಿದ್ದ 'ನಮ್ಮ ಸಂವಿಧಾನ ಅವಲೋಕನ' ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು.

ಭಾರತದ ಸಂವಿಧಾನ ಪೀಠಿಕೆಯ ಮೊದಲ ಸಾಲಿನಲ್ಲಿ ಸಾರ್ವಭೌಮ, ಧರ್ಮ ನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಉಲ್ಲೇಖಿಸಲಾಗಿದೆ. ಜಗತ್ತಿನ ಹಲವು ರಾಷ್ಟ್ರಗಳು ತಮ್ಮ ಧರ್ಮವನ್ನೇ ಸಂವಿಧಾನವಾಗಿ ಮಾಡಿಕೊಂಡಿವೆ. ಜೊತೆಗೆ ಕೆಲ ರಾಷ್ಟ್ರಗಳು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿವೆ. ಇಂದಿಗೂ ಅಂತಹ ರಾಷ್ಟ್ರಗಳು ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ಕುಸಿತ ಕಂಡಿವೆ. ಸಂಸ್ಕೃತಿ ಜನರು ಬದುಕುವ ರೀತಿ ಕಲಿಸುತ್ತದೆ. ಧರ್ಮವೇ ಬೇರೆ, ಸಂಸ್ಕೃತಿಯೇ ಬೇರೆ. ಜಾತ್ರೆ ಸಂಸ್ಕೃತಿಯ ಒಂದು ಭಾಗವಾಗಿದೆ. ಧರ್ಮಗಳಲ್ಲಿ ಹಬ್ಬದ ಉಲ್ಲೇಖವಿಲ್ಲ. ಭಾರತ ಸಂವಿಧಾನ ಧರ್ಮ ನಿರಪೇಕ್ಷಿತವಾಗಿದ್ದು, ಯಾವುದೇ ಧರ್ಮದ ಮುಲಾಜಿಗೆ ಒಳಗಾಗದೇ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ ಎಂದರು.

ಸಂವಿಧಾನ ಎಂದರೆ ಅದು ಒಂದು ಕಾನೂನು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಕರ್ತವ್ಯಗಳ ಬಗ್ಗೆ ತಿಳಿಸುತ್ತದೆ. ಒಂದು ದೇಶ ಪ್ರಗತಿಯತ್ತ ದಾಪುಗಾಲು ಇಡಬೇಕಾದರೆ ಪ್ರತಿಯೊಬ್ಬ ಪ್ರಜೆಗೆ ಊಟ, ವಸತಿ ಜೊತೆಗೆ ಶಿಕ್ಷಣ, ಆರೋಗ್ಯವು ಮುಖ್ಯ ಎಂದು ಸಂವಿಧಾನದ ಪರಿಚ್ಛೇದ 21–ರಲ್ಲಿ ಉಲ್ಲೇಖಿಸಲಾಗಿದೆ. ಒಬ್ಬ ವ್ಯಕ್ತಿಯನ್ನು ಏಕಾಏಕಿ ಬಂಧಿಸುವ ಹಾಗಿಲ್ಲ. ಕಾನೂನು ಪ್ರಕ್ರಿಯೆ ನಡೆದ ನಂತರ ಬಂಧಿಸಿ, ನಂತರ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಪರಿಚ್ಛೇದ 19–ರಲ್ಲಿ ಉಲ್ಲೇಖ ಮಾಡಲಾಗಿದೆ. ಸರ್ಕಾರದ ವಿರುದ್ಧ ಪ್ರಶ್ನೆ ಮಾಡುವ ಸಂಬಂಧ ನ್ಯಾಯಕ್ಕಾಗಿ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಪರಿಚ್ಛೇದ 32, ಹಾಗೂ 226ರಲ್ಲಿ ಅವಕಾಶ ಮಾಡಿಕೊಡಲಾಗಿದೆ. ಈ ಪರಿಚ್ಛೇದ ನನಗೆ ತುಂಬ ಪ್ರಿಯ ಎಂದು ಅಂಬೇಡ್ಕರ್ ಅವರೇ ಮೆಚ್ಚುಗೆ ವ್ಯಕ್ತಪಡಿಸಿದ್ದರು ಎಂಬುದು ಗಮನಾರ್ಹ ಎಂದರು.

12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಶೂದ್ರರಿಗೂ ಅವಕಾಶ ಮಾಡಿ ಕೊಡಲಾಯಿತು. ಇದರಿಂದಲೇ ಜಗತ್ತೇ ಮೆಚ್ಚುವ ವಚನ ಸಾಹಿತ್ಯ ರಚನೆಯಾಗಲು ಕಾರಣವಾಯಿತು. ಇದು ಕೂಡಾ ಸಂವಿಧಾನದ ಕೊಡುಗೆ ಎಂದರು.

ಸಂವಿಧಾನ ಬದಲಾವಣೆ ಮಾಡಬೇಕು ಎನ್ನುವವರು ಒಂದು ಬಾರಿ ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಬಗ್ಗೆ ಸಮಗ್ರ ಅಧ್ಯಯನ ಮಾಡಬೇಕು. ಯಾವ ಕಾನೂನುಗಳು ಶಾಶ್ವತವಲ್ಲ. ಜನರಿಗೆ ಸೌಲಭ್ಯ ಒದಗಿಸಬೇಕಾದರೆ ಕಾಲ ಕಾಲಕ್ಕೆ ಕಾನೂನುಗಳು ಬದಲಾಗಬೇಕು. ಸಂವಿಧಾನಕ್ಕೆ ತಿದ್ದುಪಡಿ ತರಬಹುದೇ ಹೊರತೂ, ಬದಲಾವಣೆ ಅಸಾಧ್ಯ. ಸಂವಿಧಾನವನ್ನು ಬದಲಾವಣೆ ಮಾಡಬೇಕು ಎನ್ನುವವರು ಈ ಅಂಶವನ್ನು ಮನಗಾಣಬೇಕು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಜಿಲ್ಲಾ ಸಂಚಾಲಕ ಸಾಹಿತಿ ಕೆ.ವೆಂಕಟರಾಜು ಮಾತನಾಡಿ, ಸಂವಿಧಾನ ನಮಗೆ ಸರಿದಾರಿಯಲ್ಲಿ ನಡೆಯಲು ಅವಕಾಶ ಕಲ್ಪಿಸಿದೆ. ಸಂವಿಧಾನ ರಚನೆಯಾಗಲು ಬೌದ್ಧ ಧರ್ಮದ ಪ್ರೇರಣೆ ಇದೆ. ಇದು ಚಲನಶೀಲತೆ ಹೊಂದಿದ್ದು, ಜಡತ್ವವಿಲ್ಲ. ದೇಶದ ಭದ್ರತೆ ಹಾಗೂ ಸಮಗ್ರತೆ ಹಿನ್ನೆಲೆಯಲ್ಲಿ ರಚನೆಯಾಗಿರುವ ಭಾರತದ ಸಂವಿಧಾನವನ್ನು ಅಸ್ಥಿರಗೊಳಿಸುವ ಬೆಳವಣಿಗೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದ್ದು, ಪ್ರತಿಯೊಬ್ಬ ಭಾರತೀಯರು ಸಂವಿಧಾನ ರಕ್ಷಣೆ ಮಾಡುವ ನಿಟ್ಟಿನಲ್ಲಿ ಪಣತೊಡಬೇಕಿದೆ ಎಂದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರಕಾಶ್‌ರಾಜು ಮೇಹು ಮಾತನಾಡಿದರು.

ಜಿಲ್ಲಾ ಸಂಚಾಲಕ ಎ.ಎಸ್.ಶಿವಸ್ವಾಮಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ಪರಿಸರವಾದಿ ಪುಣಜನೂರು ದೊರೆಸ್ವಾಮಿ, ಹಿರಿಯ ಪತ್ರಕರ್ತ ಎ.ಡಿ.ಸಿಲ್ವಾ, ವಕೀಲರು, ಪತ್ರಕರ್ತರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಜಮೀನು ಬಾಡಿಗೆಗಿದೆ
ಮನೆ, ನೀರು, ಕರೆಂಟ್, ಕಾಂಪೌಂಡ್ ಇರುವ ಅಲಿನೇಶನ್ 1¼ ಎಕರೆ ಜಮೀನು ಗದ್ದಿಗೆ ರಸ್ತೆ, ಬೋಗಾದಿ ಮಹಲಿಂಗೇಶ್ವರ ದೇವಸ್ಥಾನದ ಪಕ್ಕ, ಕೋಳಿಫಾರಂ, ಡೈರಿ, ಇಟ್ಟಿಗೆ ಫ್ಯಾಕ್ಟರಿ ಇತರೆ ಉದ್ದೇಶ ಚದರಡಿಗೆ ಒಂದು ರೂಪಾಯಿಗೆ ಬಾಡಿಗೆಗಿದೆ.
8197609290

ಗ್ರಾವಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ 5 ಗುಂಟೆ, 20 ಗುಂಟೆ ಬೇಕಾದವರು ಸಂಪರ್ಕಿಸಿ
7259407518
8310220458

ಹೊಸ-ಮನೆ ಮಾರಾಟಕ್ಕಿದೆ
20'x28' - E/F - 3 BHK-3 FLR
ಲಲಿತಾದ್ರಿನಗರ(ಬಾಲಾಜಿ ಲೇಔಟ್) 74 -ಲಕ್ಷ (Neg), ಮಾರಾಟಕ್ಕಿದೆ.
9480222708
7760065890

MUDA SITE FOR SALE
ದಟ್ಟಗಳ್ಳಿ ಆದಿತ್ಯ ಸರ್ಕಲ್ ಹತ್ತಿರ 40 ಅಡಿ ರಸ್ತೆಗೆ 40'×60' EAST ಫೇಸಿಂಗ್ ಸೈಟ್.
Mob: 9886048471

ಸಿಪೆಟ್:ಸಿ.ಎಸ್.ಟಿ.ಎಸ್, ಮೈಸೂರು
ಓಪನ್ ಹೌಸ್
ದಿನಾಂಕ: 23.01.2026 - 25.01.2026
ಬೆಳಗ್ಗೆ 9.00 ರಿಂದ ಸಂಜೆ 6.00 ರವರೆಗೆ
ಪೋಷಕರು, ಕೈಗಾರಿಕಾ ಉದ್ಯೋಗಿಗಳು ಹಾಗೂ ಸಾರ್ವಜನಿಕರು ಭಾಗವಹಿಸಬಹುದು
ಪ್ರವೇಶ ಉಚಿತ
ವಿಳಾಸ: ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ ಮೈಸೂರು - 570016.
97496 61667, 99593 33419

ನಿವೇಶನ ಮಾರಾಟಕ್ಕಿದೆ
ಮೈಸೂರಿನ ಗೆಜ್ಜಗಳ್ಳಿಯಲ್ಲಿರುವ 1300 ಚ. ಅಡಿಯುಳ್ಳ ನಿವೇಶನವು ತಕ್ಷಣಕ್ಕೆ ಮಾರಾಟಕ್ಕಿದೆ."ಬಿ" ಖಾತೆ ಹಾಗೂ "ಇ" ಸ್ವತ್ತು ಹೊಂದಿರುವ ಈ ಸೈಟು ಜೆ.ಪಿ.ನಗರ ರಿಂಗ್ ರೋಡಿನಿಂದ1 ಕಿ.ಮೀ. ಅಂತರದಲ್ಲಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
Mob : 9880774703

ಜಮೀನು ಮಾರಾಟಕ್ಕಿದೆ
1 ಎಕರೆ ಜಮೀನು, ಮೈಸೂರು– ಬಿಳಿಕೆರೆ– ಕೆ.ಆರ್.ನಗರ ರಸ್ತೆ
ಡಾಂಬರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು, ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ.ಮೀ ಅಹಲ್ಯ ಗ್ರಾಮ
45'x50' N/F, MUDA SITE ಮೇಟಗಳ್ಳಿ ಪೊಲೀಸ್ ಠಾಣೆ ಮುಂಭಾಗ
7411848108

ಬೈಕ್ ಮಾರಾಟಕ್ಕಿದೆ
ಹೀರೋ–ಹೋಂಡ ಸ್ಪ್ಲೆಂಡರ್ ಪ್ಲಸ್ 2008ರ ಮಾಡೆಲ್, 1ನೇ ಮಾಲೀಕರು F.C & Insurance ಚಾಲ್ತಿಯಲ್ಲಿದೆ. ಸಂಪರ್ಕಿಸಿ
9449621665

ಬೇಕಾಗಿದ್ದಾರೆ
ಒಂದು ಫ್ಯಾಮಿಲಿ, ಹಲ್ಲಹಳ್ಳಿ ಹತ್ತಿರ, ತೆಂಗಿನ ತೋಟ ನೋಡಿಕೊಳ್ಳಲು, ಅನುಭವವಿರುವವರು ಆಸಕ್ತಿ ಇದ್ದಲ್ಲಿ, ಸಂಪರ್ಕಿಸಿ
9845043898

ಮಾರಾಟಕ್ಕಿದೆ
ಬದನವಾಳು ಗ್ರಾಮ, ಚಾಮರಾಜನಗರ ಮೇನ್ ರೋಡ್,ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಎದುರು, ಫ್ಯಾಕ್ಟರಿ ಉದ್ದೇಶಕ್ಕಾಗಿ ಅಲಿನೇಶನ್ ಆಗಿರುವ ಜಮೀನು 2 ಎಕರೆ 11ಗುಂಟೆ ಜಮೀನು ಮಾರಾಟಕ್ಕಿದೆ. ಜನರಲ್ ಪ್ರಾಪರ್ಟಿ, ಆಸಕ್ತಿ ಇರುವವರು ಸಂಪರ್ಕಿಸಿ.
8970054974

ಹೊಸ ಮನೆ (*B* ಖಾತಾ) ಭೋಗ್ಯ /ಮಾರಾಟಕ್ಕಿದೆ
(GENERAL PROPERTY)
22½x30 (15 ಚದರ, ನೆಲ & 1 ಮಹಡಿ 2 ಮಹಡಿಯಲ್ಲಿ 1 ರೂಂ ರಾಮಾನುಜ ರಸ್ತೆ 12ನೇ ಕ್ರಾಸ್, ಮೈಸೂರು, ಸಿಟಿ ಬಸ್ ನಿಲ್ದಾಣದಿಂದ ಕೇವಲ 2 ಕಿ.ಮೀ ಬೆಲೆ 95 ಲಕ್ಷ
8296442979

FOR SALE
Cash table, Display showcase (Suitable for Mobile shop, Medical Store, Fancy Store, Stationary) Aluminum portion and Bunkers.
9880218669

HOUSE FOR SALE
30×40 w/n door 2 BHK 8years old single floor in Dattagalli Mysore price 1.60cr sightly negotiable . Brokers excuse
9663166809

ಮನೆ ಬಾಡಿಗೆಗೆ ಇದೆ (ಸಸ್ಯಾಹಾರಿಗಳಿಗೆ ಮಾತ್ರ)
ಜೆಎಸ್ಎಸ್ ವಿದ್ಯಾಪೀಠದ ಎದುರು, ರಾಮಾನುಜ ರಸ್ತೆ, ಎರಡನೇ ಅಂತಸ್ತು, ತಾರಸಿ ಮನೆ. ಚಿಕ್ಕ ಸಂಸಾರಕ್ಕೆ / ಆಫೀಸ್‌ಗೂ ಯೋಗ್ಯವಾಗಿದೆ.
9449886322

ಹೆಸರು ಬದಲಾವಣೆ
ಗಿರೀಶ್ ಹೆಚ್.ಎಸ್ S/o ಶಿವರುದ್ರಯ್ಯ, ಹುರ ಅಂಚೆ, ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾ॥, ಮೈಸೂರು ಜಿಲ್ಲೆ–571315, ಇಲ್ಲಿ ವಾಸವಿದ್ದು ನನ್ನ ತಂದೆಯ ಹೆಸರು ಶಿವರುದ್ರ ಎಂಬ ಹೆಸರನ್ನು ಶಿವರುದ್ರಯ್ಯ ಎಂದು ನೋಟರಿ ರಾಜೇಶ್ವರಿ ಸಮ್ಮುಖದಲ್ಲಿ ಬದಲಾವಣೆ ಮಾಡಿಕೊಂಡಿರುತ್ತೇವೆ.
ಸಹಿ/– ಶಿವರುದ್ರಯ್ಯ

ಬೇಕಾಗಿದ್ದಾರೆ
ಸೈಟುಗಳು ಮಾರಾಟಕ್ಕಿದೆ (ಮುಡಾ ಅಪ್ರೂವ್ಡ್) 30x40 ಶ್ರೀರಾಂಪುರ ರಿಂಗ್ ರೋಡ್ ಹತ್ತಿರ, ಮೈಸೂರು
8050345574

SITE FOR SALE
1) 30X40 - West Facing
2) 40X60 - South Facing
3) ವಿಶ್ವಪ್ರಜ್ಞ ಲೇಔಟ್, ಹಳೇ ಕೆಸರೆ, ಮೈಸೂರು
4) Sqft Rs.4000/-
9164113446

SITE FOR SALE
30x70 East Face IPS Srinivasa Nagara (Police Layout 3rd Stage)
9480555474

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

LOAN
1. Housing Loan, 2. Balance Transfer, 3. Composite Loan 4. Plot Loans, 5. Mortgage Loan 6. Commercial Properties (We provide Loans for All type of Khatha), Shri Sai Financial Services : Contact No.
8884447314 / 8884447318

ಪಾರ್ಟ್ ಟೈಮ್ ಕೆಲಸ
ಯೂನಿಫಾರಂ ಶಾಪ್‌ಗೆ ಹೆಲ್ಪರ್ ಲೇಡೀಸ್ ಮಾತ್ರ ವಯಸ್ಸು 18ರಿಂದ 35 ಮಧ್ಯಾಹ್ನ 3 pm to 8.30 1 ಪೋಸ್ಟ್ ಮಧ್ಯಾಹ್ನ 4ರಿಂದ 8.30ಕ್ಕೆ 1 ಪೋಸ್ಟ್, ಬರುವ ಇಚ್ಛೆ ಇರುವವರು ಮಾತ್ರ ನಿಮ್ಮ ಆಧಾರ್ ಕಾರ್ಡನ್ನು ವಾಟ್ಸಪ್ ಮಾಡಿ. ಅಗ್ರಹಾರ ಬಸವೇಶ್ವರ ರಸ್ತೆ
9591327746

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ ಹುಡುಗರು /ಹೆಂಗಸರು ಬೇಕಾಗಿದ್ದಾರೆ
ಕಾಫಿ ಟೀ ಕೌಂಟರ್, ಪಾರ್ಸಲ್ ಕೌಂಟರ್, ವಾಷಿಂಗ್ ಮತ್ತು ದೋಸೆ ಹಿಟ್ಟು ರುಬ್ಬುವವರು ಮತ್ತು ದೋಸೆ ಭಟ್ಟರು, ಚೈನೀಸ್ ಮಾಸ್ಟರ್ ಬೇಕಾಗಿದ್ದಾರೆ ಮತ್ತು ಕ್ಯಾಷಿಯರ್
9606238790
9008253179

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಉನ್ನತ ಹಾಸ್ಟೆಲ್‌ಗಳಲ್ಲಿ, ಕೆಲಸ ಮಾಡಲು ಅನುಭವವುಳ್ಳ ವಾರ್ಡ್‌ಬಾಯ್‌ಗಳು ಹೋಮ್ ನರ್ಸಿಂಗ್, ಹೌಸ್ ಕೀಪಿಂಗ್, ಸೆಕ್ಯೂರಿಟಿಗಳು. ಹಾಗೂ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸ ಮಾಡುವ ವಿಳಾಸ, ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರ, ಹೆಬ್ಬಾಳು, ದೇವೇಗೌಡ ಸರ್ಕಲ್ ಹತ್ತಿರ. ಮಾನಸ ನಗರ ಮೈಸೂರು ಇಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ESI, PF ಹಾಗೂ ಊಟ ವಸತಿ ಸೌಲಭ್ಯ ವಿರುತ್ತದೆ. ಅನುಭವವುಳ್ಳ ಫೀಲ್ಡ್ ಆಫೀಸರ್‌ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
9611208553/ 9036461347

ವಧು ಬೇಕಾಗಿದ್ದಾರೆ
ಇಂಜಿನಿಯರ್ 30, ಬ್ರಾಹ್ಮಣ ವರನಿಗೆ ಸಸ್ಯಾಹಾರಿ ವಧು ಬೇಕಾಗಿದೆ. ಮದುವೆ ಮತ್ತು ಇತರ ಖರ್ಚುಗಳು ಭರಿಸಲಾಗುವುದು.
Mob: 8431597521

SITE FOR SALE
30x40 N/E/W Corner
30x40 E/W
40x40 S/E/W Corner
Near Srirampura Signal, Mysore
7259969955, 9481512836

UPHOLSTERY DRY CLEANING
Curtains, Carpets, Blankets, Soft Toys
Call: 9448674411

House for Sale
15x30 single BHK, Ramakrishna Nagar 'H' Block. Rs. 36 Lakh. Contact:
9886695905, 9986338822

SITE FOR SALE
45x30 North facing IPS Nagara attached Ring Road 2.5 km.
Mob: 9986592352

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

NSE **Nypunya** School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಸಾಹುಕಾರ್ ಹುಂಡಿ, ಉತ್ತನಹಳ್ಳಿ, ಗೋಕುಲಂ ಮತ್ತು ಎನ್.ಆರ್. ಮೊಹಲ್ಲಾ ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ
96069 59451

Sites For Sale
30x60 North Face Dattagalli 3rd Stage
30x40 East-South Corner site KBL GARDENIA, Vijayanagar 4th Stage.
Brokers excuse please
Mob: 9019119996

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
Mob: 9483536357

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

SITE FOR SALE
SHREE SAPTHAMATHRUKA LAYOUT
30X40 West Facing @ 32 Lacks
30X42 South Facing @ 34 Lacks
Next to SAHA MEADOWS & JSS LAYOUT STAGE - 4, Before JSS INTERNATIONAL UNIVERSITY & UP-Coming PHERIPHERAL RING ROAD
Ready to Register E-Khata & Bank Loan Available
HILL VIEW ESTATES
7795 609 173

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಪತ್ರ ಬರಹಗಾರರು ಮತ್ತು ನೋಂದಣಿ ಸಲಹೆಗಾರರು
ನಮ್ಮಲ್ಲಿ ಮೈಸೂರು ಮತ್ತು ಮೈಸೂರು ಜಿಲ್ಲೆಯ ಎಲ್ಲಾ ರೀತಿಯ ಕಾಗದ ಪತ್ರಗಳು ಕರಾರು ಮತ್ತು ಕ್ರಯಪತ್ರಗಳನ್ನು ಮಾಡಿಕೊಡಲಾಗುತ್ತದೆ. #32, ತ್ರಿವೇಣಿ ಸರ್ಕಲ್, ಡಾ॥ ರಾಜ್‌ಕುಮಾರ್ ರಸ್ತೆ, ಮೈಸೂರು. ಸಂಪರ್ಕಿಸಿ
9686071750 / 8971936090

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ, ಕಂಪನಿಗಳಿಗೆ, ಆಫೀಸ್ ವರ್ಕ್‌ಗಳಿಗೆ 7th, 10th, PUC, ITI, Diploma, BE, BA, B.Com., Degree (ಪಾಸ್ / ಫೇಲ್) ಆದಂತಹ ನಗರ, ಗ್ರಾಮೀಣ ಹಳ್ಳಿಗಳ ಯುವಕರಿಗೆ, ಯುವತಿಯರಿಗೆ ವಸತಿಯೂಟವಿರುತ್ತದೆ. ಸಂಬಳ + ಓಟಿ ರೂ. 20,000–35,000.
Mob: 9916788422


ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

FOR SALE
30x40 Sites Near RT Nagar BSNL Lyt, 40ft,50ft &60ft Road
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Nagar.
PRAKRUTHI PROPERTIES
95386 90359, 90359 90359

FOR SALE
37x40 Site @ City Cntr, Near Ramavilas Road
40x60 Commercial Property @ Srirampura 80ft Road
CORNER SITE @ KABINI LAYOUT, SRIRAMPURA.
Duplex House Near Vijaya Nagar 4th Stage
40x120 Site@ Dattgalli 80ft Rd
PRAKRUTHI PROPERTIES
95386 90359, 90359 90359

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3 BHK ಡ್ಯೂಪ್ಲೆಕ್ಸ್ ಫುಲ್ ಫರ್ನಿಶ್ಡ್, ಓನ್ ಬೋರ್‌ವೆಲ್ MUDA APPROVED ಮನೆ ಮಾರಾಟಕ್ಕಿದೆ. ಬೆಲೆ: 69 ಲಕ್ಷ ನಂಜುಂಡಸ್ವಾಮಿ HS. ಮಾಜಿ ಸೈನಿಕರು
9483862050
8660625801

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ, EDUCATION SSLC, PUC, ITI, DIPLOMA, DEGREE. SALARY (18k -38k)
9739121355
7899627704



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಬೀದಿ ಬದಿ ವ್ಯಾಪಾರ ಮಾಡುವವರು ದ್ವಿಚಕ್ರ ವಾಹನ ಇರುವವರು ದಿನಕ್ಕೆ 500 ರಿಂದ 1000 ರೂ ಲಾಭ ಪಡೆಯಿರಿ, ಸಂಪರ್ಕಿಸಿ:
9449129488

ನಂಜನಗೂಡಿನ ಸಂಜಯ್ ನಗರ ಬಡಾವಣೆಯಲ್ಲಿ 30x40 ಅಳತೆಯ ಉತ್ತಮ ಗುಣಮಟ್ಟದ ನಿರ್ಮಾಣದ
2 ಬೆಡ್‌ರೂಂ ಮನೆ
~~50 ಲಕ್ಷ~~ ಕೇವಲ 39 ಲಕ್ಷ
8792306996
ಬ್ಯಾಂಕ್ ಲೋನ್ ದೊರೆಯುತ್ತದೆ

SITE FOR SALE
30 x 40 'A' Khatha, Alanahalli, S D Jayaran Layout, 30 x 40 'A' Khatha, E Block, 2nd stage, Nachanahalli Layout, JP Nagar, 21 x 50 'A' Khatha, SARVAJANIKA ASHRAM ROAD, VIDYARANYAPURAM HOUSE, 40 × 50 'A' Khatha, Kergalli, Near Dattagalli Mysuru, Contact Number
8553050040

ಮುಡಾ ಮಂಜೂರಾತಿ ನಿವೇಶನ ಮಾರಾಟಕ್ಕಿದೆ
40x60 ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್‌ಮಾರ್ಕೆಟ್ ಎದುರು ಮೈಸೂರು, ಆಸಕ್ತರು ಸಂಪರ್ಕಿಸಿ
8904497670

SITE FOR SALE
Mysore JP Nagar Srinagar (opposite MMG Layout) North facing 10890 sqft, 8 kilometres from city centre. 2) Kuberananda Sagara (Mysore) 50x80 South facing. Owner meeting.
Mob: 9342114717

MUDA ALLOTED SITE FOR SALE
30'x40' NORTH Face Vijayanagara 4th Stage Near NPS School.
Call : 9886048471

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗ ಹುಡಗಿಯರು ವಯೋಮಿತಿ: 18 ರಿಂದ 35 ವರ್ಷದೊಳಗೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ಸ್ಥಳ : ಗಾನವಿ ಇಂಟರ್‌ನ್ಯಾಷನಲ್ ಚಂದ್ರ ಗುಪ್ತ ರೋಡ್, ಮೈಸೂರು
9620436665
9620476665
9620546665

MUDA SITE FOR SALE
30X40' E/F
Vijayanagar 4th Stage, 2nd phase, Near Marimallappa Education Trust, Clear documents for immediate, Registration, 1.25 Negotiable Good Location
8867757056

FOR RENT
Single room with attach bath 1st floor No. 873, 14th Cross, 8th Main, Saraswathipuram, opposite Bandanthamma Temple, new Kantharaj Urs Road. Contact:
Mob: 9902404608

SITES FOR SALE
MUDA Approved ANANDA SAGARA PRAGATHI NAGAR NITYANANDA SAGARA PARAMANANDA SAGARA KUBERANANDA SAGARA 30x40, 50x80 & 40x60
JK 8951144240

ಕೆಲಸ ಖಾಲಿ ಇದೆ
ವರ್ಕ್ ಫ್ರಂ ಹೋಂ, ಮೈಸೂರಿನಾದ್ಯಂತ ಕಂಪನಿಗಳಿಗೆ ಮತ್ತು ಆಫೀಸ್‌ಗಳಿಗೆ ಯುವಕ, ಯುವತಿಯರಿಗೆ ನೇರ ಆಯ್ಕೆ 4th, 7th, 10th, PUC, Any Degree. 25000-35000.
Mob: 9742133993

NANDHI PROPERTIES
DTCP APPROVED SITES FOR SALE 30x40 & 30x50 Yelwala to Hunsur main road. 2800/sft Ready to register. Contact:
Mob: 9483067223

40x60 SITE FOR SALE
Site No. 12365 South Facing, Opp. Park, Near Ring Road, Vijayanagar 4th Stage.
Mob: 7899214181

HOUSE FOR SALE
30x40 West face site 2 floor, 9 years old house MUDA Allotted site 1.65 Crore (Negotiable) Shakthinagar Park near property. Guide House Properties
9535171710, 9740281710

FOR SALE
21x35 GF 2 shop, 1 BHK house FF 2 BHK house 2nd Floor 1 BHK house.
Contact: 9482121750
Vidyaranyapuram, 16th Cross

SITES FOR SALE
40x60 N/F Vijayanagar 4th Stage, 1st Phase. 40x60 N/F Dattagalli Karthik Layout 30x40 & 20x40 CFTRI Layout, Sharadadevi Nagar, Bogadi Ring Road 10 sites judicial 30x40 E/F sale or purchase.
Mob: 9141506297

RS CONSTRUCTION Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವೇ ನಿರ್ಮಿಸಿ ಕೊಡುತ್ತೇವೆ. ದರ 1,85,000/– ಪ್ರತಿ ಚದರ. ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ:
9538575009, 7019151884

ಮನೆ ಬಾಡಿಗೆಗೆ ಇದೆ
ಕುವೆಂಪುನಗರ 2ನೇ ಕ್ರಾಸ್ POOJA ಬೇಕರಿ ಹತ್ತಿರ ಕೆಳಗಡೆ ಮನೆ 30x45 ಅಳತೆಯುಳ್ಳ ಮನೆ ಬಾಡಿಗೆಗೆ ಇದೆ. 2room ವರಾಂಡ Pooja Big Hall Solar, ಸೌಲಭ್ಯ ಇದೆ. ಬೇಕಾದವರು ಮಾತ್ರ ಸಂಪರ್ಕ ಮಾಡಿ. ಬ್ರೋಕರ್‌ಗೆ ಅವಕಾಶ ಇಲ್ಲ
9739200487

SITES FOR SALE
40x60 & 50x80 site sale at Saraswathipuram, Kuvempunagar, Gokulam & Dattagalli. 30x40 at Siddartha Layout.
Call: 7353430309

Home for the Aged
Providing care for all senior citizens with comfortable accommodation, vegetarian food, professional nursing support in a homely environment & day care facility also available.
9607172737, 7353430309

Document Lost
I Have Lost Original Title deed of Property No 15, 7th Cross, 6th Main, Saraswathipuram, Mysore. Document No Page No 1, Register No 7504/ 1997-98 Page No 156-163 Samputa 4892 Dtd 31/3/1998 Near Saraswathi puram on 17/1/2026 if Anyone finds the Document. Please Contact to the below No.
T Geetha - 8147681035

ಜಮೀನು ಮಾರಾಟಕ್ಕಿದೆ
2 ಎಕರೆ 11 ಗುಂಟೆ ಜಮೀನು (ಜನರಲ್ ಪ್ರಾಪರ್ಟಿ) ಫ್ಯಾಕ್ಟರಿ ಉದ್ದೇಶಕ್ಕಾಗಿ ಅಲೀನೇಷನ್ ಆಗಿರುತ್ತದೆ. ಬದನವಾಳು ಗ್ರಾಮ ನಂಜನಗೂಡು to ಚಾಮರಾಜನಗರ, ಮುಖ್ಯರಸ್ತೆ, ಇಂಡಿಯನ್ ಆಯಿಲ್ ಪೆಟ್ರೋಲ್ ಪಂಪ್ ಎದುರು ಸಂಪರ್ಕಿಸಿ. ಯತೀಶ್
8970054974

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 13000-15000/-
Ph.7406 369 369

SITE FOR SALE
60x40 W/F Suvarnanagar, Bogadi
Mob: 9742421313

PREMIUM MUDA SITE FOR SALE
40'x60' East Face 60 ft Road Width KNS CALISTO Layout @ Kergalli.
Call : 9886048471

ಮನೆ ಮಾರಾಟಕ್ಕಿದೆ
ಮೈಸೂರು ಸಿಟಿ, ಕುವೆಂಪುನಗರ "M" ಬ್ಲಾಕ್‌ನಲ್ಲಿ 20x30ರ ನಿವೇಶನದಲ್ಲಿರುವ 2BHK ಗ್ರೌಂಡ್ ಫ್ಲೋರ್+1ನೇ ಮಹಡಿ+ ಎರಡನೇ ಮಹಡಿ ಹಾಗೂ 3ನೇ ಮಹಡಿಯಲ್ಲಿ ಒಂದು ರೂಂ ಹಾಗೂ AEH, SOLAR ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುವ ಸ್ವತ್ತು ಮಾರಾಟಕ್ಕಿದೆ. ಸಂಪರ್ಕಿಸಿ
9449703452

ಸೈಟ್ ಮಾರಾಟಕ್ಕೆ ಇದೆ
30x40 ಉತ್ತರ ದಕ್ಷಿಣ 40x60 ಉತ್ತರ ಪಶ್ಚಿಮ, ಪೂರ್ವ ಯುನಿವರ್ಸಿಟಿ ಲೇಔಟ್, ರಿಂಗ್ ರೋಡ್ ಹತ್ತಿರ 40x60 MIT ಕಾಲೇಜ್ ಹತ್ತಿರ 30x40 ATM ಕಾಲೇಜ್ ಹತ್ತಿರ ವರುಣ, ಬನ್ನೂರು ರೋಡ್, ದಡದಹಳ್ಳಿ ಹತ್ತಿರ. ಸಂಪರ್ಕಿಸಿ :
Ph: 9900372792

ಸೈಟ್ ಮಾರಾಟಕ್ಕಿದೆ
30x40 ಸೈಟ್ ದಟ್ಟಗಳ್ಳಿ 40x60 ಸೈಟ್ ಶ್ರೀ ಬನಶಂಕರಿ, ರಿಯಲ್ ಎಸ್ಟೇಟ್ ಮಹಾಸರ್ಕಲ್ ಹತ್ತಿರ, ದಟ್ಟಗಳ್ಳಿ
9945042875

ಬೇಕಾಗಿದ್ದಾರೆ
* ಸೆಕ್ಯೂರಿಟಿ ಗಾರ್ಡ್ & ಸೂಪರ್‌ವೈಸರ್ –21000/–, ವೇತನ 14000/– 17500, * ಪಾತ್ರೆ ವಾಷಿಂಗ್ ಹುಡುಗರು, ವೇತನ 15,700/– * ಹೌಸ್‌ಕೀಪಿಂಗ್ ಹುಡುಗರು, ವೇತನ 15,700 ರಿಂದ 18,000/–, ವಯೋಮಿತಿ 18 ರಿಂದ 50 ವರ್ಷ. ವಸತಿ, ಊಟ ಮತ್ತು ESI, PF ಇರುತ್ತದೆ. ಸಂಪರ್ಕಿಸಿ
Contact : 9880116412, 9900663249, 9060106667

ಆದಿ ಕರ್ನಾಟಕ(SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com M.Sc, MBA, MBBS, BE, M.Tec, B.Ed, D.Ed, M.ED, ವಿವಾಹ ನೋಂದಣಿಗೆ ಕರೆ ಮಾಡಿ, (2nd Marriage also)
9164743059

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ದಮ್ಮನಕಟ್ಟೆಯಲ್ಲಿ ಸಫಾರಿ ಆರಂಭಿಸಿ

ಹೆಚ್.ಡಿ.ಕೋಟೆಯಲ್ಲಿ ರೆಸಾರ್ಟ್ ಕಾರ್ಮಿಕರು, ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನಾ ಮೆರವಣಿಗೆ



ರೆಸಾರ್ಟ್ ಸಿಬ್ಬಂದಿಗಳು ಹೆಚ್.ಡಿ.ಕೋಟೆಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಹೆಚ್.ಡಿ.ಕೋಟೆ: ದಮ್ಮನಕಟ್ಟೆಯಲ್ಲಿ ಸಫಾರಿ ಆರಂಭಿಸುವಂತೆ ಒತ್ತಾಯಿಸಿ ರೆಸಾರ್ಟ್ ಕಾರ್ಮಿಕರು ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಶುಕ್ರವಾರ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

> **ಹೆಚ್.ಡಿ.ಕೋಟೆ ತಾಲೂಕಿನಲ್ಲಿ ರೈತರ ಸಮಸ್ಯೆಗಳು ಸಾಕಷ್ಟು ಇವೆ. ಇದರ ಬಗ್ಗೆ ರೈತ ಸಂಘದ ಕೆಲ ರೈತ ಮುಖಂಡರುಗಳು ಧ್ವನಿಗೂಡಿಸಬೇಕು. ಅದನ್ನು ಬಿಟ್ಟು ಸಫಾರಿ ನಿಲ್ಲಿಸುವಂತೆ ಒತ್ತಾಯಿಸುವುದು ಯಾವ ನ್ಯಾಯ. ತಾಲೂಕಿನಲ್ಲಿರುವ ರೆಸಾರ್ಟ್‌ಗಳಲ್ಲಿ, ಸಾಕಷ್ಟು ರೈತರ ಮಕ್ಕಳಿಗೆ ಉದ್ಯೋಗವನ್ನು ನೀಡಲಾಗಿದೆ. ಇದರಿಂದ ಆ ಕುಟುಂಬಗಳು ಜೀವನ ನಿರ್ವಹಿಸುತ್ತಿವೆ.**
> – ಬೀರಂಬಳ್ಳಿ ಪ್ರಭಾಕರ್, ರೈತ ಮುಖಂಡ

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಿಂದ ದಲಿತ ಸಂಘರ್ಷ ಸಮಿತಿ, ಪ್ರಗತಿಪರ ಸಂಘಟನೆಗಳು, ವಾಹನ ಚಾಲಕರು ಹಾಗೂ ರೆಸಾರ್ಟ್‌ಗಳ ಕೂಲಿ ಕಾರ್ಮಿಕರ ಸಂಯುಕ್ತ ಆಶ್ರಯದಲ್ಲಿ ಸಫಾರಿ ಪ್ರಾರಂಭಿಸಿ ಎಂದು ಒತ್ತಾಯಿಸಿ ಭವನದಿಂದ ಮೆರವಣಿಗೆ ಹೊರಟು ದಾರಿಯುದ್ದಕ್ಕೂ ಸಫಾರಿ ಕೇಂದ್ರ ಪ್ರಾರಂಭಿಸುವಂತೆ ಘೋಷಣೆ ಕೂಗಿ ತಾಲೂಕು ಆಡಳಿತ ಸೌಧದ ಎದುರು ಮಾನವ ಸರಪಳಿ ನಿರ್ಮಿಸಿ ನಂತರ ತಹಸೀಲ್ದಾರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ರೆಸಾರ್ಟ್‌ನ ಕಾರ್ಮಿಕ ಚಾಮರಾಜು ಮಾತನಾಡಿ, ನಾಗರಹೊಳೆ ಅಭಯಾರಣ್ಯದಲ್ಲಿ ಸಫಾರಿ ನಿಲ್ಲಿಸಿರುವುದರಿಂದ ರೆಸಾರ್ಟ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನಾನುಕೂಲವಾಗಿ ಕುಟುಂಬಗಳು ಬೀದಿ ಪಾಲಾಗಿವೆ. ತಾಲೂಕಿನ ರೆಸಾರ್ಟ್‌ಗಳಲ್ಲಿ ಸುಮಾರು 2000 ಉದ್ಯೋಗಿಗಳು ಕೆಲಸ ಮಾಡುತ್ತಿದ್ದು ಇದರಿಂದ ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಿದ್ದರು. ಆದರೆ ಸಫಾರಿ ಬಂದ್ ಮಾಡಿರುವ ಹಿನ್ನೆಲೆಯಲ್ಲಿ ಕೆಲಸವನ್ನು ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಡುಮನೆ ಪ್ರಕಾಶ್ ಮಾತನಾಡಿ, ಸರಗೂರು ತಾಲೂಕಿನಲ್ಲಿ ನಡೆದ ಹುಲಿ ದಾಳಿ ಪ್ರಕರಣವನ್ನು ಮುಂದಿಟ್ಟುಕೊಂಡು ಸರ್ಕಾರ ಸಫಾರಿ ಬಂದ್ ಮಾಡಿರುವುದು ಸರಿಯಾದ ಕ್ರಮವಲ್ಲ ಎಂದರು.

ಕಾಡುಮನೆ ಪ್ರಸನ್ನ ಮಾತನಾಡಿ ತಾಲೂಕಿನಲ್ಲಿ ಪ್ರಾಣಿ, ವನ್ಯ ಮತ್ತು ಜಲ ಸಂಪತ್ತಿನಿಂದ ಕೂಡಿದ್ದು ಪ್ರವಾಸಿಗರು ಇದನ್ನು ಕಣ್ತುಂಬಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ತಾಲೂಕಿಗೆ ಬರುತ್ತಿದ್ದರು. ಇದರಿಂದ ತಾಲೂಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಹೊಂದಿತ್ತು. ತಾಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ನೀಡಲಾಗಿತ್ತು. ಕಾಡಂಚಿನ ಗ್ರಾಮಗಳಲ್ಲಿ ಮಾನವ ಪ್ರಾಣಿ ಸಂಘರ್ಷಕ್ಕೆ ಸರ್ಕಾರ ವೈಜ್ಞಾನಿಕ ಕಾರಣಗಳನ್ನು ಹುಡುಕಿ ಪರಿಹರಿಸುವ ಕೆಲಸ ವನ್ನು ಮಾಡಬೇಕು ಎಂದು ಮನವಿ ಮಾಡಿದರು.

ರೆಸಾರ್ಟ್ ಕಾರ್ಮಿಕ ಮಹಿಳೆ ಸರಸ್ವತಿ ಮಾತನಾಡಿ, ನಾವುಗಳು ಹಳ್ಳಿಗಾಡಿನ ಮಹಿಳೆಯರಾಗಿದ್ದು ಮೊದಲು ಉದ್ಯೋಗ ಅರಸಿ ಕೊಡಗು ಕೇರಳ ಕಡೆಗಳಿಗೆ ತೆರಳಿ ಕೂಲಿ ಕೆಲಸ ಮಾಡಬೇಕಿತ್ತು, ಆದರೂ ಅಷ್ಟು ದೂರ ತಲುಪಿ ಕೆಲಸ ಮಾಡುವುದು ಸಾಕಷ್ಟು ಕಷ್ಟಕರವಾಗಿತ್ತು. ಆದರೆ, ನಮ್ಮ ತಾಲೂಕಿನಲ್ಲಿ ರೆಸಾರ್ಟ್‌ಗಳು ಆರಂಭಗೊಂಡಿದ್ದ ದಿನದಿಂದ ಎಷ್ಟೋ ಮಹಿಳೆಯರು ಇಲ್ಲಿ ಕೆಲಸ ಮಾಡಿ ನೆಮ್ಮದಿ ಜೀವನ ಮಾಡಿಕೊಂಡು ನಮ್ಮ ಕುಟುಂಬವನ್ನು ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದೇವೆ ಹಾಗಾಗಿ ಸಫಾರಿ ಪ್ರಾರಂಭಿಸಿ ಎಂದು ಮನವಿ ಮಾಡಿದರು.

ನಂತರ ತಹಸೀಲ್ದಾರ್ ಶ್ರೀನಿವಾಸ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ದಸಂಸ ಸಣ್ಣ ಕುಮಾರ್, ಚಾ.ಶಿವಕುಮಾರ್, ಹೈರಿಗೆ ಶಿವರಾಜು, ಜಿವಿಕ ಬಸವರಾಜು, ಅನುಷ, ಪುಟ್ಟಮಾದು, ದೇವಯ್ಯ, ಶಿವಪ್ಪ ವಿನೋದ್, ವಿಶ್ವ ಆರಾಧ್ಯ, ಗೋವಿಂದ, ಸ್ವಾಮಿ, ಗ್ಯಾಸ್ ಪ್ರಕಾಶ್, ಆಟೋ ಕುಮಾರ್, ವಾಹನ ಚಾಲಕರ ಸಂಘದ ಅಧ್ಯಕ್ಷ ಲಕ್ಷ್ಮಣ್, ಮಣಿ ಕಂಠ, ಆಕಾಶ್, ಸದಾಶಿವ, ಮಂಜು, ಚಾಮರಾಜು, ಚಂದ್ರು, ಶರತ್, ಷಣ್ಮುಗಂ, ಉದಯ, ಇದ್ದರು.

ಜೈಲಿನಿಂದ ಬಿಡುಗಡೆಯಾದ ಒಂದೇ ವಾರದಲ್ಲಿ ಯುವಕನ ಅನುಮಾನಾಸ್ಪದ ಸಾವು

ತಿ.ನರಸೀಪುರ, ಜ.23– ಹುಡುಗಿಯನ್ನು ಕರೆದುಕೊಂಡು ಹೋಗಿದ್ದ ಆರೋಪದಲ್ಲಿ ಜೈಲು ಶಿಕ್ಷೆ ಅನುಭವಿಸಿ ಹೊರ ಬಂದ ಒಂದೇ ವಾರದಲ್ಲಿ ಯುವಕನೊಬ್ಬ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ತಾಲೂಕಿನ ಚಿದರವಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಚಿದರವಳ್ಳಿ ಗ್ರಾಮದ ಮಹದೇವಯ್ಯ ಎಂಬುವರ ಪುತ್ರ ಚಿನ್ನಸ್ವಾಮಿ(24) ಎಂಬುವರೇ ಅನುಮಾನಾಸ್ಪದವಾಗಿ ನೇಣು ಬಿಗಿದ ಸ್ಥಿತಿಯಲ್ಲಿ ಮೃತ ಪಟ್ಟಿರುವ ವ್ಯಕ್ತಿ.

ಚಿನ್ನಸ್ವಾಮಿ ಕೂಲಿ ಕೆಲಸ ಮಾಡುಕೊಂಡಿದ್ದು ಮನೆ ಇಲ್ಲದ ಹಿನ್ನೆಲೆಯಲ್ಲಿ ಚಿದರವಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಒಳಗಿನ ಪಡಸಾಲೆಯಲ್ಲಿ ತಮ್ಮ ತಂದೆ–ತಾಯಿಯೊಂದಿಗೆ ಬಂದು ಮಲಗುತ್ತಿದ್ದನೆನ್ನಲಾಗಿದೆ.

ಚಿನ್ನಸ್ವಾಮಿ ಮೇಲೆ ತಿ.ನರಸೀಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕಳ್ಳತನದ ಕೇಸ್ ದಾಖಲಾಗಿತ್ತಲ್ಲದೇ ಆರು ತಿಂಗಳ ಹಿಂದೆ ಕೌಲಂದೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹುಡುಗಿಯೊಬ್ಬಳನ್ನು ಕರೆ ದುಕೊಂಡು ಹೋಗಿದ್ದ ಪ್ರಕರಣ ದಲ್ಲಿ ಕೇಸು ದಾಖಲಾಗಿ ಮೈಸೂರು ಕಾರಾ ಗೃಹದಲ್ಲಿ 6 ತಿಂಗಳ ಜೈಲು ಶಿಕ್ಷೆ ಅನುಭ ವಿಸಿ ಒಂದು ವಾರದ ಹಿಂದೆಯಷ್ಟೇ ಜೈಲಿ ನಿಂದ ಬಿಡುಗಡೆಯಾಗಿದ್ದ ಎಂದು ಹೇಳಲಾಗಿದೆ.

ಚಿನ್ನಸ್ವಾಮಿ ಎಂದಿನಂತೆ ಕೂಲಿ ಕೆಲಸ ಮಾಡಿ ರಾತ್ರಿ ಬಂದು ಶಾಲಾ ಕಾಂಪೌಂಡ್ ಒಳಗಿನ ಪಡಸಾಲೆಯಲ್ಲಿ ಮಲಗಿದ್ದನೆನ್ನಲಾಗಿದ್ದು, ಬೆಳಿಗ್ಗೆ ನೋಡಿದಾಗ ಕಟ್ಟಡದ ಜಂತಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಚಿನ್ನಸ್ವಾಮಿ ಶವ ಪತ್ತೆಯಾಗಿದೆ. ಕೂಡಲೇ ಜಂತಿಗೆ ನೇಣು ಬಿಗಿದ ಲುಂಗಿಯನ್ನು ಕತ್ತರಿಸಿ ಕೆಳಗಿಳಿಸಿದ್ದಾರೆ. ನಂತರ ಕತ್ತಿಗೆ ಬಿಗಿದಿದ್ದ ಲುಂಗಿಯನ್ನು ಚಾಕುವಿನಿಂದ ಕತ್ತರಿಸುವ ಸಂಧರ್ಭದಲ್ಲಿ ಆಕಸ್ಮಿಕವಾಗಿ ಚಾಕು ಕುತ್ತಿಗೆಗೆ ತಾಗಿ ರಕ್ತ ಸೋರಿಕೆಯಾಗಿದೆ.

ಚಿನ್ನಸ್ವಾಮಿ ಸಾವಿನ ಬಗ್ಗೆ ಅನುಮಾನವಿದ್ದು, ತನಿಖೆ ನಡೆಸುವಂತೆ ಮೃತನ ಚಿಕ್ಕಪ್ಪ ಮಹದೇವ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು ಕೇಸು ದಾಖಲಿಸಿಕೊಂಡಿರುವ ಪಿಎಸ್‌ಐ ಜಗದೀಶ್ ದೂಳ್ ಶೆಟ್ಟಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶ್ರೀ ಚಿಕ್ಕದೇವಮ್ಮನವರ ವಾರ್ಷಿಕೋತ್ಸವ ಅದ್ಧೂರಿ ಆಚರಣೆ

ಸರಗೂರು: ಪಟ್ಟಣದ ನಾಯಕ ಸಮಾಜದ ವತಿಯಿಂದ ಶ್ರೀ ಚಿಕ್ಕದೇವಮ್ಮನವರ 49ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಮೆರವಣಿಗೆಯನ್ನು ವಿಜೃಂಭಣೆಯಿಂದ ನಡೆಯಿತು.

ಶ್ರೀ ಚಿಕ್ಕದೇವಮ್ಮನವರ 49ನೇ ವರ್ಷದ ವಾರ್ಷಿಕೋತ್ಸವು ಇಂದಿನಿಂದ ಆರಂಭವಾಗಿದ್ದು ಮಂಗಳವಾರ ತನಕ ನಡೆಯಲಿದ್ದು, ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ ತಳಿರು ತೋರಣ ಕಟ್ಟಿ ರಂಗೋಲಿ ಬಿಡಿಸಿ ಸಿಂಗರಿಸಲಾಗಿತ್ತು.

ಶುಕ್ರವಾರ ಬೆಳಿಗ್ಗೆ 4 ಗಂಟೆಗೆ ಶ್ರೀ ಚಿಕ್ಕದೇವಮ್ಮನವರ ದೇವಾಯದಲ್ಲಿ ಮಂಗಳ ವಾದ್ಯದೊಂದಿಗೆ ಸಂಕಲ್ಪ, ಮಹಾಗಣಪತಿ ಪೂಜೆ, ಪುಣ್ಯಾಹ ಕಳಸ ಸ್ಥಾಪನೆ, ನವಗ್ರಹ ಹೋಮ, ದುರ್ಗಹೋಮ, ಅಮ್ಮನವರಿಗೆ ಪಂಚಾಮೃತ ಅಭಿಷೇಕ, ಸಹಸ್ರ ನಾಮ, ಪೂರ್ಣಕುಂಭ ತರುವಿಕೆ ನಡೆಸಲಾಯಿತು.

ನಂತರ ಶ್ರೀ ಚಿಕ್ಕದೇವಮ್ಮನವರ ಹೂವಿನ ಪಲ್ಲಕ್ಕಿ ಉತ್ಸವವನ್ನು ಮಂಗಳವಾದ್ಯದೊಡನೆ ಕಪಿಲಾ ನದಿ ದಡಕ್ಕೆ ಬಿಜಂಗೈಸಿ ಮಂಗಳವಾದ್ಯ, ಬ್ಯಾಂಡ್ ಸೆಟ್, ಸತ್ತಿಗೆ ವೀರಗಾಸೆ, ಇನ್ನಿತರ ಕಲಾ ತಂಡಗಳೊಂದಿಗೆ ಪಟ್ಟಣದ ರಾಜ ಬೀದಿಗಳಲ್ಲಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಬಂದು ವಿಶೇಷ ಪೂಜೆ ನಡೆಸಿ ಮಹಾ ಮಂಗಳಾರತಿ ಮಾಡಿ ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು.

ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು ಹೊಸ ಬಟ್ಟೆ ದರಿಸಿ 101 ಕಳಸ ಹೊತ್ತು ಹರಕೆ ತೀರಿಸಿದರೆ, ಮನೆ ಮುಂದೆ ಬರುವ ಪಲ್ಲಕ್ಕಿ ಉತ್ಸವಕ್ಕೆ ಮಹಿಳೆಯರು ಹೆಜ್ಜೆ ಹೆಜ್ಜೆಗೂ ಆರತಿ ಮಾಡಿ ಈಡುಗಾಯಿ ಸೇವೆ ಸಲ್ಲಿಸಿದರು.

ಪಲ್ಲಕ್ಕಿ ಉತ್ಸವ ಮೆರವಣಿಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ ತಾಯಿ ನಾಗಮ್ಮ, ಶ್ರೀಮತಿ ಸೌಮ್ಯ ಅನಿಲ್, ತಾಯಿಯ ದರ್ಶನ ಪಡೆದು ತಾಯಿ ಚಿಕ್ಕದೇವಮ್ಮ ಸರ್ವರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಿದರು. ಪೂಜಾ ಸೇವೆಯನ್ನು ಪುರೋಹಿತ್ ಹರೀಶ್, ಗೋಪಿನಾಥ್, ಸುಕ್ರುತ್ ಭಾರತ್ ದ್ವಜ್ ನೆರವೇರಿಸಿದರು,



ಸರಗೂರಲ್ಲಿ ಶ್ರೀ ಚಿಕ್ಕದೇವಮ್ಮನವರ ಪಲ್ಲಕ್ಕಿ ಮೆರವಣಿಗೆ ನಡೆಸಲಾಯಿತು.

ಶುಕ್ರವಾರ ರಾತ್ರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಕತ್ವದಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತ ವಿಕಲಚೇತನ ಕಲಾವಿದರು ಡಾ.ಜವರನಾಯಕ ಪಿ.ಆಗತ್ತೂರು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

ಹರತಲೆಯಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ



ನಂಜನಗೂಡು: ವಿದ್ಯಾರ್ಥಿಯು ಕೇವಲ ಪಠ್ಯಪುಸ್ತಕದ ವಿಷಯಗಳ ಕಲಿಕೆಗಿಂತ ಆಚೆಗೆ ಹೋಗಿ, ತನ್ನ ನವೀನ ಚಿಂತನೆಗಳ ಅನುಭವದ ಮೂಲಕ ಕಲಿಕೆಯ ಕೌಶಲ್ಯಗಳು ಬೆಳೆಸುವುದು ಕಲಿಕಾ ಹಬ್ಬದ ವಿಷಯವಾಗಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಹೇಳಿದರು.

ತಾಲೂಕಿನ ಹರತಲೆ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸ್ವಯಂ ಅನುಭವ ಮತ್ತು ಕೌಶಲ್ಯಗಳನ್ನು ಉಪಯೋಗಿಸಿ ನವೀನ ಚಿಂತನೆಗಳ ಮೂಲಕ ಕಲಿಕೆಯನ್ನು ಉತ್ತಮಪಡಿಸಲು ಹಾಗೂ ಕಲಿಕೆಯನ್ನು ಹಬ್ಬದ ಮೂಲಕ ಮತ್ತು ಪದ್ಯಗಳ ಮೂಲಕ, ಕಥೆ ಹೇಳುವ ಮೂಲಕ, ಸ್ಪರ್ಧೆ ಮಾಡುವ ಮೂಲಕ ಹಬ್ಬದ ಮಾದರಿಯಲ್ಲಿ ಕಲಿಯುವುದು ಅಲ್ಲದೆ ವಿದ್ಯಾರ್ಥಿಯು ಆಸಕ್ತಿದಾಯಕವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು. ಇದರಿಂದ ಸಾಧ್ಯವಾಗಲಿದೆ ಜೊತೆಗೆ ಶಿಕ್ಷಕರು ಸಹ ವಿದ್ಯಾರ್ಥಿಗಳಿಗೆ ತನ್ನ ಸೃಜನಾತ್ಮಕ ಶಕ್ತಿಯಿಂದ ನವೀನ ಮಾದರಿಯಲ್ಲಿ ಕಲಿಸಲು ಸಹಾಯಕವಾಗುತ್ತದೆ ಎಂದರು.

ಸಮಾರಂಭದಲ್ಲಿ ಎಸ್.ಡಿ.ಎಮ್.ಸಿ ಉಪಾಧ್ಯಕ್ಷ ನಾಗಮಣಿ, ಸಿಆರ್‌ಪಿ ಕಿರಣ್, ಪುಟ್ಟರಾಜು, ನೀಲಿಸಿದ್ದು, ಗ್ರಾಪಂ ಸದಸ್ಯರಾದ ಗೋವಿಂದರಾಜು, ಕಾಂತರಾಜು, ಮಹಾಲಕ್ಷ್ಮಿ, ರತ್ನಮ್ಮ, ನಂಜನಾಯಕ, ಮಮತಾ, ಮುಖಂಡರಾದ ನಾಗರಾಜು, ಪೂರ್ಣಿಮಾ, ಮಮತಾ, ರಮ್ಯ, ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

ಬೆಂಕಿಪುರ ತಂಡಕ್ಕೆ ಜೈ ಭೀಮ್ ಕಪ್



ಜಯಪುರ, ಜ.23–ಮೈಸೂರು ತಾಲೂಕು ಜಯಪುರ ಹೋಬಳಿಯ ದೂರ ಗ್ರಾಮದಲ್ಲಿ ದುಗ್ಗಲಮ್ಮ ಜಾತ್ರಾ ಮಹೋತ್ಸವ ಪ್ರಯುಕ್ತ ಸಾಮ್ರಾಟ್ ಅಶೋಕ್ ಯೂತ್ಸ್ ವತಿಯಿಂದ ಆಯೋಜಿಸಿದ್ದ ಜೈ ಭೀಮ್ ಕಪ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ವಿಜೇತರಾದ ಹುಣಸೂರು ತಾಲೂಕು ಬೆಂಕಿಪುರ ತಂಡಕ್ಕೆ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಟಿ ದೇವೇಗೌಡ ಟ್ರೋಫಿ ವಿತರಣೆ ಮಾಡಿದರು.

ಸಮಾಜ ಸೇವಕರಾದ ಎಸ್.ಶ್ರೀಕಾಂತ್ ಬೆಂಕಿಪುರ ತಂಡಕ್ಕೆ ವೈಯುಕ್ತಿಕವಾಗಿ 30ಸಾವಿರ ರೂಪಾಯಿಗಳ ನಗದು ಬಹುಮಾನ ನೀಡಿದರು. ದೂರ ಗ್ರಾಮದ ಸಾಮ್ರಾಟ್ ಅಶೋಕ್ ಯೂತ್ಸ್ ತಂಡ ರನ್ನರ್ ಆಪ್ ಸ್ಥಾನ ಪಡೆದುಕೊಂಡಿತು.

ಟ್ರೋಫಿ ವಿತರಣೆ ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ರೂಪಾ ಲೋಕೇಶ್, ಗೆಜ್ಜಗಳ್ಳಿ, ದೂರ ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ, ಟೂರ್ನಿ ಆಯೋಜಕರಾದ ನಂದೀಶ್, ಮುಖಂಡರಾದ ಡಿ.ಬಿ ನಾಗರಾಜು, ಎಂ.ನಾಗರಾಜು, ಪುಟ್ಟಸ್ವಾಮಿ, ರಾಮಮೂರ್ತಿ ಮತ್ತು ಸಾಮ್ರಾಟ್ ಅಶೋಕ್ ಯೂತ್ಸ್ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂಡೋ-ಮಲೇಷಿಯಾ ಯೋಗ ಚಾಂಪಿಯನ್‌ಶಿಪ್

ಕೆ.ಆರ್.ನಗರದ ಯೋಗಪಟುವಿಗೆ ಚಿನ್ನದ ಪದಕ

ಕೆ.ಆರ್.ನಗರ: ಇಂಡೋ–ಮಲೇಷಿಯಾದಲ್ಲಿ ನಡೆದ 2026ರ ಯೋಗ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಮೈಸೂರು ಜಿಲ್ಲೆಯ ಕೆ.ಆರ್.ನಗರ ಪಟ್ಟಣದ ಎ.ಎಸ್. ಗೀತಾಂಜಲಿ ಅವರು 35 ರಿಂದ 45ರ ವಯೋಮಿತಿಯ ಮಹಿಳಾ ಯೋಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವುದರ ಜೊತೆಗೆ ಚಿನ್ನದ ಪದಕ ಪಡೆದು ದೇಶದ ಕೀರ್ತಿ ಪತಾಕೆ ಹಾರಿಸಿದ್ದಾರೆ.

ಮಲೇಷಿಯಾದ ಕೌಲಾಲಂಪುರನಲ್ಲಿ ಇದೇ ಜ.17ರಿಂದ 20 ರವರೆಗೆ ನಡೆದ ಪ್ರತಿಷ್ಠಿತ ಇಂಡೋ–ಮಲೇಷಿಯಾ 2026ರ ಯೋಗ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಯೋಗ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿ ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ.

ಇಂಡೋ ಮಲೇಷಿಯಾ ಅಂತರರಾಷ್ಟ್ರೀಯ ಯೋಗ ಚಾಂಪಿಯನ್‌ಶಿಪ್ ಅನ್ನು ವರ್ಲ್ಡ್ ಯೋಗ ಮತ್ತು ಸ್ಪೋರ್ಟ್ಸ್



ಎಜುಕೇಶನ್ ಕೌನ್ಸಿಲ್ (KR–03–0639809) ಆಯೋಜಿಸಿದ್ದು, ಅವಿನಾಶ್ ಯೋಗ ಫೌಂಡೇಶನ್ ಸಹ–ಆಯೋಜಕರಾಗಿದ್ದು. ಪಟ್ಟಣದ ಗೀತಾಂಜಲಿ ಮಣಿಕಂಠ ಅವರು ಕೆ.ಆರ್.ನಗರದ ಸುಮುಖ ಯೋಗ ಕೇಂದ್ರದಲ್ಲಿ ಶಿಕ್ಷಕರಾದ ಯೋಗ ಮಣಿ ಮತ್ತು ರೇವಣ್ಣ ಅವರ ಮಾರ್ಗದರ್ಶನದಲ್ಲಿ ಅತ್ಯುತ್ತಮ ಯೋಗ ಪಟುವಾಗಿ ರೂಪುಗೊಂಡು ಹಾಗೆಯೇ ಗೀತಾಂಜಲಿ ಅವರು ಪಟ್ಟಣದ ಸಂತ ಜೋಸೆಫರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 20 ವರ್ಷಗಳಿಂದ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ನಿರಂತರ ಯೋಗಭ್ಯಾಸವನ್ನು ಛಲ ಬಿಡದೆ ಅಭ್ಯಾಸ ಮಾಡಿ ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಕೆ.ಆರ್.ನಗರದ ಮತ್ತು ನಮ್ಮ ಹೆಮ್ಮೆಯ ಭಾರತ ದೇಶದ ಕೀರ್ತಿ ಪತಾಕೆಯನ್ನು ಅತ್ಯದ್ಭುತ ಯೋಗ ಪಟುವಾಗಿ ಇಡಿ ಪ್ರಪಂಚದಾದ್ಯಂತ ಯೋಗ ಎಂಬ ಸಾಂಸ್ಕೃತಿಕ ನಡೆಯ ಬಗ್ಗೆ ಪರಿಚಯಿಸಿ ಮತ್ತೊಮ್ಮೆ ಸಂಭ್ರಮಿಸಲು ಕಾರಣೀ ಭೂತರಾಗಿ ನಮ್ಮೆಲ್ಲರಿಗೂ ಉನ್ನತ ಮಟ್ಟದಲ್ಲಿ ತಮ್ಮ ಹೆಸರು ಮತ್ತು ದೇಶದ ಹೆಸರನ್ನು ಉನ್ನತ ಸ್ಥಾನಕ್ಕೆ ಏರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರನ್ನು ಪಟ್ಟಣದ ನಾಗರೀಕರು ಅಭಿನಂದಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಆರ್ಥಿಕ, ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ

ತಿ.ನರಸೀಪುರ, ಜ.23– ಅಕ್ಷರದ ಅರಿವಿರುವ ವಿದ್ಯಾವಂತರು ಆರ್ಥಿಕ ಮತ್ತು ಡಿಜಿಟಲ್ ವ್ಯವಹಾರದಲ್ಲಿ ಅನಕ್ಷರಸ್ಥರು ಆಗಿರುವುದರಿಂದ ಸುಲಭವಾಗಿ ಆನ್ ಲೈನ್ ವಂಚನೆಗೆ ಸಿಲುಕಿಕೊಳ್ಳುತ್ತಿದ್ದಾರೆ ಎಂದು ಹೀರೋ ಮೋಟಾರ್ಸ್ ವ್ಯವಸ್ಥಾಪಕ ಎಂ.ಪಿ.ದೀಪಕ್ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ತಲಕಾಡು ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕೆನರಾ ಬ್ಯಾಂಕ್ ಹಾಗೂ ನಬಾರ್ಡ್ ಬ್ಯಾಂಕ್ ಸಂಯುಕ್ತ ಆಶ್ರಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಆರ್ಥಿಕ ಮತ್ತು ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಆರ್ಥಿಕತೆ ಮತ್ತು ಡಿಜಿಟಲ್ ಬಗ್ಗೆ ಅರಿವಿಲ್ಲದ್ದರಿಂದ ವಿದ್ಯಾವಂತರು, ಬುದ್ಧಿವಂತರು ಎನಿಸಿಕೊಂಡಿರುವ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರು, ಇಂಜಿನಿಯರ್ಸ್ ಹಾಗೂ ಚಲನಚಿತ್ರ ತಾರೆಯರೇ ಇತ್ತೀಚೆಗಿನ ದಿನಗಳಲ್ಲಿ ಅಂತರ್ಜಾಲ ವಂಚಕರಿಂದ ಮೋಸ ಹೋಗುತ್ತಿದ್ದಾರೆ ಎಂದರು.

ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಎಂ.ಎ.ಹೇಮಚಂದ್ರ ಮಾತನಾಡಿ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಬ್ಯಾಂಕ್‌ನಲ್ಲಿ ಖಾತೆಗಳನ್ನು ತೆರೆಯುವ ಮೂಲಕ ಹಣಕಾಸು ವಹಿವಾಟು ನಡೆಸಿ, ಆರ್ಥಿಕ ಮತ್ತು ಡಿಜಿಟಲ್ ವ್ಯವಹಾರದ ಬಗ್ಗೆ ತಿಳಿದುಕೊಳ್ಳಬೇಕು. ಬ್ಯಾಂಕಿಂಗ್ ವ್ಯವಹಾರದಲ್ಲಿ ಗೌಪ್ಯತೆ ಕಾಪಾಡಿಕೊಂಡು ವಹಿವಾಟು ನಡೆಸುವ ಮೂಲಕ ಆನ್‌ಲೈನ್ ವಂಚನೆಗೆ ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಎಂ.ಪಿ.ದೀಪಕ್ ಹಾಗೂ ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಸಂಸ್ಥೆಯ ಅಧ್ಯಕ್ಷ ಮರಿಸ್ವಾಮಿ(ಕುಮಾರ್) ಅವರನ್ನು ಸನ್ಮಾನಿಸಲಾಯಿತು.

ಅಮೂಲ್ಯ ಆರ್ಥಿಕ ಸಾಕ್ಷರತಾ ಕೇಂದ್ರದ ಸಲಹೆಗಾರ ಎಸ್.ವಿ.ರಮೇಶ್ ರಾವ್ ಮಾತನಾಡಿದರು.


ಕೆನರಾ ಬ್ಯಾಂಕ್ ಗ್ರಾಮೀಣ ಕ್ಷೇತ್ರೀಯ ಕಚೇರಿಯ ಆರ್ಥಿಕ ಸೇರ್ಪಡೆಯ ವ್ಯವಸ್ಥಾಪಕ ಬಿ.ಎನ್.ಲೋಹಿತ್ ಹಾಗೂ ಕಾಲೇಜಿನ ಪ್ರಾಂಶುಪಾಲ ಡಿ.ಸಿ.ಲಿಂಗರಾಜು ಮಾತನಾಡಿದರು. ಇದೇ ವೇಳೆ ಎಂ.ಪಿ.ದೀಪಕ್ ಹಾಗೂ ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಸಂಸ್ಥೆಯ ಅಧ್ಯಕ್ಷ ಮರಿಸ್ವಾಮಿ(ಕುಮಾರ್) ಅವರನ್ನು ಸನ್ಮಾನಿಸಲಾಯಿತು. ಆರ್ಥಿಕ ಸಾಕ್ಷರತೆ ಕುರಿತ ರಸಪ್ರಶ್ನೆಗಳ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಉಪನ್ಯಾಸಕರಾದ ಎನ್.ಜವರಯ್ಯ, ಸುಮಿತ್ರಾ, ಕಾವ್ಯ, ಮೀನಾಕ್ಷಿ, ಸಿದ್ಧಪ್ಪ ಹಾಗೂ ಇತರರು ಇದ್ದರು.

ಸಚಿವ ಮುನಿಯಪ್ಪಗೆ ಸ್ವಾಗತ



ತಿ.ನರಸೀಪುರ ಪಟ್ಟಣಕ್ಕೆ ಆಗಮಿಸಿದ್ದ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರನ್ನು ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ಸನ್ಮಾನಿಸಿದರು. ಗ್ರಾಪಂ ಮಾಜಿ ಸದಸ್ಯ ದಿವಾಕರ ಹಾಗೂ ಬೈರಾಪುರದ ಗ್ರಾಮಸ್ಥರು ಹಾಜರಿದ್ದರು.

ನಿಖಿಲ್‌ಗೆ ಶುಭಾಶಯ



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ, ಹೆಚ್.ಡಿ.ಕೋಟೆ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕರ ಅವರು ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರುಗಳಾದ ಗುಂಡತ್ತೂರ್ ಪ್ರಕಾಶ್, ಸಿಂಡೇನಹಳ್ಳಿ ಯತೀಶ್, ಬೆಳಗನಹಳ್ಳಿ ಶಿವರಾಜು, ಕುಮಾರ್. ಸಿದ್ದೇಗೌಡ, ಕರವೇ ನಟರಾಜು, ಗುಂಡತ್ತೂರು ಮಹೇಶ್, ಚಿನ್ನಸ್ವಾಮಿ ಇತರರು ಹಾಜರಿದ್ದರು.

ದೇವಾಲಯ ಉದ್ಘಾಟನೆಗೆ ಆಹ್ವಾನ



ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀಸಿದ್ದಪ್ಪಾಜಿ ರಸ್ತೆ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿದ ಆದಿಶಕ್ತಿ ದೇವಾಲಯ ಉದ್ಘಾಟನೆಯಲ್ಲಿ ಭಾಗವಹಿಸುವಂತೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರಿಗೆ ಗ್ರಾಮಸ್ಥರು ಹೂಗುಚ್ಛ ನೀಡುವ ಮೂಲಕ ಆಹ್ವಾನಿಸಿದರು. ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಮುಖಂಡರಾದ ಚಿಕ್ಕಸಿದ್ದಯ್ಯ, ನಂಜುಂಡಸ್ವಾಮಿ, ಸಿ.ರಾಜಣ್ಣ, ಸಿ. ಸ್ವಾಮಿ,ಮುನಿಸ್ವಾಮಿ,ಶಿವಕುಮಾರ್ ಉಪಸ್ಥಿತರಿದ್ದರು.

ಅಯೋಧ್ಯೆಯ 2ನೇ ವಾರ್ಷಿಕೋತ್ಸವ, ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ ಸಂಭ್ರಮಾಚರಣೆ

ವಿಶ್ವದಲ್ಲಿ ಶಾಂತಿಯ ಹಸಿವಿದೆ

ಹುಣಸೂರು, ಜ.23– ವಿಶ್ವದಾದ್ಯಂತ ಶಾಂತಿಯ ಹಸಿವಿದ್ದು, ಹಿಂದುತ್ವದ ಆದರ್ಶದಲ್ಲಿ ಎಲ್ಲಾ ವರ್ಗದವರನ್ನು ಒಗ್ಗೂಡಿಸಿ ಸಾಮರಸ್ಯ ಮತ್ತು ಸೌಹಾರ್ದತೆ ಬೆಸೆದು ವಿಶ್ವಶಾಂತಿ ನೆಲೆಸುವಂತೆ ಮಾಡಬಹುದು ಎಂದು ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಪ್ರಾಂತ ಸಂಯೋಜಕ ಉಮೇಶ್ ಹೇಳಿದರು.

ನಗರದಲ್ಲಿ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಗುರುವಾರ ಮುನೇಶ್ವರ ಕಾವಲ್ ಮೈದಾನದಲ್ಲಿ ಹಮ್ಮಿಕೊಂಡಿದ್ದ ಅಯೋಧ್ಯೆಯ ಎರಡನೇ ವರ್ಷದ ವಾರ್ಷಿಕೋತ್ಸವ ಮತ್ತು ಆರ್‌ಎಸ್‌ಎಸ್ ನೂರು ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿಂದೂ ಒಂದು ಧರ್ಮ ಅಥವಾ ಜಾತಿ ಸಂಕೇತವಾಗದೆ ಪ್ರತಿಯೊಬ್ಬರೂ ಹಿಂದೂಗಳಾಗಿ ದೇಶದ ಒಗ್ಗಟ್ಟಿಗೆ ಕಟಿಭದ್ಧರಾಗಿ ಧ್ವನಿಗೂಡಿಸಿ ದೇಶದ ಶಕ್ತಿ ವೃದ್ಧಿಸುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಶಕ್ತಿ ಬಿಂಬಿತವಾಗಿ ಇತರೆ ಹಿಂದೂ ರಾಷ್ಟ್ರಗಳಿಗೂ ಆತ್ಮಬಲ ಬರಲಿದೆ ಎಂದರು.

ರಾಜ್ಯದಾದ್ಯಂತ 7 ಸಾವಿರ ಸ್ಥಳಗಳಲ್ಲಿ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದು. ಇದರ ಮೂಲಕ ಇತರೆ ಭಾಗಗಳಿಗೆ ರಾಜ್ಯದಲ್ಲಿನ ಹಿಂದೂ ಒಗ್ಗೂಡುವಿಕೆಗೆ ಒತ್ತು ನೀಡಲಾಗುವುದು. ಭಾರತೀಯ ಸಂಸ್ಕೃತಿಗೆ 4 ಸಾವಿರ ವರ್ಷಗಳ ಇತಿಹಾಸವಿದೆ ಎಂದು ಇತ್ತೀಚಿನ ಹಲವು ಸಂಶೋಧನೆಗಳಿಂದ ಸಾಬೀತಾಗಿದ್ದು ಶ್ರೀರಾಮ ನಡೆದಾಡಿದ ಸ್ಥಳದಲ್ಲಿ ಇಂದಿಗೂ ಸಸ್ಯ ಸಂಪನ್ಮೂಲ ಇಂದಿಗೂ ಕಾಣಸಿಗಲಿದೆ. ಹೀಗಾಗಿ ರಾಮಾಯಣ ಮತ್ತು ಮಹಾಭಾರತ ಕಲ್ಪಿತ ಗ್ರಂಥವಲ್ಲ ಎಂಬುದು ಸಾಬೀತಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ರಾಧಾಕೃಷ್ಣ ಮಾತನಾಡಿದರು.

ನಗರದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದಿನದ ಮಹತ್ವ ಸಾರುವ ಭಾರತಾಂಬೆ, ಶ್ರೀರಾಮಚಂದ್ರ ಮೂರ್ತಿಗಳ ಬೃಹತ್ ಮೆರವಣಿಗೆಗೆ ಗಾವಡಗೆರೆ ಗುರು ಲಿಂಗ ಜಂಗಮ ಮಠದ ನಟರಾಜ ಸ್ವಾಮೀಜಿ



ಅಯೋಧ್ಯೆಯ 2ನೇ ವರ್ಷದ ವಾರ್ಷಿಕೋತ್ಸವ ಮತ್ತು ಆರ್‌ಎಸ್‌ಎಸ್ ನೂರು ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮ

ಮತ್ತು ಉಕ್ಕಿನ ಕಂತೆ ಮಠದ ಸಾಂಬಸದಾಶಿವ ಸ್ವಾಮೀಜಿ ಚಾಲನೆ ನೀಡಿದರು. ಮೆರವಣಿಗೆ ಸಾಗುವ ಮಾರ್ಗದಲ್ಲಿ ಸಾರ್ವಜನಿಕರು ರಂಗೋಲಿ ಬಿಟ್ಟು ಪುಷ್ಪಾರ್ಚನೆಯೊಂದಿಗೆ ಸ್ವಾಗತಿಸಿದರು. ಶಿವಾಜಿ ಮಹಾರಾಜ್ ವೇಷಧಾರಿ, ಗಾವಡಗೆರೆ ಡೊಳ್ಳು ಕುಣಿತ, ಪೌರಕಾರ್ಮಿಕರ ಡೊಳ್ಳು ಕುಣಿತ, ವೀರಭದ್ರ ಕುಣಿತ, ಮಾಧವ ಶಾಲೆಯ ಮಕ್ಕಳ ವಿವಿಧ ವೇಷಭೂಷಣ ಆಕರ್ಷಣೀಯವಾಗಿತ್ತು.

ಬಿಗಿ ಬಂದೋಬಸ್ತ್: ಹಿಂದೂ ಸಮಾಜೋತ್ಸವ ಕಾರ್ಯಕ್ರಮಕ್ಕೆ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. 80 ಸಿಬ್ಬಂದಿ ನಿಯೋಜಿಸಿ ನಗರದಲ್ಲಿ ಕಟ್ಟೆಚ್ಚರ ವಹಿಸಿ ಯಾವುದೇ ಅವಘಡಗಳು ಸಂಭವಿಸದಂತೆ ಕ್ರಮವಹಿಸಿದ್ದರು. ಸ್ಥಳಕ್ಕೆ ಮೈಸೂರು ಎಸ್ಪಿ ಭೇಟಿ ನೀಡಿದ್ದರು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಮುಖಂಡ ರಘುವೀರ್, ಮಹದೇವ್ ಬಾದಲ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ದೇವರಹಳ್ಳಿ ಸೋಮಶೇಖರ್, ನಾಗರಾಜ್, ಸವಿತಾ ಚವ್ಹಾಣ್, ಅರುಣ್ ಚವ್ಹಾಣ್, ನಗರ ಬಿಜೆಪಿ ಅಧ್ಯಕ್ಷ ನಾರಾಯಣ್, ವಿ.ಎಸ್.ದಾಸ್, ರಾಜಪ್ಪ, ಸುಬ್ರಹ್ಮಣ್ಯ, ರವಿಕುಮಾರ್ ಶ್ರೀದತ್ತ ಇದ್ದರು.

ದೆಹಲಿಯ ಪ್ರತಿಷ್ಠಿತ ಗಣರಾಜ್ಯೋತ್ಸವ ಪೆರೇಡ್‌ಗೆ ಮೈಸೂರಿನ ಇಬ್ಬರು, ಚಾ.ನಗರದಿಂದ ನಾಲ್ವರು ಆಯ್ಕೆ





ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಳ್ಳಲು ಸಂಪರ್ಕಾಧಿಕಾರಿ ಹೆಚ್.ಎಸ್.ಗಿರಿಜಾಂಬ ಅವರೊಂದಿಗೆ ಮೊದಲ ತಂಡದಲ್ಲಿ ತೆರಳಿದ ಇಬ್ಬರು ಆದಿವಾಸಿ ಮುಖಂಡರು. ಬಲಚಿತ್ರದಲ್ಲಿ ಎರಡನೇ ತಂಡದಲ್ಲಿ ವಿಶೇಷ ಬುಡಕಟ್ಟು ಸಮುದಾಯ ಅತಿಥಿ ತಂಡದಲ್ಲಿ ದೆಹಲಿಗೆ ಸಂಪರ್ಕಾಧಿಕಾರಿ ಎಸ್.ಚಂದ್ರಶೇಖರ್ ಅವರೊಂದಿಗೆ ದೆಹಲಿಗೆ ಪ್ರಯಾಣ ಬೆಳೆಸಿದ ಬುಡಕಟ್ಟು ಸಮುದಾಯ ಮುಖಂಡರನ್ನು ಕಾಣಬಹುದು.

ಮೈಸೂರು,ಜ.23(ಎಂಟಿವೈ)– ದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವ ಪೆರೇಡ್ ವೀಕ್ಷಿಸಲು ಮೈಸೂರು ಜಿಲ್ಲೆಯ ಇಬ್ಬರು ಹಾಗೂ ಚಾಮರಾಜನಗರ ಜಿಲ್ಲೆಯ ಆರು ಮಂದಿ ಬುಡಕಟ್ಟು ಸಮುದಾಯದ ಪ್ರತಿನಿಧಿಗಳು ಸೇರಿದಂತೆ 7 ಮಂದಿ ಆಯ್ಕೆಯಾಗಿದ್ದು, ಇವರು ಈಗಾಗಲೇ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

ದೆಹಲಿಯ ಕರ್ತವ್ಯ ಪಥದಲ್ಲಿ ನಡೆಯುವ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಳ್ಳಲು ವಿವಿಧ ಕ್ಷೇತ್ರಗಳ ಸಾಧಕರ ಆಹ್ವಾನಿಸಲಿದ್ದು, ಈ ಬಾರಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಿಂದ 7 ಮಂದಿ ಬುಡಕಟ್ಟು ಸಮುದಾಯ ಪ್ರತಿನಿಧಿಗಳು ಹಾಗೂ ಮೈಸೂರಿನ ನಾಯಕ ಸಮುದಾಯದ ಮುಖಂಡರೊಬ್ಬರಿಗೆ ಐತಿಹಾಸಿಕ ಪೆರೇಡ್ ವೀಕ್ಷಣೆಗೆ ಅವಕಾಶ ದೊರೆತಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಜೇನುಕುರುಬ ಮತ್ತು ಕೊರಗ(ಪಿವಿಟಿಜಿ) ಸಮುದಾಯಕ್ಕೆ ಸೇರಿದ ಇಬ್ಬರು ಬುಡಕಟ್ಟು ಪ್ರತಿನಿಧಿಗಳು, ಆದಿಕರ್ಮಯೋಗಿ ಅಭಿಯಾನದಡಿ ಇಬ್ಬರು ಫಲಾನುಭವಿಗಳು ಹಾಗೂ ಧರ್ತಿ ಅಭಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನದಡಿ (ಡಿಎಜೆಗಿಯುಎ) ನಾಲ್ಕು ಜನ ಫಲಾನುಭವಿಗಳು ಹಾಗೂ ರಾಜ್ಯ ಸರ್ಕಾರ ನಾಮ ನಿರ್ದೇಶಿಸಿದ ಒಬ್ಬ ಗಣರಾಜ್ಯೋತ್ಸವ ಪೆರೇಡ್ ವೀಕ್ಷಣೆಗೆ ಅವಕಾಶ ನೀಡಲಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಅಬ್ಬಲತ್ತಿ ಹಾಡಿಯ ಪೂವಿ ಹಾಗೂ ಹಳೆಕೆರೆ ಹಾಡಿಯ ಶಿವಣ್ಣ ಅವರು ಮೊದಲ ತಂಡದಲ್ಲಿ ದೆಹಲಿಗೆ ತೆರಳಿದ್ದು, ಈ ಇಬ್ಬರು ಆದಿವಾಸಿ ಮುಖಂಡರನ್ನು ಪಿವಿಟಿವಿ ಸಮುದಾಯದ ಪ್ರತಿನಿಧಿಯಾಗಿ ಕೇಂದ್ರ ಬುಡಕಟ್ಟು ಮಂತ್ರಾಲಯ ದೆಹಲಿಗೆ ಆಹ್ವಾನಿಸಿದೆ ಅಲ್ಲದೆ, ಈ ಇಬ್ಬರು ಜ.22ರಿಂದ ಫೆ.1ರವರೆಗೆ ದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಹಾಗೂ ಪ್ರೇಕ್ಷಣೀಯ ಸ್ಥಳ ವೀಕ್ಷಿಸಲು ಅವಕಾಶ ಮಾಡಿಕೊಟ್ಟಿದೆ. ಈ ಇಬ್ಬರು ಪ್ರತಿನಿಧಿಗಳನ್ನು ದೆಹಲಿಗೆ ಕರೆದೊಯ್ಯಲು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕರಾದ ಹೆಚ್.ಎಸ್.ಗಿರಿಜಾಂಬ ಅವರನ್ನು ಸಂಪರ್ಕ ಅಧಿಕಾರಿಯಾಗಿ ನಿಯೋಜಿಸಲಾಗಿದೆ. ಈಗಾಗಲೇ ಮೊದಲ ತಂಡದಲ್ಲಿ ತೆರಳಿರುವ ಬುಡಕಟ್ಟು ಸಮುದಾಯ ಪ್ರತಿನಿಧಿಗಳು ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ.

ವಿಶೇಷ ಬುಡಕಟ್ಟು ಸಮುದಾಯ ಅತಿಥಿಯಾಗಿ ಐವರು: ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಳ್ಳುವ ಕೇಂದ್ರ ಬುಡಕಟ್ಟು ಮಂತ್ರಾಲಯವು ಆದಿಕರ್ಮಯೋಗಿ ಅಭಿಯಾನದಡಿ ಇಬ್ಬರು ಫಲಾನುಭವಿಗಳು ಹಾಗೂ ಧರ್ತಿ ಅಭಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನದಡಿ (ಡಿಎಜೆಗಿಯುಎ) ನಾಲ್ಕು ಜನ ಫಲಾನುಭವಿಗಳಿಗೆ ಅವಕಾಶ ನೀಡಲಾಗಿದೆ.

ಚಾಮರಾಜನಗರ ಜಿಲ್ಲೆಯ ಮುತುಗದ ಗದ್ದೆ ಪೋಡಿನ ನಿವಾಸಿ ಮಾದೇಗೌಡ, ಮಾದಮ್ಮ ದಂಪತಿ, ಬೇಡಗುಳಿ ಹಾಡಿಯ ಮಹದೇವ, ರತ್ನಮ್ಮ ದಂಪತಿ, ಪಿರಿಯಾಪಟ್ಟಣ ರಾಣಿಗೇಟ್ ಹಾಡಿಯ ಜೆ.ಡಿ.ಜಯಪ್ಪ ಅವರನ್ನು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಮೂಲಕ ದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ. ಅಲ್ಲದೆ, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಅವರನ್ನು ದೆಹಲಿ ಪೆರೇಡ್‌ಗೆ ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡಿದೆ. ಎರಡನೇ ತಂಡದಲ್ಲಿ ವಿಶೇಷ ಬುಡಕಟ್ಟು ಸಮುದಾಯ ಅತಿಥಿ ತಂಡದಲ್ಲಿ 6 ಮಂದಿ ಜ.24ರಿಂದ 27ರವರೆಗೆ ದೆಹಲಿ ಪ್ರವಾಸ ಕೈಗೊಳ್ಳಲು ಅವಕಾಶ ಮಾಡಿಕೊಟ್ಟಿದ್ದು, ಎರಡನೇ ತಂಡದ ಸಂಪರ್ಕಾಧಿಕಾರಿಯಾಗಿ ಶಿಕ್ಷಣ ಇಲಾಖೆಯ ಅಧಿಕಾರಿ ಎಸ್.ಚಂದ್ರಶೇಖರ್ ಅವರನ್ನು ನಿಯೋಜಿಸಲಾಗಿದೆ. ಎರಡೂ ತಂಡದಲ್ಲಿ ಇಬ್ಬರು ಅಧಿಕಾರಿ ಸೇರಿದಂತೆ 10 ಮಂದಿ ತೆರಳಿದ್ದು, ಪ್ರವಾಸದ ವೆಚ್ಚವನ್ನು ಕೇಂದ್ರ ಬುಡಕಟ್ಟು ಮಂತ್ರಾಲಯವೇ ಭರಿಸಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕಿ (ತ) + ಹಾಟ್‌ಸ್ಪಾಟ್ (ತ)	2+2 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
---	---

28 ವರ್ಷದ ಮಹಿಳೆಯಿಂದ ತ್ರಿವಳಿ ಮಕ್ಕಳಿಗೆ ಜನ್ಮ



ಮೈಸೂರು,ಜ.23(ಪಿಎಂ)– ನಗರದ ಖಾಸಗಿ ನರ್ಸಿಂಗ್ ಹೋಂನಲ್ಲಿ 28 ವರ್ಷದ ಮಹಿಳೆಯೊಬ್ಬರು ಗುರುವಾರ ಮುಂಜಾನೆ ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲೂಕು ಅಕ್ಕಿಹೆಬ್ಬಾಳದ ಮಹಿಳೆಯೇ ಮೂವರು ಮಕ್ಕಳನ್ನು ಹೆತ್ತವರು.

ಇವರು ಎನ್‌ಆರ್ ಮೊಹಲ್ಲಾ ಕೆಸರೆಯ ಶಂಕರ್ ನರ್ಸಿಂಗ್ ಹೋಂನಲ್ಲಿ ಇಂದು ಬೆಳಗ್ಗೆ ಒಂದು ಹೆಣ್ಣು ಹಾಗೂ ಎರಡು ಗಂಡು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಹೆಣ್ಣು ಮಗು ಒಂದೂವರೆ ಕೆಜಿ ಇದ್ದು, ಇಬ್ಬರು ಗಂಡು ಮಕ್ಕಳಲ್ಲಿ ಒಂದು 1.8 ಕೆಜಿ ಇದ್ದರೆ, ಮತ್ತೊಂದು ಎರಡೂವರೆ ಕೆಜಿ ಇದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ತಿ.ನರಸೀಪುರ ಕ್ಷೇತ್ರದ ಮಾಜಿ ಶಾಸಕರೂ ಆದ ಎನ್‌ಆರ್ ಮೊಹಲ್ಲಾದ ಶಂಕರ್ ನರ್ಸಿಂಗ್ ಹೋಂನ ಮುಖ್ಯಸ್ಥ ಡಾ.ಭಾರತೀ ಶಂಕರ್, ಇಂದು ಬೆಳಗಿನ ಜಾವ ನಮ್ಮ ನರ್ಸಿಂಗ್ ಹೋಂಗೆ ಸದರಿ ಮಹಿಳೆ ಅಡ್ಮಿಟ್ ಆದರು. ಅವರ ಹೊಟ್ಟೆಯೊಳಗೆ ಮೂರು ಮಕ್ಕಳು ಒಂದಕ್ಕೊಂದು ಇಂಟರ್‌ಲಾಕ್ ಆಗಿದ್ದವು. ಸ್ಕ್ಯಾನಿಂಗ್ ಮಾಡಿದಾಗ ನಾರ್ಮಲ್ ಹೆರಿಗೆ ಸಾಧ್ಯವಿಲ್ಲವೆಂಬುದು ತಿಳಿಯಿತು. ಜೊತೆಗೆ ಮಕ್ಕಳು ಸಣ್ಣ ಗಾತ್ರದಲ್ಲಿದ್ದವು. ಬದುಕುಳಿಯುವ ಖಾತ್ರಿ ಸಹ ಇರಲಿಲ್ಲ ಎಂದು ತಿಳಿಸಿದರು.

ನನ್ನ ಪತ್ನಿ ಡಾ.ಸನತ್‌ಕುಮಾರಿ ಹಾಗೂ ನನ್ನ ಪುತ್ರಿ ಡಾ.ಸುಷ್ಮಿತಾ ಶಂಕರ್ ಇಬ್ಬರೂ ಪ್ರಸೂತಿ ತಜ್ಞರು. ಈ ಇಬ್ಬರು ಸೇರಿ ಶಸ್ತ್ರಚಿಕಿತ್ಸೆ ಮೂಲಕ ಮೂರು ಮಕ್ಕಳನ್ನು ಯಶಸ್ವಿಯಾಗಿ ತೆಗೆದಿದ್ದಾರೆ ಎಂದರು.

ಕಸಕ್ಕೆ ಹಾಕಿದ್ದ ಬೆಂಕಿಗೆ ಶ್ರೀಗಂಧ, ತೆಂಗಿನ ಮರಗಳು ಆಹುತಿ

ಪಾಲಿಕೆ ಸಿಬ್ಬಂದಿ ತ್ಯಾಜ್ಯಕ್ಕೆ ಬೆಂಕಿ ಹಾಕಿದ್ದೇ ದುರಂತಕ್ಕೆ ಕಾರಣ; ಮಾಲೀಕರ ಆರೋಪ



ಮರಗಳು ಬೆಂಕಿಗಾಹುತಿಯಾಗುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜ.23(ಪಿಎಂ)– ಮೈಸೂರಿನ ಯರಗನಹಳ್ಳಿ ಹೊಸ ಬಡಾವಣೆಯಲ್ಲಿರುವ ತಮ್ಮ ಜಾಗದಲ್ಲಿದ್ದ ಶ್ರೀಗಂಧ ಮತ್ತು ತೆಂಗಿನ ಮರಗಳು ಬೆಂಕಿಗಾಹುತಿಯಾಗಿದ್ದು, ನಮ್ಮ ಜಾಗದ ಸಮೀಪದಲ್ಲಿ ರಾಶಿ ಹಾಕಿದ್ದ ಕಸಕ್ಕೆ ಪಾಲಿಕೆ ಸಿಬ್ಬಂದಿ ಬೆಂಕಿ ಹಾಕಿದ್ದೇ ಈ ಅನಾಹುತಕ್ಕೆ ಕಾರಣ ಎಂದು ಮೇಘಾಲಯ ರಾಜ್ಯಪಾಲರ ವಿಶೇಷಾಧಿಕಾರಿ ಡಾ.ಬಿ.ಎಸ್.ಕೃಷ್ಣಪ್ರಸಾದ್ ಆರೋಪಿಸಿದ್ದಾರೆ.

ಗುರುವಾರ ಬೆಳಗ್ಗೆ 11 ಗಂಟೆಗೆ ಈ ಘಟನೆ ನಡೆದಿದೆ. ಬನ್ನಿಮಂಟಪದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸಿದರು. ಆದರೆ 200 ಶ್ರೀಗಂಧದ ಮರ ಹಾಗೂ 20 ತೆಂಗಿನ ಮರಗಳು ಕೊನೆಗೂ ಬೆಂಕಿಗಾಹುತಿಯಾದವು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಮ್ಮ ಮನೆ ಸಮೀಪದ ರಸ್ತೆಬದಿಯಲ್ಲಿ ತ್ಯಾಜ್ಯವನ್ನು ಅನೇಕ ಜನರು ತಂದು ಸುರಿಯುತ್ತಿದ್ದರು. ಇದನ್ನು ಗಮನಿಸಿದ ನಾನು ಸೋಮವಾರ ಸಂಬಂಧಿಸಿದ ಪಾಲಿಕೆ ಮೇಲ್ವಿಚಾರಕರಿಗೆ ವಿಡಿಯೋ ಕಳುಹಿಸಿದ್ದೆ ಈ ಹಿನ್ನೆಲೆಯಲ್ಲಿ ಇಂದು ಪಾಲಿಕೆ ಸಿಬ್ಬಂದಿ ಸ್ಥಳಕ್ಕೆ ಬಂದು, ಕಸ ಗುಡಿಸಿದ್ದಾರೆ. ಆದರೆ ತ್ಯಾಜ್ಯವನ್ನು ತೆಗೆದುಕೊಂಡು ಹೋಗುವ ಬದಲು ರಸ್ತೆಯುದ್ದಕ್ಕೂ ಬೆಂಕಿ ಹಚ್ಚಿ ಹೋಗಿದ್ದಾರೆ. ಇದರ ಪರಿಣಾಮ ಶರವೇಗದಲ್ಲಿ ಬೆಂಕಿ ನಮ್ಮ ಮನೆ ಆವರಣದಲ್ಲಿದ್ದ ಶ್ರೀಗಂಧ ಮತ್ತು ತೆಂಗಿನ ಮರಗಳನ್ನು ಆವರಿಸಿಕೊಂಡು ಈ ದುರಂತ ಸಂಭವಿಸಿದೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ನಗರ ಪಾಲಿಕೆಯು ಸೂಕ್ತ ಪರಿಹಾರ ನೀಡುವ ಜೊತೆಗೆ ಕಸಕ್ಕೆ ಬೆಂಕಿ ಹಚ್ಚುವುದನ್ನು ಮುಂದೆಂದೂ ಮಾಡಬಾರದು ಎಂದು ಅವರು ಆಗ್ರಹಿಸಿದ್ದಾರೆ.

ಮೈಸೂರಲ್ಲಿ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಅಧಿವೇಶನದಲ್ಲಿ ಸರ್ಕಾರದ ಭಾಷಣ ಓದದೆ ಇದ್ದಿದ್ದಕ್ಕೆ ಆಕ್ರೋಶ



ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಒಂದು ಸಾಲಿನ ಭಾಷಣ ಓದಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.23(ಜಿಎ)–ರಾಜ್ಯದ ಪ್ರಮುಖ ಜನಪರ ವಿಷಯದ ಬಗ್ಗೆ ಕರೆಯಲಾಗಿದ್ದ ವಿಶೇಷ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಸರ್ಕಾರ ಸಿದ್ದಪಡಿಸಿದ್ದ ಭಾಷಣವನ್ನು ಓದದೆ ಅವರೆ ತಯಾರು ಮಾಡಿದ ಒಂದು ಸಾಲಿನ ಭಾಷಣ ಓದಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿರುವುದನ್ನು ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ಜಮಾಯಿಸಿದ ಕಾಂಗ್ರೆಸ್ ಪಕ್ಷದ ನೂರಾರು ಕಾರ್ಯಕರ್ತರು 'ಸಂವಿಧಾನಕ್ಕೆ ಅಪಚಾರ ಮಾಡಿದ ರಾಜ್ಯಪಾಲರಿಗೆ ಧಿಕ್ಕಾರ', '7 ಕೋಟಿ ಜನತೆಯ ಭಾವನೆಗೆ ಅವಮಾನ ಮಾಡಿದ ರಾಜ್ಯಪಾಲರಿಗೆ ಧಿಕ್ಕಾರ', 'ಬಿಜೆಪಿಯ ಕೈಗೊಂಬೆ ರಾಜ್ಯಪಾಲರಿಗೆ ಧಿಕ್ಕಾರ', 'ಜನಪರ ವಿಷಯ ಪ್ರಸ್ತಾಪಿಸದೇ ಕಾಲ್ಕಿತ್ತ ರಾಜ್ಯಪಾಲರಿಗೆ ಧಿಕ್ಕಾರ', 'ರಾಜ್ಯಪಾಲ ಹಠಾವೋ ಕರ್ನಾಟಕ ಬಚಾವೋ', 'ಬೇಡವೇ ಬೇಡ ಬಿಜೆಪಿ ಕೈಗೊಂಬೆ ರಾಜ್ಯಪಾಲ ಬೇಡ' ಎಂಬ ಪ್ಲೇ ಕಾರ್ಡ್ ಪ್ರದರ್ಶಿಸಿ, ವಿವಿಧ ಘೋಷಣೆಗಳನ್ನು ಕೂಗಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಶಾಸಕ ಸೋಮಶೇಖರ್ ಮಾತನಾಡಿ, ರಾಜ್ಯಪಾಲರ ಹುದ್ದೆ ಒಂದು ಸಾಂವಿಧಾನಿಕ ಹುದ್ದೆ. ರಾಜ್ಯಪಾಲರು ಪ್ರತಿ ಭಾಷಣದ ಸಂದರ್ಭದಲ್ಲಿ ನನ್ನ ಸರ್ಕಾರ ನನ್ನ ಸರ್ಕಾರದ ಸಾಧನೆ ಎಂದು ಭಾಷಣ ಮಾಡುವುದು ಸಂಪ್ರದಾಯ. ಸಚಿವ ಸಂಪುಟ, ಸಚಿವರು, ಪರಿಷತ್‌ನಲ್ಲಿ ತೀರ್ಮಾನವಾದ ವಿಷಯ ಎಂದರೆ ಅದು ಏಳು ಕೋಟಿ ಜನರ ಭಾವನೆ ಇದ್ದಂತೆ. ಸರ್ಕಾರ ನಿಗದಿ ಮಾಡಿದ್ದ ಜಂಟಿ ಅಧಿವೇಶನದಲ್ಲಿ ಸರ್ಕಾರದ ಅಭಿವೃದ್ಧಿ ವಿಷಯವನ್ನು ಪ್ರಸ್ತಾಪಿಸಬೇಕಾದ ರಾಜ್ಯಪಾಲರು ಬಿಜೆಪಿಯವರ ಕೈಗೊಂಬೆಯಂತೆ ವರ್ತಿಸಿರುವುದು ನಾಡಿನ ಜನತೆಗೆ ಎಸಗಿರುವ ಮಹಾ ದ್ರೋಹ. ಇದರ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಚಿಂತಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ನಿಶ್ಚಿತ ಎಂದರು.

ಇದು ಕೇವಲ ಕರ್ನಾಟಕ ಮಾತ್ರವಲ್ಲ. ಬಿಜೆಪಿಯೇತರ ಸರ್ಕಾರಗಳು ಇರುವೆಡೆಯಲ್ಲ ರಾಜ್ಯಪಾಲರುಗಳು ಬಿಜೆಪಿಯವರ ಸೂಚನೆಯಂತೆ ವರ್ತಿಸಿ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವ ನಿರಂತರ ಪ್ರಯತ್ನ ಮಾಡುತ್ತಿದ್ದಾರೆ. ಸಂವಿಧಾನಕ್ಕೆ ಗೌರವ ಕೊಡದಂತಹ ರಾಜ್ಯಪಾಲರನ್ನು ಕೂಡಲೇ ರಾಷ್ಟ್ರಪತಿಗಳು ವಾಪಸ್ಸು ಕರೆಸಿಕೊಳ್ಳಬೇಕು. ಆ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯವನ್ನು ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ್, ಹೆಚ್.ಎ. ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಜೋಗಿ ಮಹೇಶ್, ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಎಂ.ಸುನೀಲ್, ಶೋಭಾ ಸುನೀಲ್, ಆರ್.ಹೆಚ್. ಕುಮಾರ್, ವೀಣಾ, ಕಾಂಗ್ರೆಸ್ ಮುಖಂಡ ಶೇಖರ್, ಅಶೋಕಪುರಂ ವಾಸು, ಅರುಣ್ ಬುದ್ಧ, ಭಾಸ್ಕರ್, ಪಟಾಕಿ ಮಂಜುನಾಥ್ , ಶಂಕರ್, ಭಾಸ್ಕರ್ ಎಲ್.ಗೌಡ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ವಿಜಯ್ ಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀಮದ್ವಾಲ್ಮೀಕಿ ರಾಮಾಯಣ ಪ್ರವಚನ



ಮೈಸೂರು, ಜ. 23– ಶ್ರೀರಂಗಪಟ್ಟಣದ ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಜ. 24 ರಿಂದ 31 ರವರೆಗೆ ಚಿಂತಕ, ವಿದ್ವಾನ್ ಗನಾ.ಭಟ್ಟ ಅವರಿಂದ ಮೈಸೂರಿನ ಜೆ.ಎಲ್.ಬಿ ರಸ್ತೆ, ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನದಲ್ಲಿ ಪ್ರತಿ ದಿನ ಸಂಜೆ 6 ರಿಂದ 7.30ರವರೆಗೆ ಶ್ರೀಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಪ್ರವಚನ ನಡೆಯಲಿದೆ.

ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ಗಣ್ಯರು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ, ರವಿಶಂಕರ್, ಶ್ರೀಕಾಂತ ಯಾದವ್, ಕೆ.ವಿ. ರಾಜು, ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಈಗ ಎಲ್ಲೆಡೆ ನೈಲಾನ್, ಪ್ಲಾಸ್ಟಿಕ್ ತ್ರಿವರ್ಣ ಧ್ವಜಕ್ಕೇ ಡಿಮ್ಯಾಂಡ್!; ಮರೆಯಾಗುತ್ತಿದೆ ಪವಿತ್ರ ಖಾದಿ ಧ್ವಜ ವೈಭವ



ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಖಾದಿ ಭಾರತ ಮಳಿಗೆಯಲ್ಲಿ ಖಾದಿ ತ್ರಿವರ್ಣ ಧ್ವಜ ಖರೀದಿಸುತ್ತಿರುವ ಗ್ರಾಹಕರು



ಮೈಸೂರಿನ ಅಶೋಕ ವೃತ್ತ(ಬಲ್ಲಾಳ್ ವೃತ್ತ) ಸಮೀಪದ ಖಾದಿ ಇಂಡಿಯಾ ಮಳಿಗೆಯಲ್ಲಿ ಖಾದಿ ತ್ರಿವರ್ಣ ಧ್ವಜ ಖರೀದಿಸಲು ಮುಂದಾಗಿರುವ ಜನ.

> ಕಳೆದ ಆಗಸ್ಟ್‌ನಲ್ಲಿ 600ಕ್ಕೂ ಹೆಚ್ಚು ತ್ರಿವರ್ಣ ಧ್ವಜ ಮಾರಾಟವಾಗಿತ್ತು. ಆದರೆ ಈಗ ಗಣರಾಜ್ಯೋತ್ಸವಕ್ಕೆ ಕೇವಲ 25 ಧ್ವಜಗಳಷ್ಟೇ ಮಾರಾಟವಾಗಿದೆ. ಐಎಸ್‌ಐ ಚಿಹ್ನೆಯುಳ್ಳ, ಜಿಐ ಟ್ಯಾಗ್ ಹೊಂದಿರುವ ಖಾದಿ ಧ್ವಜ ಬಳಕೆ ಕಡ್ಡಾಯವಾಗಿದೆ. ಆದರೆ ಈ ಬಾರಿ ಖಾದಿ ಧ್ವಜ ಮಾರಾಟ ಕ್ಷೀಣಿಸಿದೆ.
> -ಉಜ್ವಲ್ ಕುಮಾರ್, ವ್ಯವಸ್ಥಾಪಕರು, ಖಾದಿ ಭಾರತ ಮಳಿಗೆ, ಮೈಸೂರು

ಮೈಸೂರು,ಜ.23(ಎಂಟಿವೈ)– ರಾಷ್ಟ್ರೀಯ ಹಬ್ಬ ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ತ್ರಿವರ್ಣ ಧ್ವಜ ಹಾರಿಸಲು ಸಿದ್ಧತೆ ನಡೆದಿದೆ. ಆದರೆ ಮೈಸೂರಲ್ಲಿ ನೈಲಾನ್ ಹಾಗೂ ಇತರೆ ಬಟ್ಟೆಯಿಂದ ತಯಾರಿಸಿರುವ ಬಾವುಟಗಳ ಮಾರಾಟ ಹೆಚ್ಚಾಗಿದ್ದು, ಖಾದಿ ಬಾವುಟದ ವೈಭವ ಮರೆಯಾಗುತ್ತಿದೆ.

ಜಿಐ ಟ್ಯಾಗ್ ಹಾಗೂ ಐಎಸ್‌ಐ ಚಿಹ್ನೆ ಹೊಂದಿರುವ ಖಾದಿ ಗ್ರಾಮೋದ್ಯೋಗ ಸಂಸ್ಥೆ ಮಾರಾಟ ಮಾಡುವ ತ್ರಿವರ್ಣ ಧ್ವಜವನ್ನೇ ರಾಷ್ಟ್ರೀಯ ಹಬ್ಬಗಳಲ್ಲಿ ಧ್ವಜಾರೋಹಣಕ್ಕೆ ಬಳಸುವಂತೆ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಅಲ್ಲದೆ, ಎಲ್ಲಾ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳಲ್ಲೂ ಖಾದಿ ಧ್ವಜವನ್ನೇ ಹಾರಿಸುವಂತೆ ಸೂಚನೆ ನೀಡಿದೆ. ತ್ರಿವರ್ಣ ಧ್ವಜದ ಘನತೆಯನ್ನು ಗೌರವಿಸುವುದರೊಂದಿಗೆ ಖಾದಿ ಗ್ರಾಮೋದ್ಯೋಗವನ್ನು ಉತ್ತೇಜಿಸುವ ಉದ್ದೇಶದಿಂದ ಈ ಆದೇಶ ಮಾಡಲಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನೈಲಾನ್ ಸೇರಿದಂತೆ ಇನ್ನಿತರೆ ಬಟ್ಟೆಗಳಲ್ಲಿ ತಯಾರಿಸಿರುವ ಧ್ವಜ ಹಾಗೂ ಪ್ಲಾಸ್ಟಿಕ್ ಬಾವುಟ ಮಾರಾಟ ಜೋರಾಗಿದ್ದು, ಖಾದಿ ಧ್ವಜದ ಮಹತ್ವಕ್ಕೆ ಧಕ್ಕೆ ತಂದಿದೆ.

ಗುಣಮಟ್ಟದ ಖಾದಿ ಧ್ವಜ: ಹುಬ್ಬಳ್ಳಿಯ ಬೆಂಗೇರಿ ಗ್ರಾಮದಲ್ಲಿರುವ ಖಾದಿ ಧ್ವಜ ತಯಾರಿಕಾ ಕೇಂದ್ರದಿಂದ ಪೂರೈಕೆಯಾಗುವ ಖಾದಿ ಧ್ವಜಗಳನ್ನು ನಿಯಮಾನುಸಾರ ಖಾದಿ ಭಾರತ(ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ)ದ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತದೆ. ಅಂತೆಯೇ ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಖಾದಿ ಭಾರತ ಮಳಿಗೆ ಹಾಗೂ ಅಶೋಕ ವೃತ್ತ(ಬಲ್ಲಾಳ್ ವೃತ್ತ) ಸಮೀಪದ ಖಾದಿ ಇಂಡಿಯಾ ಮಳಿಗೆಯಲ್ಲಿ ಶಾಲಾ–ಕಾಲೇಜು, ಸಂಸ್ಥೆಗಳಿಂದ ಖಾದಿ ತ್ರಿವರ್ಣ ಧ್ವಜ ಖರೀದಿಸುವ ಸಂಪ್ರದಾಯವಿತ್ತು ಆದರೆ, ಈ ವರ್ಷ ಖಾದಿ ಬಾವುಟ ಖರೀದಿ ಗಣನೀಯವಾಗಿ ಇಳಿದಿದೆ.

ದರ ತುಸು ಹೆಚ್ಚಳ: ಬೆಂಗೇರಿ ಖಾದಿ ಧ್ವಜ ತಯಾರಿಕಾ ಕೇಂದ್ರದಲ್ಲಿ ಅಳತೆ, ಬಣ್ಣ, ಬಟ್ಟೆಯ ಗುಣಮಟ್ಟ, ಹೊಲಿಗೆ ಸೇರಿದಂತೆ ಎಲ್ಲಾ ನಿಯಮಗಳನ್ನೂ ಕರಾರುವಕ್ಕಾಗಿ ಪಾಲಿಸಿ, ತ್ರಿವರ್ಣ ಧ್ವಜ ತಯಾರಿಸಲಾಗುತ್ತದೆ. ಇದರಿಂದ ತಯಾರಿಕಾ ವೆಚ್ಚವೂ ಹೆಚ್ಚಾಗುತ್ತದೆ. ಜೊತೆಗೆ ಧ್ವಜಕ್ಕೆ ಅಪಮಾನವಾಗದ ರೀತಿಯಲ್ಲಿ ದೂರದ ಹುಬ್ಬಳಿಯಿಂದ ತರಲು ಸಾಗಾಟದ ವೆಚ್ಚವೂ ಜಾಸ್ತಿ. ಪರಿಣಾಮ 2X3 ಅಳತೆಯ ಧ್ವಜಕ್ಕೆ 1240 ರೂ., 3X4.1/2 ಅಳತೆಯ ಧ್ವಜಕ್ಕೆ 2300 ರೂ. ಹಾಗೂ 4X6 ಅಳತೆಯ ಧ್ವಜಕ್ಕೆ 3300 ರೂ. ದರ ನಿಗಧಿಪಡಿಸಲಾಗಿದೆ. ಇಷ್ಟು ಹಣ ನೀಡಲು ಖಾಸಗಿ ಸಂಸ್ಥೆಯವರು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ.

ಗೋಲ್‌ಮಾಲ್ ಆಗಲ್ಲ: ರಾಷ್ಟ್ರಧ್ವಜ ಖರೀದಿಯಲ್ಲೂ ಹಣ ಮಾಡುವ ಸಣ್ಣ ಮನಃಸ್ಥಿತಿಯವರು ಖಾದಿ ಧ್ವಜ ಖರೀದಿಯಿಂದ ದೂರ ಉಳಿದಿದ್ದಾರೆ. ಖಾದಿ ಭಾರತ ಮಳಿಗೆಯಲ್ಲಿ ಬಿಲ್ ಗೋಲ್‌ಮಾಲ್ ಸಾಧ್ಯವಿಲ್ಲ ಎಂಬ ಕಾರಣಕ್ಕೆ ಖಾಸಗಿ ಮಳಿಗೆಯಲ್ಲಿ ನೈಲಾನ್ ಬಟ್ಟೆಯ ಧ್ವಜ ಖರೀದಿಸಿ, ತಮಗೆ ಬೇಕಾದಷ್ಟು ಮೊತ್ತಕ್ಕೆ ಬಿಲ್ ಹಾಕಿಸಿಕೊಳ್ಳುತ್ತಾರೆ. ಸ್ವತಃ ಹಣದಲ್ಲಿ ಬಾವುಟ ಖರೀದಿಸಬೇಕಾದವರು ಕಡಿಮೆ ಬೆಲೆಯ ಧ್ವಜ ಖರೀದಿಸುತ್ತಾರೆ ಎಂದು ಹೇಳಲಾಗುತ್ತಿದೆ.

ಕ್ರಮ ವಹಿಸಬೇಕು: ಮೈಸೂರಿನ ಬಹುತೇಕ ಮಳಿಗೆಗಳಲ್ಲಿ ನೈಲಾನ್ ಸೇರಿದಂತೆ ಇತರೆ ಬಟ್ಟೆಗಳಿಂದ ಬೇಕಾಬಿಟ್ಟಿ ಅಳತೆಯಲ್ಲಿ ತಯಾರಿಸಿರುವ ತ್ರಿವರ್ಣ ಧ್ವಜ ಮಾರಾಟ ಮಾಡಲಾಗುತ್ತಿದೆ. ಇದು ಕಾನೂನು ಬಾಹಿರ. ಧ್ವಜವನ್ನು ಹೇಗೆಂದರೆ ಹಾಗೆ ಪ್ರದರ್ಶನಕ್ಕಿಟ್ಟು ಮಾರುವಂತಿಲ್ಲ. ಆದರೆ ಚಿಕ್ಕಗಡಿಯಾರ ವೃತ್ತ ಹಾಗೂ ವಿನೋಬಾ ರಸ್ತೆಯ ಕೆಲ ಮಳಿಗೆಗಳಲ್ಲಿ ತ್ರಿವರ್ಣ ಧ್ವಜಗಳನ್ನು ನೇತು ಹಾಕಲಾಗಿದೆ. ಈ ಬಗ್ಗೆ ಅಧಿಕಾರಿಗಳು ಗಮನಹರಿಸಿ, ಧ್ವಜದ ಮಹತ್ವ ಕಾಪಾಡಿಕೊಳ್ಳಲು ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಾಯಕ ಸಿದ್ಧಾಂತವನ್ನು ಸಾರಿದವರೇ ವಚನಕಾರರು



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಉದ್ಘಾಟಿಸಿದರು.

ಮೈಸೂರು, ಜ.23(ಎಂಕೆ)– ಪ್ರತಿಯೊಂದರಲ್ಲಿ ಮೈತ್ರಿಯನ್ನು ಕಂಡ 12ನೇ ಶತಮಾನದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿಯಾದವರು ಶರಣರು ಎಂದು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ವತಿಯಿಂದ ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ 'ಶರಣ ಜೀವನ ದರ್ಶನ' ಕುರಿತು ಮಾತನಾಡಿದ ಅವರು, ಕಾಯಕ ಸಿದ್ಧಾಂತವನ್ನು ಸಾರಿದ ಶರಣರ ಅನುಭಾವದ ಬೆಳಕೆ ವಚನ ಸಾಹಿತ್ಯ ಎಂದರು.

ಭೂತಕಾಲವನ್ನು ನಾವುಗಳು ಸ್ಮರಿಸುವುದೇ ಆದಲ್ಲಿ 12ನೇ ಶತಮಾನ ಮಹತ್ವದ ಕಾಲಘಟ್ಟವಾಗಿದ್ದು, ವಿವಿಧ ಕಾಯಕ ಸಮುದಾಯಗಳ ಮನಸ್ಸುಗಳನ್ನು ಪೋಣಿಸಿದ ದಾರವೇ ವಚನ ಸಂಸ್ಕೃತಿಯಾಗಿದೆ. ನಮ್ಮ ಜೀವನ ಸಾರ್ಥಕವಾಗಬೇಕಾದರೆ ವಚನ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇವತ್ತು ವಿಜ್ಞಾನ–ತಂತ್ರಜ್ಞಾನ ಎಲ್ಲವೂ ಬೆಳೆದಿದೆ. ಆದರೆ, ಬೆಳೆದವರ ಮನಸ್ಸಿನಲ್ಲಿ ಪ್ರೀತಿ–ಕರುಣೆ ಬದಲು ಜಢತ್ವ ತುಂಬಿದೆ ಎಂದು ವಿಷಾಧಿಸಿದರು.

80 ವರ್ಷಗಳ ಪ್ರಚಾರೋಪನ್ಯಾಸ: ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಮಾತನಾಡಿ, ಪ್ರಸಾರಾಂಗದಲ್ಲಿ 400 ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಲಾಗಿದೆ. ಖಗೋಳಶಾಸ್ತ್ರ ಕುರಿತ ಮೊದಲ ಪುಸ್ತಕ ಕೇವಲ 25 ಪೈಸೆಗೆ ಮಾರಾಟ ಮಾಡಲಾಗಿತ್ತು. 50 ಪೈಸೆಯಿಂದ ನಾಲ್ಕು ಸಾವಿರ ರೂ.ವರೆಗಿನ ಕೃತಿಗಳು ಇವೆ. ಕೃತಿಗಳಲ್ಲಿ ಜ್ಞಾನವನ್ನು ಜನಮಾನಸಕ್ಕೆ ತಲುಪಿಸುವ ನಿಟ್ಟಿನಲ್ಲಿ ಕಳೆದ 80 ವರ್ಷಗಳಿಂದ ಪ್ರಚಾರೋಪನ್ಯಾಸ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಜೆಎಸ್‌ಎಸ್ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ.ರೇಚಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಆರ್.ಎಸ್.ಕುಮಾರ್ ಉಪಸ್ಥಿತರಿದ್ದರು.

ಹಲವೆಡೆ ರೈಲ್ವೆ ಅಂಡರ್ ಬ್ರಿಡ್ಜ್ ನಿರ್ಮಾಣಕ್ಕೆ ಒತ್ತಾಯ

ಮೈಸೂರಿಗೆ ಕೆಲ ರೈಲುಗಳ ವಿಸ್ತರಣೆಗೆ ಸಂಸದ ಯದುವೀರ್‌ಗೆ ಮಾಜಿ ಸಂಸದ ಪ್ರತಾಪ್‌ಸಿಂಹ ಮನವಿ

ಮೈಸೂರು, ಜ.23– ಮೈಸೂರಿನ ಚಾಮರಾಜ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಾಹನ ದಟ್ಟಣೆ ನಿಯಂತ್ರಣ ಹಾಗೂ ಸುಗಮ ಸಂಚಾರಕ್ಕೆ ಕೆಲ ಅಭಿವೃದ್ಧಿ ಯೋಜನೆ ಗಳನ್ನು ಕೈಗೊಳ್ಳುವಂತೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದರು.

ನಗರದ ಕೆ.ಜಿ.ಕೊಪ್ಪಲಿನ ರೈಲ್ವೆ ಅಂಡರ್ ಬ್ರಿಡ್ಜ್ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ಕೂಡಲೇ ರೈಲ್ವೆ ಅಂಡರ್ ಬ್ರಿಡ್ಜ್ ಅಗಲೀ ಕರಣಗೊಳಿಸಿ, ಸುಗಮ ಸಂಚಾರಕ್ಕೆ ಕ್ರಮ ವಹಿಸಬೇಕು. ಮೈಸೂರು–ಅಶೋಕಪುರಂ ಬಿಜಿ ವಿಭಾಗ ದಲ್ಲಿ ಕ್ರಾಫರ್ಡ್ ಹಾಲ್ ಜಂಕ್ಷನ್ ಬಳಿ ಅಗಲವಾದ ರಸ್ತೆ ಕೆಳ ಸೇತುವೆ (ಆರ್ ಯುಬಿ) ನಿರ್ಮಾಣ ಕೈಗೆತ್ತಿಕೊಳ್ಳಬೇಕು. ಪ್ರಸ್ತಾವಿತ 5.5 ಮೀಟರ್(ಪ್ರತಿ ದಿಕ್ಕಿನಲ್ಲಿ) ರಸ್ತೆಯ ಅಗಲವನ್ನು 7.5 ಮೀಟರ್‌ಗೆ ಹೆಚ್ಚಿಸುವ ಕಾಮಗಾರಿಯನ್ನು ತ್ವರಿತವಾಗಿ ಕಾರ್ಯಗತ ಗೊಳಿಸಬೇಕು.



ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳ ಅನುಷ್ಠಾನ ಸಂಬಂಧ ಸಂಸದ ಯದುವೀರ್ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಸಲ್ಲಿಸಿದರು. ಈ ವೇಳೆ ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಮುಖಂಡರಾದ ಗಿರೀಶ್ ಪ್ರಸಾದ್, ಎಸ್.ಕೆ.ದಿನೇಶ್, ಸೋಮಶೇಖರ್ ರಾಜು, ಕಿರಣ್ ಗೌಡ, ಪರಮೇಶ್ ಗೌಡ, ನಂಜಪ್ಪ, ಬ್ರಹ್ಮಚಾರ್, ರಾಜೇಶ್, ಅಶೋಕ್ ಇತರರು ಉಪಸ್ಥಿತರಿದ್ದರು.

ಸದಾ ವಾಹನ ದಟ್ಟಣೆ ಇರುವ ಕೆಆರ್‌ಎಸ್ ಮುಖ್ಯ ರಸ್ತೆ ಕಿರಿದಾಗಿದ್ದು, ರಸ್ತೆ ವಿಸ್ತರಣೆಗೆ ಮುಂದಾಗಬೇಕು. ಮೇಟಗಳ್ಳಿಯ ರಾಯಲ್ ಇನ್ ಹೋಟೆಲ್ ಬಳಿ ಪ್ರಸ್ತಾವಿತ ರಸ್ತೆ ಕೆಳ ಸೇತುವೆ(ಆರ್‌ಯುಬಿ) ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕು. ಹೊರ ವರ್ತುಲ ರಸ್ತೆ(ಎನ್‌ಎಚ್–275ಕೆ) ಉದ್ದಕ್ಕೂ ನಾಲ್ಕು ಆರ್‌ಯುಬಿಗಳ ಭಾಗವಾಗಿರುವ ಮೈಸೂರು–ಅರಸೀಕೆರೆ ಬ್ರಾಡ್ ಗೇಜ್ ವಿಭಾಗದ ಲೆವೆಲ್ ಕ್ರಾಸಿಂಗ್ ಅನ್ನು ತೆಗೆದು ಹಾಕಲು ಕ್ರಮ ವಹಿಸಬೇಕು.

ಯಶವಂತಪುರ–ಬಾರ್ಮೆರ್–ಯಶವಂತಪುರ ಸಾಪ್ತಾಹಿಕ ರೈಲು(weekly train–ರೈಲು ಸಂಖ್ಯೆ 14805/06) ಹಾಗೂ ಕೆಎಸ್‌ಆರ್ ಬೆಂಗಳೂರು ಸಿಟಿ ಜಂಕ್ಷನ್ ಜೋದ್‌ಪುರ ದ್ವಿ–ಸಾಪ್ತಾಹಿಕ ರೈಲು (Bi-weekly train–ರೈಲು ಸಂಖ್ಯೆ 16508/09) ಅನ್ನು ಮೈಸೂರಿನವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳ ಬೇಕೆಂಬ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಂಸದರಿಗೆ ಧನ್ಯವಾದಗಳನ್ನು ಸಲ್ಲಿಸುವುದಾಗಿ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ವಾರದಿಂದ ಕೋಟ್ಪಾ ಕಾಯ್ದೆಯಡಿ 711, ಕಿರಿಕಿರಿ ಮಾಡಿದವರ ವಿರುದ್ಧ 1273 ದಾಖಲು

ಮಾದಕ ವಸ್ತು ಸೇವನೆ ಪ್ರಕರಣದಲ್ಲಿ 12 ಜನ ಆರೋಪಿಗಳ ದಸ್ತಗಿರಿ...

ಮೈಸೂರು ನಗರದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಸಂಬಂಧ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದ್ದು, ಜ.15 ರಿಂದ ಜ.22ರವರೆಗೆ 4 ಮಾದಕ ವಸ್ತು ಅಮಾನತು ಪ್ರಕರಣಗಳನ್ನು ದಾಖಲಿಸಿ 347 ಗ್ರಾಂ ಗಾಂಜಾ, 34 ಗ್ರಾಂ ಎಂ.ಡಿ.ಎಂ.ಎ ಮತ್ತು 12 ಗ್ರಾಂ ಹೈಡ್ರೋ ಗಾಂಜಾವನ್ನು ಅಮಾನತುಪಡಿಸಲಾಗಿದೆ. ಹಾಗೆಯೇ ಮಾದಕ ವಸ್ತು ಸೇವನೆ ಕುರಿತು 5 ಪ್ರಕರಣ ದಾಖಲಾಗಿದ್ದು, ಒಟ್ಟು 9 ಪ್ರಕರಣಗಳಲ್ಲಿ 12 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ.

ಮೈಸೂರು, ಜ.23(ಎಂಕೆ)– ಮೈಸೂರು ನಗರದಲ್ಲಿ ವಿಶೇಷ ಕಾರ್ಯಾಚರಣೆ ಕೈಗೊಂಡಿರುವ ನಗರ ಪೊಲೀಸರು, ಕಳೆದೊಂದು ವಾರದಲ್ಲಿ ಕೋಟ್ಪಾ ಕಾಯ್ದೆಯಡಿ 711 ಪ್ರಕರಣ, ಸಾರ್ವಜನಿಕ ಸ್ಥಳಗಳಲ್ಲಿ ಕಿರಿಕಿರಿಯನ್ನುಂಟು ಮಾಡಿದವರ ವಿರುದ್ಧ 1273 ಲಘು ಪ್ರಕರಣ, ಐಎಂವಿ ಕಾಯ್ದೆಯಡಿ ಹೆಲ್ಮೆಟ್ ಧರಿಸದಿರುವವರ ವಿರುದ್ಧ 1510 ಹಾಗೂ ನಕಲಿ ನಂಬರ್ ಪ್ಲೇಟ್ ಅಳವಡಿಸಿದ್ದವರ ವಿರುದ್ಧ 257 ಪ್ರಕರಣ ದಾಖಲಿಸಿದ್ದಾರೆ.

ಮೈಸೂರು ನಗರಾದ್ಯಂತ ಜ.15 ರಿಂದ 22ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಕೋಟ್ಪಾ ಕಾಯ್ದೆಯಡಿ ಜ.15 ರಂದು 39 ಪ್ರಕರಣ, ಜ.16 ರಂದು 95, ಜ.17 ರಂದು 65, ಜ.18 ರಂದು 49, ಜ.19 ರಂದು 142, ಜ.20 ರಂದು 109, ಜ.21 ರಂದು 90 ಹಾಗೂ ಜ.22 ರಂದು 122 ಪ್ರಕರಣ ಸೇರಿ ಒಟ್ಟು 711 ಪ್ರಕರಣ ದಾಖಲಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಮುಜುಗರ ಅಥವಾ ಕಿರಿಕಿರಿಯನ್ನುಂಟು ಮಾಡುತ್ತಿದ್ದವರ ವಿರುದ್ಧ 1,273 ಪಿಟಿ ಕೇಸ್ ದಾಖಲಾಗಿದ್ದು, ಸಂಚಾರ ನಿಯಮ ಉಲ್ಲಂಘಿಸಿ ಹೆಲ್ಮೆಟ್ ಧರಿಸದೆ ದ್ವಿಚಕ್ರ ಸವಾರರ ವಿರುದ್ಧ 1510 ಪ್ರಕರಣ ಹಾಗೂ ನಂಬರ್ ಪ್ಲೇಟ್ ಇಲ್ಲದ ಮತ್ತು ನಕಲಿ ನಂಬರ್ ಅಳವಡಿಸಿಕೊಂಡಿದ್ದವರ ವಿರುದ್ಧವೂ 257 ಕೇಸ್ ದಾಖಲಿಸಿ, ದಂಡ ವಸೂಲಿ ಮಾಡಲಾಗಿದೆ.

12 ಸಾವಿರ ಪಿಟಿ ಕೇಸ್: 2025ರ ಅ.12 ರಿಂದ ಮೈಸೂರು ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಅಕ್ಟೋಬರ್‌ನಿಂದ ಇಲ್ಲಿಯವರೆಗೆ 12 ಸಾವಿರ ಪಿಟಿ ಕೇಸ್ ಮತ್ತು 9,800 ಕೋಟ್ಪಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದೇವೆ ಎಂದು ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಎನ್‌ಡಿಪಿಎಸ್(ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ) ಕೇಸ್‌ಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಗಮನಹರಿಸಲಾಗುತ್ತಿದೆ. ಪ್ರತಿದಿನ ಸಂಜೆ 6 ರಿಂದ ರಾತ್ರಿ 11 ಗಂಟೆಯವರೆಗೆ ನಗರದ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿಯೂ ಎಸಿಪಿಗಳ ನೇತೃತ್ವದಲ್ಲಿ ಪಿಎಸ್‌ಐ ಟೀಂ, ಕಮಾಂಡೋ ಟೀಂ ಸೇರಿದಂತೆ 20–25 ಮಂದಿ ಅಧಿಕಾರಿ–ಸಿಬ್ಬಂದಿಗಳಿಂದ ಗಸ್ತು ನಡೆಸಲಾಗುತ್ತಿದೆ. ಅದೇ ವೇಳೆ ನಂಬರ್ ಪ್ಲೇಟ್ ಇಲ್ಲದ ಮತ್ತು ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿರುವವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ.

–ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತರು

ಗೋಡೆ ಮೇಲಿಂದ ಬಿದ್ದು ಪೇಂಟರ್ ಸಾವು

ಇಂಜಿನಿಯರ್ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜ.23(ಎಂಕೆ)– ಮೈಸೂರಿನ ಲಕ್ಷ್ಮಿಪುರಂ ನಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಗೋಡೆಯ ಕ್ರ್ಯಾಕ್ ಸೀಲ್(ಬಿರುಕು) ಚೆಕ್ ಮಾಡುತ್ತಿದ್ದ ಕೂಲಿ ಕಾರ್ಮಿಕನೋರ್ವ ಮೇಲಿಂದ ಬಿದ್ದು ಮೃತಪಟ್ಟಿರುವ ಘಟನೆ ನಡೆದಿದೆ.

ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ಎನ್. ಸತೀಶ(47) ಮೃತ ದುರ್ದೈವಿ. ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದ ಸತೀಶ್, ಜ.22 ರಂದು ಎಂದಿನಂತೆ ಕೆಲಸಕ್ಕೆಂದು ಲಕ್ಷ್ಮಿಪುರಂ ನಲ್ಲಿರುವ ಅಪಾರ್ಟ್‌ಮೆಂಟ್ ವೊಂದಕ್ಕೆ ತೆರಳಿದ್ದು, ಮಧ್ಯಾಹ್ನ 1 ಗಂಟೆ ಸುಮಾರಿಗೆ ಇಂಜಿನಿಯರ್ ದೀಪಕ್ ನೀಡಿದ ಸೂಚನೆ ಮೇರೆಗೆ ಅಪಾರ್ಟ್‌ಮೆಂಟ್‌ನ ಹೊರ ಭಾಗದ ಗೋಡೆಯಲ್ಲಿನ ಬಿರುಕುಗಳನ್ನು ಪರಿಶೀಲಿಸಿ, ಪೇಂಟಿಂಗ್ ಮಾಡಲು ಮುಂದಾಗಿದ್ದಾರೆ.

ಮರದ ಹಲಗೆಗೆ ಹಗ್ಗಕಟ್ಟಿಕೊಂಡು ಅಪಾರ್ಟ್‌ಮೆಂಟ್‌ನ ಮೇಲಿಂದ ಗೋಡೆಯಲ್ಲಿನ ಬಿರುಕುಗಳನ್ನು ಪರಿಶೀಲಿಸುತ್ತಾ ಕೆಳಗೆ ಬರುತ್ತಿದ್ದ ವೇಳೆ ಹಗ್ಗ ತುಂಡಾಗಿ ಸುಮಾರು 50 ಅಡಿ ಎತ್ತರದಿಂದ ಸತೀಶ್ ಕೆಳಗೆ ಬಿದ್ದ ಪರಿಣಾಮ ತಲೆಯಲ್ಲಿ ತೀವ್ರ ರಕ್ತಸ್ರಾವವಾಗಿದೆ. ಕೂಡಲೇ ಅವರನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಈ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಸಂಕಲ್ಪ ಅಪಾರ್ಟ್‌ಮೆಂಟ್‌ನ ಇಂಜಿನಿಯರ್ ದೀಪಕ್ ವಿರುದ್ಧ ಪ್ರಕರಣ ದಾಖಲಾಗಿದೆ.

ಸಂಸತ್ ಅನುಮೋದನೆ, ರಾಷ್ಟ್ರಪತಿಗಳ ಅಂಕಿತ ಹಾಕಿರುವ ಕಾಯ್ದೆಗೆ ವಿರೋಧ ಸರಿಯೇ...!

ರಾಜ್ಯಪಾಲರಿಂದ ಭಾಷಣ ಮಾಡಿಸಲು ಮುಂದಾಗಿದ್ದ ಸರ್ಕಾರದ ನಿಲುವಿಗೆ ಸುರೇಶ್‌ಕುಮಾರ್ ಟೀಕೆ

ಬೆಂಗಳೂರು, ಜ.23(ಕೆಎಂಶಿ)– ಲೋಕಸಭೆ, ರಾಜ್ಯಸಭೆಯಲ್ಲಿ ಅನುಮೋದನೆಯಾಗಿ ರಾಷ್ಟ್ರಪತಿಗಳಿಂದ ಅಂಗೀಕಾರವಾಗಿರುವ ಕಾಯ್ದೆ ವಿರುದ್ಧ ರಾಜ್ಯಪಾಲರಿಂದ ಭಾಷಣ ಮಾಡಿಸಲು ಮುಂದಾಗಿದ್ದ ಆಡಳಿತ ಪಕ್ಷದ ಧೀರತ್ವ, ವೀರತ್ವ, ಭಂಡತನ ಮೆಚ್ಚಲೇಬೇಕು ಎಂದು ಮಾಜಿ ಸಚಿವರೂ ಆದ ಎಸ್. ಸುರೇಶ್‌ಕುಮಾರ್ ವಿಧಾನ ಸಭೆಯಲ್ಲಿಂದು ಟೀಕಿಸಿದರು.

ರಾಜ್ಯಪಾಲರು ಕಡ್ಡಾಯವಾಗಿ ಭಾಷಣ ಓದಲೇಬೇಕು ಎಂಬುದಿಲ್ಲ, ಮೊದಲ ಮತ್ತು ಕೊನೆಯ ವಾಕ್ಯ ವಾಚಿಸಿದರೆ ಓದಿದ ಹಾಗೆ ಆಗುತ್ತದೆ. ಕಾನೂನು ತಜ್ಞರೂ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯಪಾಲರಿಗೂ ವಿವೇಚನಾ ಅಧಿಕಾರವಿರುತ್ತದೆ ಎಂದು ಸಂವಿಧಾನದ ಪರಿಚ್ಛೇದಗಳನ್ನು ಉಲ್ಲೇಖಿಸಿ ಸಮರ್ಥಿಸಿಕೊಂಡರು.

ರಾಜ್ಯಪಾಲರು ಸಂವಿಧಾನ ಉಲ್ಲಂಘಿಸಿದ್ದಾರೆ ಎನ್ನುವ ಆಡಳಿತ ಪಕ್ಷದವರು, ರಾಜ್ಯಪಾಲರಿಂದ ನನ್ನ ಸರ್ಕಾರ ಎಂಬುದಾಗಿ ಹೇಳಿಸುವ ಬದಲು ಮೈ ರೂಲಿಂಗ್ ಪಾರ್ಟಿ ಎಂದು ಹೇಳಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು ವ್ಯಂಗ್ಯವಾಡಿದರು.

ರಾಜ್ಯಪಾಲರ ಭಾಷಣದಲ್ಲಿ ಈಗಾಗಲೇ ಕಾಯ್ದೆಯಾಗಿ ಜಾರಿಯಲ್ಲಿರುವ ವಿಚಾರದ ವಿರುದ್ಧ ಭಾಷಣ ಮಾಡಿಸಲು ಮುಂದಾಗಿದ್ದು ಸರಿಯಲ್ಲ ಎಂದರು.

ಇದಕ್ಕೆ ದನಿಗೂಡಿಸಿದ ವಿರೋಧಪಕ್ಷದ ನಾಯಕ ಆರ್. ಅಶೋಕ್, 2010ರಲ್ಲಿ ಆಗಿನ ರಾಜ್ಯಪಾಲರಾಗಿದ್ದ ಹಂಸ ರಾಜ್ ಭಾರದ್ವಾಜ್ 6 ಸಾಲಿನ ಭಾಷಣ ಮಾಡಿದ್ದರು. ರಾಜ್ಯಪಾಲರಾಗಿದ್ದ ಖುರ್ಷಿದ್ ಅಲಂ ಖಾನ್ ಅವರು 3 ಪ್ಯಾರಾ ಓದಿದ್ದರು, ಇದು ಇದೇ ಸದನದಲ್ಲಿ ನಡೆದಿದೆ.

ದೇಶದಲ್ಲಿ ಇಂತಹ 10 ದಾಖಲೆ ಕೊಡಬಹುದು. ಮುಖ್ಯಮಂತ್ರಿಗಳು ಇಲ್ಲಿ ಮಾತ ನಾಡುವಾಗ ಒಂದು, ಹೊರಗಡೆ ಮಾತನಾಡುವಾಗ ಮತ್ತೊಂದು ಹೇಳುತ್ತಾರೆ. ಸದನದ ಹೊರಗೆ ರಾಜ್ಯಪಾಲರು ಭಾಷಣ ಮಂಡಿಸಿಲ್ಲ ಎಂದು ಹೇಳಿದ್ದಾರೆ. ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅದರ ಮೇಲೆ ನಾವು ಚರ್ಚೆ ಮಾಡುತ್ತೇವೆ. ಆದರೆ ರಾಜ್ಯಪಾಲರಿಗೆ ಅಡ್ಡಿ ಮಾಡಿದ್ದು ಸರ್ಕಾರದ ತಪ್ಪಲ್ಲವೇ ಎಂದು ಪ್ರಶ್ನಿಸಿದರು.



ಎಸ್.ಸುರೇಶ್‌ಕುಮಾರ್

ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡುವುದು ಕಡ್ಡಾಯ. ರಾಜ್ಯಪಾಲರ ವಿವೇಚನೆಯಿಂದ ಸಂವಿಧಾನ ಉಲ್ಲಂಘನೆ ಆಗಬಾರದು.

ಧಾರಾವಾಹಿ ರೀತಿಯಲ್ಲಿ ನಿನ್ನೆಯಿಂದ ನಡೆದಿರುವ ವಿಚಾರದ ಬಗ್ಗೆ ಸಭಾಧ್ಯಕ್ಷರು ರೂಲಿಂಗ್ ಕೊಡುವಾಗ ಸಂವಿಧಾನವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಂವಿಧಾನ ಉಲ್ಲಂಘನೆ ಮಾಡಿದ್ದಾರೆ ಎಂಬುದನ್ನು ಗಮನಿಸಬೇಕು ಎಂದರು. ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣ ನಂತರದ ಸನ್ನಿವೇಶ ಕುರಿತು ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಪರ–ವಿರೋಧ ನಿಲುವುಗಳನ್ನು ಆಲಿಸಿದ್ದು, ಇದು ಗಂಭೀರ ವಿಚಾರವಾಗಿದೆ. ಸುದೀರ್ಘವಾಗಿ ಪರಿಶೀಲಿಸಬೇಕಿದ್ದು, ಮುಂದಿನ ದಿನಗಳಲ್ಲಿ ರೂಲಿಂಗ್ ನೀಡಲಾಗುವುದು ಎಂದರು.

ಪತ್ರಿಕಾ ಪ್ರಕಟಣೆ

ಮೈಸೂರು ಸಿಟಿ,ಖಿಲ್ಲೆ ಮೊಹಲ್ಲಾ, ಶಂಕರ ಮಠ ರಸ್ತೆ, ನಂಬರ್ 67 /A ಈ ವಿಳಾಸದಲ್ಲಿ ಕಛೇರಿ ಹೊಂದಿರುವ ಸಮೃದ್ಧಿ ಪ್ರಾಪರ್ಟೀಸ್ ಸಂಸ್ಥೆಯವರು ಮೈಸೂರು ತಾಲೂಕು ಇಲವಾಲ ಗ್ರಾಮದ ಲೇಟ್ ದ್ಯಾವಪ್ಪ @ ದೇವಪ್ಪ ಬಿನ್ ಲಿಂಗಣ್ಣರವರ ಮಕ್ಕಳಾದ ಲೇಟ್ ನಿಂಗಪ್ಪ, ಸೋಮಣ್ಣ ಲೇಟ್ ನಿಂಗಣ್ಣ ಮತ್ತು ಗೌರಮ್ಮರವರುಗಳಿಗೆ ಸೇರಿದ ಈ ಕೆಳಗೆ ವಿವರಿಸಿದ ಕೃಷಿ ಜಮೀನುಗಳನ್ನು ಕ್ರಯಕ್ಕೆ ಪಡೆದುಕೊಳ್ಳಲು ಪರಸ್ಪರ ಚರ್ಚಿಸಿ, ಈ ಸಂಬಂಧ ಕ್ರಯದ ಕರಾರು ಮಾಡಿಕೊಂಡಿರುತ್ತಾರೆ. ಈ ಸ್ವತ್ತುಗಳಲ್ಲಿ ಭೂಮಾಲಿಕರಾದ ಇವರುಗಳಲ್ಲದೆ, ಮತ್ಯಾರಿಗಾದರೂ ಯಾವುದೇ ರೀತಿಯ ಹಿತಾಸಕ್ತಿಗಳು, ವಿವಾದಗಳು, ತಂಟೆ ತಕರಾರುಗಳು ಇದ್ದಲ್ಲಿ ಸಂಬಂಧ ಪಟ್ಟ ದಾಖಲೆಗಳು ಮತ್ತು ಸಂಪೂರ್ಣ ವಿವರಗಳೊಡನೆ ಈ ಕೆಳಗೆ ಸಹಿ ಮಾಡಿರುವ ವಕೀಲರನ್ನು, ಈ ಪ್ರಕಟಣೆಯ 15 ದಿನಗಳ ಒಳಗಾಗಿ, ಖುದ್ದಾಗಿ ಅವರ ಕಛೇರಿ ವಿಳಾಸಕ್ಕೆ ಭೇಟಿ ನೀಡಿ ಈ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಮ್ಮ ಹಿತಾಸಕ್ತಿಗಳು, ವಿವಾದಗಳು, ತಂಟೆ ತಕರಾರುಗಳು ಇದ್ದಲ್ಲಿ ತಿಳಿಸಬೇಕೆಂದು ಕೋರಲಾಗಿದೆ. ಕ್ರಯದ ಕರಾರಿಗೆ ಸಂಬಂಧಿಸಿದ ಸ್ವತ್ತುಗಳ ವಿವರ ಕೆಳಕಂಡಂತಿವೆ. ಮೈಸೂರು ತಾಲೂಕು, ಇಲವಾಲ ಹೋಬಳಿ ನಾಗವಾಲ ಗ್ರಾಮಕ್ಕೆ ಸೇರಿದ ಸ್ವತ್ತುಗಳು

1) ಸರ್ವೆ ನಂ 112/1 ವಿಸ್ತೀರ್ಣ 0 ಎಕರೆ 02.00 ಗುಂಟೆ. 2) ಸರ್ವೆ ನಂ 112/3 ವಿಸ್ತೀರ್ಣ 0 ಎಕರೆ 27.12 ಗುಂಟೆ. 3) ಸರ್ವೆ ನಂ 112/4 ವಿಸ್ತೀರ್ಣ 0 ಎಕರೆ 20.12 ಗುಂಟೆ. 4) ಸರ್ವೆ ನಂ 112/5 ವಿಸ್ತೀರ್ಣ 1 ಎಕರೆ 10.12 ಗುಂಟೆ. 5) ಸರ್ವೆ ನಂ 112/6 ವಿಸ್ತೀರ್ಣ 1 ಎಕರೆ 10.12 ಗುಂಟೆ. 6) ಸರ್ವೆ ನಂ 112/7 ವಿಸ್ತೀರ್ಣ 1 ಎಕರೆ 10.08 ಗುಂಟೆ. 7) ಸರ್ವೆ ನಂ 112/8 ವಿಸ್ತೀರ್ಣ 0 ಎಕರೆ 24.12 ಗುಂಟೆ. 8) ಸರ್ವೆ ನಂ 112/9 ವಿಸ್ತೀರ್ಣ 0 ಎಕರೆ 24.04 ಗುಂಟೆ. 9) ಸರ್ವೆ ನಂ 113/6 ವಿಸ್ತೀರ್ಣ 0 ಎಕರೆ 09.08 ಗುಂಟೆ. 10) ಸರ್ವೆ ನಂ 113/7 ವಿಸ್ತೀರ್ಣ 0 ಎಕರೆ 09.08 ಗುಂಟೆ. 11) ಸರ್ವೆ ನಂ 113/8 ವಿಸ್ತೀರ್ಣ 0 ಎಕರೆ 09.08 ಗುಂಟೆ. 12) ಸರ್ವೆ ನಂ 113/9 ವಿಸ್ತೀರ್ಣ 0 ಎಕರೆ 09.08 ಗುಂಟೆ

Sd/- H.B. GANGE GOWDA
B.V.Sc, M.A, LLB.
Advocate, Roll No.
KAR/1734/2022 No.2, Survey
No.84/7, II Cross, KBL Layout,
Alanahally, MYSURU.
ದಿನಾಂಕ : 21/1/2026 Mob:8971133060

MysoreSilk ಕರ್ನಾಟಕ ರೇಷ್ಮೋದ್ಯಮಗಳ ನಿಗಮ
ರೇಷ್ಮೆ ನೂಲು ತೆಗೆಯುವ ಘಟಕ, ಟಿ. ನರಸೀಪುರ
Phone: 08224-261226 Email: gmtnp@ksicsilk.com
ಸಂಖ್ಯೆ: ಕೆಎಸ್‌ಐಸಿ:ರೇನೂಘ:ತಿನಪು:2025–26/388 ದಿನಾಂಕ: 22.01.2026

ಟೆಂಡರ್ ಹಾಗು ಹರಾಜು ಪ್ರಕಟಣೆ

ಸಮಸ್ತ ಟೆಂಡರ್‌ದಾರರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಕಾರ್ಖಾನೆಯಲ್ಲಿ ದಿನಾಂಕ: 01.03.2026 ರಿಂದ 28.02.2027 ರ ವರೆಗೆ ಬೇಸಿನ್‌ಗಳಿಂದ ಶೇಖರಿಸಲ್ಪಡುವ ಡೆಡ್ ಪ್ಯೂಪ ಮಾರಾಟ ಮಾಡಲು ಮೆ॥ ಕೆ.ಎಸ್.ಪಿ.ಸಿ.ಬಿ, ಮೈಸೂರು ಇವರಿಂದ ವೈಜ್ಞಾನಿಕವಾಗಿ, ಸಂಸ್ಕರಣೆ ಮಾಡಲು ದೃಢೀಕೃತ ಪ್ರಮಾಣ ಪತ್ರ ಹೊಂದಿರುವವರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇಷ್ಟವುಳ್ಳ ಟೆಂಡರ್‌ದಾರರು ರೂ.50,000 (ಐವತ್ತು ಸಾವಿರ ರೂಪಾಯಿಗಳು ಮಾತ್ರ) ನಗದು ಠೇವಣಿ ಇಡಬೇಕಾಗುತ್ತದೆ. ಹಾಗೂ ಟೆಂಡರ್‌ದಾರರು ನಿಬಂಧನೆ ಹಾಗೂ ಹೆಚ್ಚಿನ ವಿವರಗಳನ್ನೊಳಗೊಂಡ ಕರಾರು ಹಾಗು ನಿಬಂದನೆಗಳ ಪಟ್ಟಿಯನ್ನು ರೂ.200.00 (ತೆರಿಗೆ ಪ್ರತ್ಯೇಕ) ಗಳನ್ನು ನಗದುರೂಪದಲ್ಲಿ ಪಾವತಿಸಿ ದಿ: 05.02.2026 ರಿಂದ ಪಡೆದು ಕೊಳ್ಳಬಹುದಾಗಿದೆ. ಕಾರ್ಖಾನೆಯ ಯಾವುದೇ ಕೆಲಸದ ದಿನಗಳಂದು ಅಂದರೆ ಬೆಳಿಗ್ಗೆ 9.00ಗಂಟೆಯಿಂದ 4.00 ಗಂಟೆಯವರೆಗೆ ಖುದ್ದಾಗಿ ಅಥವಾ ಪತ್ರದ ಮೂಲಕ ಸಂಪರ್ಕಿಸಬಹುದು. ಅರ್ಜಿ ಪಡೆಯಲು ಕೊನೆಯ ದಿ: 06.02.2026 ಬೆಳಿಗ್ಗೆ 10.00 ಗಂಟೆ. ಮೊಹರಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿ: 06.02.2026 ಬೆಳಿಗ್ಗೆ 11.00 ಗಂಟೆ. ಅದೇ ದಿನ ಬೆಳಿಗ್ಗೆ 12.00 ಗಂಟೆಗೆ ಹರಾಜನ್ನು ನಡೆಸಿ ನಂತರ ಟೆಂಡರ್‌ಗಳನ್ನು ತೆರೆಯಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು, ರೇಷ್ಮೆ ನೂಲು ತೆಗೆಯುವಘಟಕ, ತಿ.ನರಸೀಪುರ.

DIPR/DDMYS/1549/KSMCA/878/2025-26